and order and in order to give effect to the Prohibitory Order shooting had to be resorted to. In such cases where no more than the maintenance of law and order is involved, an adjournment motion will not be admissible.

I am not also quite clear if the matter is not covered by the provision of *sub-judice*. It is admitted that certain cases have been filed against some persons and the question of shooting which is the subject matter of the adjournment motion and the charges against the persons concerned are so intimately connected that the subject matter of the adjournment motion may be expected to form part of the evidence in the case. But I do not rest my decision only on this ground but I am merely setting out another objection to its admissibility.

In these circumstances I hold that the adjournment motion is not in order and I disallow it.

Now the debate on the Rajpramukh's Address will continue.

Change in Programme of Business.

Sri J. MOHAMED IMAM (Jagalur)—I want certain information from the Leader of the House. According to the programme, they have declared one day as holiday, that is, the 16th. Many people have come from other places. Apart from Monday the 16th, I would request the Leader of the House to agree that Tuesday the 17th also may be declared as a holiday for the convenience of mofussil members.

Sri A. G. RAMACHANDRA RAO (Leader of the House).—Monday is already a holiday. If the House is willing to work on the 22nd which is a Sunday, the Government will have no objection. Otherwise, the programme will be upset.

ಶ್ರೀ ಜೆ. ಮಹಮದ್ ಇಮಾಂ.—ಅಧ್ಯಕ್ಷರೇ, ನಮಗೆಲ್ಲಾ ಗೊತ್ತಿರುವಹಾಗೆ, ಬರುವ ಸೋಮವಾರ ಯುಗಾದಿ ಬರುತ್ತದೆ. ಈಗಿನ ನಮ್ಮ ಪ್ರೋಗ್ರಾಂ ಪ್ರಕಾರ ಹಬ್ಬಕ್ಕಾಗಿ ಒಂದು ದಿನ ಮಾತ್ರ ರಜಾ ಕೊಟ್ಟಿದೆ. ಈ ಸಭೆಗೆ ಅನೇಕ ಸದಸ್ಯರು ಬೇರೆ ಬೇರೆ ಊರುಗಳಿಂದ ಬಂದವರಾಗಿದ್ದಾರೆ. ಅವರು ಅಲ್ಲಿಗೆ ಹೋಗಿ ವಾಪಸು ಮಾರುದಿನವೇ ಬರಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಅಲ್ಲದೆ ಈ ಹಬ್ಬವಿರುವುದು ನ್ಯಾಯವಾಗಿ ಮೂರು ದಿನ; ಮೊದಲನೆಯ ದಿನ ಚಂದ್ರ ದರ್ಶನ, ಎರಡನೆಯದಿನ ಹೋಳಿಗೆಯ ಹಬ್ಬ, ಮೂರನೆಯ ದಿವಸ ಹಬ್ಬದ ಕರಿ ಎಂದು. ಆದ್ದರಿಂದ ಸೋಮವಾರ ರಜಾ ಕೊಟ್ಟಿರುವುದಲ್ಲದೆ ಮಂಗಳವಾರವೂ ಈ ಸಭೆಗೆ ರಜಾ ಎಂದು ಘೋಷಿಸಿದರೆ ಬಹಳ ಒಳ್ಳೆಯದು. ಮಾನ್ಯ ಸಭಾ ನಾಯಕರು ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ನಂಬಿದ್ದೇನೆ. ಯಾವುದನ್ನೂ ನಿಖರವಾಗಿ ಈಗಲೇ ಹೇಳಿದರೆ ನಮ್ಮ ಪ್ರೋಗ್ರಾಮನ್ನು ಹೊಂದಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

Sri A. G. RAMACHANDRA RAO.—We will consider that.

Mr. SPEAKER.—That may be done.

Sri A. G. RAMACHANDRA RAO.—Yes.

Mr. SPEAKER.—The House will not sit on the 17th. That is the understanding.

Sri A. G. RAMACHANDRA RAO.—On the 12th, there is voting of demands. We will put it off by two days and take it up. General discussion on the Budget we will have from to-morrow, that is, from the 12th, and postpone the consideration of demands to one or two days later. We will work on Sunday the 22nd.

Sri H. K. VEERANNA GOWDA (Maddur).—Instead of sitting on Sunday the 22nd, we will have a sitting in the morning on Sunday the 15th.

Mr. SPEAKER.—The point is this. The Hon'ble Member knows that on Saturday morning, there will be a sitting. In the afternoon, mofussil members will naturally like to leave the place. From Saturday afternoon, they will have 3½ days continuously. So, it is understood we will have general discussion on the Budget to-morrow.

DEBATE ON THE MOTION OF THANKS.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಸ್ವಾಮಿ, ನಿನ್ನೆಯ ದಿವಸ ಶ್ರೀಮಾನ್ ಸಿದ್ದಲಿಂಗಯ್ಯನವರು ಮಂಡಿಸಿದ ವಂದನಾ ಸಮರ್ಪಣೆಯ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ. ರಾಜಪ್ರಮುಖರ ಭಾಷಣವನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿದಲ್ಲಿ ಸರ್ಕಾರದಿಂದ ನಡೆಯಿರತಕ್ಕ ಎಲ್ಲ ಮುಖ್ಯ ವಿಚಾರಗಳನ್ನೂ ಅದರಲ್ಲಿ ವಿವರಣೆಮಾಡಿದ್ದಾರೆ. ಈ ಭಾಷಣದಲ್ಲಿ ಸುಮಾರು ಹತ್ತು ಭಾಗಗಳಿವೆ. ಮೊದಲನೆಯದಾಗಿ ಸಂಸ್ಕೃತಿ ಪ್ರಸಾರದ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಎರಡನೆಯದಾಗಿ ವಿದ್ಯಾಭ್ಯಾಸ ಕ್ರಮದ

(ಶ್ರೀ ಡಿ. ದೇವರಾಜ ಅರಸ್.)

ಸುಧಾರಣೆಗಳ ವಿಚಾರ, ಮೂರನೆಯದಾಗಿ ಆಹಾರ ನೀತಿಯ ವಿಚಾರ, ನಾಲ್ಕನೆಯದಾಗಿ ಐದು ವರ್ಷದ ಯೋಜನೆಯ ವಿಚಾರ, ಐದನೆಯದಾಗಿ ಸಾಮುದಾಯಿಕ ಯೋಜನೆಯ ವಿಚಾರ, ಆಮೇಲೆ ಡಿಸ್ಟ್ರಿಕ್ಟ್ ಬೋರ್ಡುಗಳ ಚುನಾವಣೆಗಳ ವಿಚಾರ, ಅನಂತರ ಮುನಿಸಿಪಾಲಿಟಿಗಳಿಗೆ ಗ್ರ್ಯಾಂಟುಗಳ ವಿಚಾರ, ಆಮೇಲೆ ಗ್ರಾಮಾಂತರಗಳಲ್ಲಿ ವ್ಯವಸಾಯಗಾರರಿಗೆ ಸಾಲಗಳನ್ನು ಕೊಡುವ ವಿಚಾರ, ನಿಮ್ನ ತರಗತಿಗಳವರಿಗೆ ವಾಸದ ಮನೆಗಳನ್ನು ಕಟ್ಟಿಸುವ ವಿಚಾರ, ಕೈಗಾರಿಕೆಗಳ ವಿಚಾರ, ಆಯವ್ಯಯಗಳ ವಿಚಾರ, ಕೊನೆಯದಾಗಿ ಮಸೂದಾ ಕಾನೂನುಗಳ ವಿಚಾರ—ಹೀಗೆ ಪ್ರಸ್ತಾಪಿಸಿದ್ದಾರೆ. ಈ ಭಾಷಣದಲ್ಲಿ ಒಂದು ವಿಶೇಷವೇನೆಂದರೆ ಸಂಸ್ಕೃತಿ ಪ್ರಸಾರದ ವಿಚಾರವಾಗಿ ಪ್ರಾರಂಭದಲ್ಲೇ ಪ್ರಸ್ತಾಪಮಾಡಿದ್ದಾರೆ. ಇದೊಂದು ವಿಶೇಷ ಸಂಗತಿ. ನೆನ್ನೆ ತಾನೇ ಮಾತನಾಡುತ್ತಾ, ಮಾನ್ಯ ಸ್ನೇಹಿತರಾದ ಲಿಂಗಣ್ಣನವರು ಸಂಸ್ಕೃತಿ ಪ್ರಸಾರ ಯೋಜನೆಗೆ ಹಣದ ಖರ್ಚಿನ ಆವಶ್ಯಕತೆಯಿದೆಯೆ, ಅಥವಾ ನಮ್ಮ ಸಂಸ್ಕೃತಿಯ ಮಟ್ಟ ಇಳಿದಿದೆಯೆ, ಇದನ್ನು ಪ್ರಚಾರ ಮಾಡುವ ಆವಶ್ಯಕತೆ ಇದೆಯೆ ಎಂದು ಮುಂತಾಗಿ ಪ್ರಸ್ತಾಪಮಾಡಿದರು. ಸಂಸ್ಕೃತಿಯ ಮಟ್ಟ ಒಂದು ವೇಳೆ ಇಳಿದುಹೋಗದಿದ್ದರೂ ಕೂಡ, ಇದು ಮಾನವನ ಸಮಾಜ ಬೆಳೆದಹಾಗೆಲ್ಲಾ ಅದರ ಜತೆಯಲ್ಲೇ ಬೆಳೆದುಕೊಂಡು ಹೋಗುವಂತಹ ಒಂದು ವಿಚಾರ. ಆದುದರಿಂದ ಯಾವ ದೇಶದಲ್ಲಾಗಲಿ ಸಂಸ್ಕೃತಿ 'culture' 'morals' ಎಂದು ಏನು ಹೇಳುತ್ತೇವೋ ಅದರ ಬೆಳವಣಿಗೆ ಬೇಡವೆಂದು ಯಾರೂ ಹೇಳುವುದಿಲ್ಲವೆಂದು ನಾನು ಭಾವಿಸುತ್ತೇನೆ. ನೆನ್ನೆ ತಾನೇ ಶ್ರೀಮಾನ್ ಸಿದ್ದಲಿಂಗಯ್ಯನವರು ಹೇಳಿದಹಾಗೆ, ನಾಸ್ತಿಕರೇ ಆಗಲಿ ಆಸ್ತಿಕರೇ ಆಗಲಿ, ಸಂಸ್ಕೃತಿ ಎಲ್ಲರಿಗೂ ಸಂಬಂಧಪಟ್ಟಿದೆ. ರಷ್ಯಾ ದೇಶದಲ್ಲಿಯೂ ಕೂಡ ರಷ್ಯನ್ ಕಲ್ಚರ್ ಎಂದು ಮಾತನಾಡುತ್ತಾರೆ; ಅದರ ಬೆಳವಣಿಗೆಯಾಗಬೇಕೆಂದು ಹೇಳುತ್ತಾರೆ. ಆದುದರಿಂದ ನಮ್ಮ ದೇಶದಲ್ಲಿ ಈ ಬೆಳವಣಿಗೆಗೆ ಸರ್ಕಾರದವರು ಗಮನಕೊಟ್ಟಿರುವುದು ಶ್ಲಾಘನೀಯವಾದ ವಿಚಾರ. ನಮ್ಮ ಸಂಸ್ಕೃತಿಯ ಮಟ್ಟ ಇಳಿದುಹೋಗಿದೆಯೆ ? ಎಂದು ಒಂದು ಪ್ರಶ್ನೆಯನ್ನು ಹಾಕಿದರು. ನನ್ನ ಅಭಿಪ್ರಾಯದಲ್ಲಿ, ಸಂಸ್ಕೃತಿಯ ಮಟ್ಟ ಕಡಮೆಯಾಗಿದೆಯೆಂದರೆ ತಪ್ಪಾಗಲಾರದು. ನಮ್ಮಲ್ಲಿ ಸಂಸ್ಕೃತಿಯ ಮಟ್ಟ ಇಳಿದು ಹೋಗಿದೆಯೆಂಬುದಕ್ಕೆ ಎರಡು ಸಣ್ಣ ಉದಾಹರಣೆಗಳನ್ನು ಕೊಟ್ಟು ವಿವರಿಸುತ್ತೇನೆ. ಒಂದು ಸಾರಿ ನಾನು ಮೈಸೂರಿನಿಂದ ಬೆಂಗಳೂರಿಗೆ ಅಸೆಂಬ್ಲಿಗೆ ಬರುವ ಸಂದರ್ಭದಲ್ಲಿ ರೈಲನ್ನು ಇಳಿದು ನಾವು ಇಳಿದುಕೊಳ್ಳುವ ಸ್ಥಳಕ್ಕೆ ಜಟಕಾ ಗಾಡಿಯ ಮೇಲೆ ಬರುತ್ತಿರುವಾಗ ರಸ್ತೆಯಲ್ಲಿ ಒಬ್ಬ ಮನುಷ್ಯ ಹೊಟ್ಟೆಗಿಲ್ಲದೆ ಒಂದುರೋಗದಿಂದ ನರಳುತ್ತಾ ರಾಜ ಮಾರ್ಗದಲ್ಲಿ, ನಡು ರಸ್ತೆಯಲ್ಲಿ ಬಿದ್ದಿದ್ದ. ಬಹಳ ದೂರದಿಂದಲೇ ನಾನು ಆ ಮಧ್ಯ ಮಾರ್ಗದಲ್ಲಿ ಏನಿರಬಹುದೆಂದು ದೃಷ್ಟಿಸುತ್ತಾ ಬಂದೆ. ಸಾವಾರು ನೂರಾರು ಕಾರುಗಳೂ ಸಾವಿರಾರೂ ಜನರೂ ಆ ಮಾರ್ಗದಲ್ಲಿ ಓಡಾಡುತ್ತಿದ್ದರೂ ಕೂಡ ಆ ಮನುಷ್ಯ ಏಕೆ ಬಿದ್ದಿದ್ದಾನೆ, ಅವನ ಕಷ್ಟ ಏನು ಎಂಬುದನ್ನು ಒಬ್ಬರಾದರೂ ಯೋಚನೆ ಮಾಡದೆ ಹೋಗುತ್ತಿದ್ದರು. ನಾನು ಹತ್ತಿರ ಹೋಗಿ ನೋಡಿದಾಗ ಆತ ಯಾವುದೋ ಹಳ್ಳಿಯಿಂದ ಬಂದಿದ್ದ ವ್ಯಕ್ತಿಯೆಂದು ತಿಳಿಯಿತು. ಅವನಿಗೆ ಮಾತನಾಡುವುದಕ್ಕೂ ಸಾಧ್ಯವಿರಲಿಲ್ಲ, ಬಹಳ ಸಂಕಟದಲ್ಲಿದ್ದ. ಸ್ವಲ್ಪ ನೀರನ್ನು ಕೊಟ್ಟು ಉಪಚಾರ ಮಾಡಿದ ಮೇಲೆ, ಆತ ಆಸ್ಪತ್ರೆಗೆ ಸೇರಬೇಕೆಂದು ಬಂದು ಅಲ್ಲಿ ಆತನನ್ನು ಸೇರಿಸದೆ ವಾಪಸು ಕಳುಹಿಸಿದುದರಿಂದ ಹೊಟ್ಟೆಗಿಲ್ಲದೆ ಬಿದ್ದಿದ್ದನೆಂದು ಗೊತ್ತಾಯಿತು. ಹಣ ಸಹಾಯ ಮಾಡಿದರೆ ಊರಿಗೆ ಹೋಗುತ್ತೇನೆಂದು ಹೇಳಿದ. ಇಷ್ಟು ಮಾತ್ರ ಸಭೆಯವರ ಗಮನಕ್ಕೆ ತಂದು ಅವರ ಅವಗಾಹನೆಗೆ ಬಿಟ್ಟು ಬಿಡುತ್ತೇನೆ. ಇದು ಸಂಸ್ಕೃತಿಯೋ ಅಥವಾ ಅಸಂಸ್ಕೃತಿಯೋ ಸುಸಂಸ್ಕೃತಿಯೋ ಎಂಬುದನ್ನು ಅವರೇ ಯೋಚನೆಮಾಡಲಿ. ಈ ರೀತಿ ಒಬ್ಬ ಮನುಷ್ಯ ಸಂಕಟದಲ್ಲಿ ರಾಜಮಾರ್ಗದಲ್ಲಿ ಬಿದ್ದಿದ್ದರೂ ಕೂಡ ಕರುಣೆಯಿಲ್ಲದೆ, ಲಕ್ಷ್ಯವೇ ಇಲ್ಲದೆ ಸಾವಿರಾರು ಜನರು ಹೋಗುತ್ತಿದ್ದರೆ, ಅದರಲ್ಲಿಯೂ ಇಂಥ ಪಟ್ಟಣಗಳಲ್ಲಿ ಇಂಥ ಘಟನೆಯಾಗುವುದೆಂದರೆ, ಇದು ಸಂಸ್ಕೃತಿಯೋ, ಅಸಂಸ್ಕೃತಿಯೋ, ಸುಸಂಸ್ಕೃತಿಯೋ ಎಂದು ಕೇಳುತ್ತೇನೆ.

ಆ ಮೇಲೆ ಈ ಸಂಸ್ಕೃತಿ ಪ್ರಸಾರದ ವಿಚಾರವಾಗಿ ಪ್ರಸ್ತಾಪಮಾಡುತ್ತ, ರಾಜಪ್ರಮುಖರು ಭಾಷಣದಲ್ಲಿ ಮೊದಲನೆಯದಾಗಿ ಒಂದು ಮಾತು ಅಪ್ಪಣೆ ಕೊಟ್ಟಿದ್ದಾರೆ. "My Government are as much interested in the moral welfare of the people as in their material well-being and are therefore deeply interested in carrying forward our ancient heritage" ಎಂದು ಹೇಳಿದ್ದಾರೆ. ನಮ್ಮ ಸಂಸ್ಕೃತಿ ಬೆಳೆಯಬೇಕಾದರೆ, ಅವರು ಹೇಳಿರುವ ಪ್ರಕಾರ, ನಮ್ಮ ಹಿಂದಿನ ಸಂಸ್ಕೃತಿಯನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾದದು ನಮ್ಮ ಕರ್ತವ್ಯ. ಸಂಸ್ಕೃತಿಯನ್ನು ಬೆಳೆಸಬೇಕಾದರೆ, ಅದಕ್ಕೆ ಆಧಾರವಾಗಿರುವ ಕೆಲವು ಗ್ರಂಥಗಳ ಹೆಸರುಗಳನ್ನು ಲೇಖಿಸಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ಹರಿದಾಸರ ಕೀರ್ತನೆಗಳು ಇತ್ಯಾದಿ ಗ್ರಂಥಗಳ ಹೆಸರು ಹೇಳಿದ್ದಾರೆ. ಮಹಾಭಾರತ ಮತ್ತು ರಾಮಾಯಣ ನಮ್ಮ ರಾಷ್ಟ್ರೀಯ ಗ್ರಂಥಗಳು ಎಂದರೆ ತಪ್ಪಾಗಲಾರದು. ಆದುದರಿಂದಲೇ ಆ ಗ್ರಂಥಗಳನ್ನು ಇಲ್ಲಿ ವಿವರಿಸಿದ್ದಾರೆ.

ವಿದ್ಯಾಭ್ಯಾಸ ಸುಧಾರಣೆಯ ವಿಚಾರವಾಗಿ ಮಾತನಾಡುತ್ತಾ ನೆನ್ನೆಯದಿವಸ ಶ್ರೀಮಾನ್ ಇಮಾಂರವರು ಒಂದು ಮಾತು ಹೇಳಿದರು. ಸರ್ಕಾರದವರು ದೇಶದಲ್ಲಿ material development ಮಾಡುವುದಕ್ಕೆ ತಮ್ಮ ಕೈಯಲ್ಲಿ ಸಾಧ್ಯವಿಲ್ಲದೆ ಮಹಾಭಾರತ, ರಮಾಯಣ ಇವುಗಳ ಹೆಸರುಗಳನ್ನು ಹೇಳಿ moral development ಮಾಡಲು ಹೊರಟಿದ್ದಾರೆ ಎಂದು ಹೇಳಿದರು. ವಿದ್ಯಾ ಸುಧಾರಣಾ ಸಮಿತಿಯ ಸದಸ್ಯರಾಗಿರುವ ಅವರು ಹೀಗೆ ಮಾತನಾಡಿದರಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತದೆ !

Sri J. MOHAMAD IMAM.—On a point of Information, Sir. This has nothing to do with the Education Reforms Committee.

ಶ್ರೀ ಡಿ. ದೇವರಾಜ ಅರಸ್.—ಅಂತೂ ಅವರ ಟೀಕೆಯಲ್ಲಿ ಆ ರೀತಿ ಹೇಳಿದರು.

ಶ್ರೀ ಜೆ. ಮಹಮ್ಮದ್ ಇಮಾಂ.—ವಿದ್ಯಾಭ್ಯಾಸ ಸುಧಾರಣೆಯ ಸಂಬಂಧವಾಗಿ ಹಾಗೆ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಇನ್ನೊಂದು ಸಂದರ್ಭದಲ್ಲಿ ಆಹಾರ ಸಾಮಗ್ರಿಗಳ ಬೆಲೆಯ ವಿಚಾರದಲ್ಲಿ, ಈಗ ಬೆಲೆಗಳನ್ನು ಹೆಚ್ಚು ಮಾಡಿದ್ದಾರೆ, ಇದು ತಪ್ಪು ಎಂದು ಹೇಳಿದುದು, ಈಗ inflation ಜಾಸ್ತಿಯಾಗಿಬಿಟ್ಟಿದೆಯೆಂದು ಹೇಳಿದರು. ಅವರು ಹೋದಸಾರಿ

ಇದೇ ರಾಜಪ್ರಮುಖರ ಭಾಷಣಕ್ಕೆ ವಂದನಾ ಸಮರ್ಪಣೆ ಮಾಡುವ ಸಂದರ್ಭದಲ್ಲಿ ಮಾತನಾಡುತ್ತಾ, ಕಂಟ್ರೋಲುಗಳು ಹೋಗಬೇಕು, inflation ಹೋಗುತ್ತಾ ಬಂದಿದೆ, ಹಣದ ಮುಗ್ಗಟ್ಟು ಜಾಸ್ತಿಯಾಗಿದೆ, ಆದುದರಿಂದ ಕಂಟ್ರೋಲುಗಳು ಹೋಗಬೇಕು ಎಂದು ಹೇಳಿದರು. ಕಂಟ್ರೋಲುಗಳಿಂದ ಬಹಳ ಅನಾನುಕೂಲ ಎಂದು ಅಪ್ಪಣೆ ಕೊಟ್ಟರು. ಆದರೆ ಈಗ inflation ಹೆಚ್ಚಾಗಿದೆ, ಆದುದರಿಂದ ಆಹಾರದ ಮೇಲಿನ ಬೆಲೆಗಳನ್ನು ಹೆಚ್ಚುಮಾಡುವುದು ಸರಿಯಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಜೆ. ಮಹಮದ್ ಇಮಾಂ.—ಕಂಟ್ರೋಲ್‌ಗಳನ್ನ ತೆಗೆಯಬೇಕೆಂದು ಹೇಳಿದೆ, ನಿಜ.

ಶ್ರೀ ಡಿ. ದೇವರಾಜ ಅರಸ್.—ತೆಗೆಯಬೇಕೆಂದು ಹೇಳಿದ್ದಾರೆ.

ಇನ್ನು ಈ ಐದು ವರ್ಷದ ಯೋಜನೆಯ ವಿಚಾರವಾಗಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಒಂದು ಕಡೆ ಟೀಕೆ ಮಾಡುತ್ತಾ, ಐದು ವರ್ಷದ ಯೋಜನೆ ಏನೂ ಪ್ರಯೋಜನವಾಗುವುದಿಲ್ಲ. ಅದು ಯಶಸ್ವಿಯಾಗಬೇಕಾದರೆ ಒಂದು 'ಸೈಕೊಲಾಜಿಕಲ್ ಅಟ್‌ಮಾಸ್‌ಫಿಯರ್' ಬೇಕು, ಅದಿಲ್ಲದೆ ಇದು ಯಶಸ್ವಿಯಾಗುವುದಿಲ್ಲ ಎಂದು ಶ್ರೀ ಪಟ್ಟಾಭಿರಾಮನ್‌ಅವರು ಅಪ್ಪಣೆ ಕೊಡಿಸಿದ್ದಾರೆ. ಯೋಜನೆಯಿಂದ ಪ್ರಯೋಜನವಿಲ್ಲ ಎಂದರು. ಅವರು ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ, ಅದರಲ್ಲಿ ಒಂದು ಯೋಜನೆಬೇಕೆಂದು ಹೇಳಿದ್ದಾರೆ. ಈ ಎರಡು ಅಭಿಪ್ರಾಯಗಳೂ ಒಂದಕ್ಕೊಂದು ಹೇಗೆ ಜೋಡಣೆಯಾಗುತ್ತವೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ ಐದು ವರ್ಷದ ಯೋಜನೆಯ ವಿಚಾರವಾಗಿ ಒಂದು ಅಭಿಪ್ರಾಯ ಹೇಳಿ, ಇನ್ನೊಂದು ಕಡೆ, ಕ್ಷಾಮ ನಿವಾರಣೆಗೆ ಒಂದು ಯೋಜನೆಯಿಲ್ಲ, ಇದರಲ್ಲಿ ಕಾಣುವುದಿಲ್ಲ ಎಂದು ಟೀಕೆ ಮಾಡಿದ್ದಾರೆ. ಒಂದಕ್ಕೊಂದು ಸಮಂಜಸವಾಗುವುದಿಲ್ಲ. ಆದುದರಿಂದ ಐದು ವರ್ಷದ ಯೋಜನೆ ಚೆನ್ನಾಗಿ ನಡೆಯಬೇಕಾದರೆ ಅದಕ್ಕೆ ಬೇಕಾದ ವಾತಾವರಣ ನಮ್ಮ ದೇಶದಲ್ಲಿಲ್ಲವೇ ಇದ್ದ ಪಕ್ಷದಲ್ಲಿ ಅಂಥಾ ವಾತಾವರಣವನ್ನು ನಾವೆಲ್ಲರೂ ಸೇರಿ ಒಮ್ಮನಸ್ಸಿನಿಂದ ಪ್ರಯತ್ನಮಾಡಿ ಉಂಟುಮಾಡಬೇಕೆಂದು ಮಹಾರಾಜರು ಅಪ್ಪಣೆಕೊಡಿಸಿದ್ದಾರೆ. ನಾನೂ ಕೂಡ ಅದೇ ಅಭಿಪ್ರಾಯ ಹೇಳುತ್ತೇನೆ. ಅಧ್ಯಕ್ಷರು ನನ್ನ ಮಾತನ್ನು ಹತ್ತು ನಿಮಿಷದಲ್ಲೇ ಮುಗಿಸಬೇಕೆಂದ ಕಾಲವನ್ನು ಗೊತ್ತುಮಾಡಿರುವುದರಿಂದ ನಾನು ಹೆಚ್ಚು ಹೇಳದೆ ಎರಡು ಮುಖ್ಯ ವಿಷಯಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ.

ಕೊನೆಯದಾಗಿ ಆ ಭಾಷಣದಲ್ಲಿ Welfare State ವಿಚಾರವಾಗಿ ಒಂದು ಮಾತು ಹೇಳಿದ್ದಾರೆ. "Finding new sources of revenue is as important and neces ary as the extention of services in a Welfare State. These go together." ಎಂದು ಹೇಳಿದ್ದಾರೆ. ಸ್ವಾಮಿ, ಹೊಸ ತೆರಿಗೆಗಳ ವಿಚಾರವಾಗಿ ಭಾಷಣದಲ್ಲಿ ಪ್ರಸ್ತಾವಿಸಲಾಗಿದೆ. ಸರ್ಕಾರ ವಿಪರೀತವಾಗಿ ಜನರ ಮೇಲೆ ತೆರಿಗೆಗಳನ್ನು ಹೊರಿಸುತ್ತಿದ್ದಾರೆ, ಇದು ಬಹಳ ತಪ್ಪು, ತೆರಿಗೆಗಳು ಈಗಾಗಲೇ ಭಾರವಾದ ಹೊರೆಯಾಗಿ ಜನರು ಕಷ್ಟದಲ್ಲಿದ್ದಾರೆ, ಇತ್ಯಾದಿ ಟೀಕೆಗಳನ್ನು ಸದಸ್ಯರು ಮಾಡಿದ್ದಾರೆ. ಆದರೆ ಹೀಗೆ ಮಾಡುವಾಗ ಮಾನ್ಯ ಸ್ನೇಹಿತರು 'ವೆಲ್‌ಫೇರ್ ಸ್ಟೇಟ್' ವಿಚಾರ ಮತ್ತು ಸರ್ಕಾರದ ಕರ್ತವ್ಯಗಳ ವಿಚಾರವನ್ನು ಪ್ರಸ್ತಾಪಮಾಡುತ್ತಾರೆ. ತೆರಿಗೆ ಹಾಕದೆ ಸೌಕರ್ಯ ಕಲ್ಪಿಸುವುದು ಹೇಗೆ? ಆಸ್ಪತ್ರೆಗಳಲ್ಲಿ ಶುಲ್ಕ ಹಾಕಿರುವುದು ತಪ್ಪೆಂದೂ ಜನಗೆ ಉಚಿತ ವೈದ್ಯಚಿಕಿತ್ಸೆ ಒದಗಿಸಬೇಕೆಂದೂ ನಿನ್ನೆಯ ದಿವಸ ಒಬ್ಬರು ಸ್ನೇಹಿತರು ಅಪ್ಪಣೆ ಕೊಡಿಸಿದರು. ನಿಜ, ಒಪ್ಪೋಣ. ಸ್ಕೂಲುಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದೂ ಸರ್ಕಾರದ ಜವಾಬ್ದಾರಿ ಎಂದು ಹೇಳಿದರು. ಹೀಗೆಯೇ ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯಗಳು ಹೀಗಿವೆ ಎಂದು ಹೇಳಿದರು, ಮುಂದೆಯೂ ಹೇಳುತ್ತಾರೆ. ಸರ್ಕಾರ ಜವಾಬ್ದಾರಿಯನ್ನು ಹೊರುವುದಕ್ಕಾಗುವುದಿಲ್ಲ ಎಂದು ಹೇಳುವ ಹಾಗಿಲ್ಲ, ಒಪ್ಪಬೇಕು. ಆಧುನಿಕ ಸರ್ಕಾರದ ಜವಾಬ್ದಾರಿ ಹಿಂದಿಗಿಂತ ಹೆಚ್ಚಾಗಿದೆ. ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮುಂಚೆ, ಅದನ್ನೆಲ್ಲಾ ಸರ್ಕಾರ ಮಾಡಬೇಕೆಂಬ ನಿಬಂಧನೆಯಿರಲಿಲ್ಲ. ಶ್ರೀಮಿರ್ಜಾ ಇಮಾಂರವರು ಮಂತ್ರಿಗಳಾಗಿದ್ದಾಗ ಇಷ್ಟು ಜವಾಬ್ದಾರಿಯಿರಲಿಲ್ಲ, ಸರ್ಕಾರಕ್ಕೆ ರಕ್ಷಣಾವ್ಯವಸ್ಥೆಯೊಂದೇ ಸರ್ಕಾರದ ಜವಾಬ್ದಾರಿಯಾಗಿತ್ತು.

1–30 P.M.

ಹಿಂದೆ ಇದ್ದ ಸರ್ಕಾರ ಯಾವುದಾದರೊಂದು ಕೆಲಸ ಮಾಡಬೇಕಾಗಿದ್ದರೆ ಆ ಕೆಲಸದ ಮೇಲೆ ಸರ್ಕಾರಕ್ಕೆ ಇಚ್ಛೆ ಇದ್ದರೆ ಮಾಡುತ್ತಿದ್ದರೇ ಶಿವಾಯಿ, ಆ ಕೆಲಸವನ್ನು ಮಾಡಿಯೇ ತೀರಬೇಕೆಂದು ಒತ್ತಾಯಮಾಡಿ ಮಾಡಿಸತಕ್ಕಂಥ ನಿಬಂಧನೆಗಳೇನೂ ಆಗ ಇರಲಿಲ್ಲ. ಈಚೆಗೆ ಜವಾಬ್ದಾರಿ ಸರ್ಕಾರ ಜಾರಿಗೆಬಂದ ಮೇಲೆ ಆ ಕೆಲಸ ಕಾರ್ಯಗಳ ಜವಾಬ್ದಾರಿಯೆಲ್ಲ ಸರ್ಕಾರದ ಮೇಲೆ ಬಿದ್ದಿದೆ. ಆ ಬಗ್ಗೆ ಸರ್ಕಾರದವರು ಬಹುಮಟ್ಟಿಗೆ ತಮ್ಮ ಕರ್ತವ್ಯನಿರ್ವಹಣೆಯನ್ನು ಮಾಡಿಕೊಂಡು ಬಂದಿರುತ್ತಾರೆ. ಇನ್ನು ಮುಂದಕ್ಕೂ ಆ ಬಾಬಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದರೆ ಸರ್ಕಾರದವರು ಹೆಚ್ಚಿಗೆ ಟ್ಯಾಕ್ಸ್‌ಗಳನ್ನು ಹಾಕತಕ್ಕದ್ದು ಆವಶ್ಯಕವಾಗಿಯೇ ಇದೆ. ಆದರೆ ಮಾನ್ಯ ಸದಸ್ಯರಿಗೆ ಟೀಕೆಮಾಡುವುದಕ್ಕೆ ಅವಕಾಶವಿರುವುದರಿಂದ ಅವರು ಯಾವ ಬಾಬಿನಲ್ಲಿ ತೆರಿಗೆಹಾಕಬಹುದು, ಯಾವ ಬಾಬಿನಲ್ಲಿ ಹಾಕಬಾರದು ಎಂಬುದನ್ನು ಸೂಚಿಸಬಹುದೇ ಶಿವಾಯಿ ತೆರಿಗೆಯನ್ನೇ ಹಾಕಬಾರದೆಂದು ಹೇಳುವುದು ಸರಿಯಾಗಿಲ್ಲ. ದೇಶಕ್ಕೆ ಆಗಬೇಕಾದ ಅನುಕೂಲಗಳು ಯಾವಯಾವುವು ಇರುತ್ತವೆಯೋ ಅವುಗಳಿಗೆ ಅನುಸಾರವಾಗಿ ಆ ಖರ್ಚಿಗೆ ತಕ್ಕ ಹಣದ ಉತ್ಪತ್ತಿ ಮಾರ್ಗ ಈ ಎರಡೂ ಜೊತೆಯಲ್ಲೇ ಹೋಗಬೇಕಾಗಿದೆ. ಆದರೆ ಒಂದು ಮಾತ್ರ ಬೇಕು, ಇನ್ನೊಂದು ಬೇಡ ಎಂದು ಹೇಳುವ ವಾದ ಸರಿಯಾದದ್ದಲ್ಲವೆಂದು ನನಗೆ ತೋರುತ್ತದೆ. ಇಲ್ಲವೇ ನಾವು ಸರ್ಕಾರದ ಮೇಲೆ ಹೊರಿಸತಕ್ಕ ಜವಾಬ್ದಾರಿಗಳನ್ನು ತಪ್ಪಿಸಬೇಕು, ಇಲ್ಲವೇ ನಾವೆಲ್ಲಾ ಟ್ಯಾಕ್ಸ್‌ಗಳನ್ನು ಕೊಡುವುದಕ್ಕೆ ತಯಾರಾಗಬೇಕು.—ಇರತಕ್ಕ ಮಾರ್ಗಗಳು ಇವು ಎರಡೇ. ನಾನಾಗಲೇ ಹೇಳಿದಂತೆ, ತಾವು ಇಷ್ಟಪಟ್ಟರೆ ಬಡವರಿಗೆ ತೆರಿಗೆ ಹಾಕಬೇಡಿ ಬರೀ ಸಾಹುಕಾರರಿಗೆ ಮಾತ್ರವೇ ತೆರಿಗೆ ವಿಧಿಸಿ ಎಂದು ಬೇಕಾದರೂ ಹೇಳಬಹುದು. ಹಾಗಿಲ್ಲದೆ ತಾವು ಹೋಲ್‌ಸೇಲಾಗಿ ಈ ತೆರಿಗೆಗಳನ್ನೇ ಹಾಕಕೂಡದೆಂದು ಹೇಳತಕ್ಕ ತಮ್ಮ ಭಾಷಣದ ಧೋರಣೆ ನನಗೆ ಅರ್ಥವಾಗುತ್ತಿಲ್ಲ. ಹೀಗೆ ಇವರು ಸುಮ್ಮನೆ ಪ್ರಜಾಸರ್ಕಾರ ಬಂದಮೇಲೆ ದೇಶಕ್ಕೇನೂ ಪ್ರಯೋಜನವಾಗಲಿಲ್ಲ ಎಂದು ಟೀಕೆ ಮಾಡುತ್ತಿರುವುದನ್ನು ನೋಡಿದರೆ ಇವರಿಗೆ ಪ್ರಜಾ ಸರ್ಕಾರದ ತತ್ವಗಳೇ ಗೊತ್ತಿಲ್ಲವೆಂದು ನನಗೆ ಅರ್ಥವಾಗುತ್ತದೆ.

Sri B. RACHIAH (Yelandur-Scheduled Castes).—Is it the policy of the Government to rob Peter to pay Paul?

Sri D. DEVARAJ URS.—If we consider that Peter is a wealthy man we have to rob him.

Sri B. RACHIAH.—Do it soon.

Sri D. DEVARAJ URS.—That is why the Inam Bill is before you.

ಸ್ವಾಸ್ಥ್ಯ ರಾಜ್ಯದ ಎಂದರೆ ವೆಲ್‌ಫೇರ್ ಸ್ಟೇಟಿನ ಮುಖ್ಯ ಕರ್ತವ್ಯಗಳಾವುವೆಂಬ ಬಗ್ಗೆ ಕೆಲವನ್ನು ಮಾತ್ರ ಇಲ್ಲಿ ಸೂಚಿಸಿದ್ದಾರೆ. ಆ ಪೈಕಿ ಮೊದಲನೆಯದು ಸರ್ಕಾರದವರು ಸರ್ವರಿಗೂ ಒಂದೊಂದು ಉದ್ಯೋಗವನ್ನು ಕಲ್ಪಿಸಿಕೊಡುವುದು, ಜನರಿಗೆ ವಾಸದ ಮನೆಗಳ ಸೌಕರ್ಯವನ್ನುಂಟುಮಾಡುವುದು, ಆರೋಗ್ಯಕರವಾದ ಆಹಾರವನ್ನೊದಗಿಸುವುದು, ಬಟ್ಟೆ, ವೈದ್ಯಸಹಾಯ, ಅಂಗವಿಹೀನರಿಗೂ, ನಿರ್ಗತಿಕರಿಗೂ ನಿತ್ಯಭತ್ಯವನ್ನೊದಗಿಸುವುದು, ಮದುವೆ, ಹೆರಿಗೆ, ಸಾವುನೋವುಗಳಿಗೆ ಬೇಕಾದ ದ್ರವ್ಯ ಸಹಾಯ ನೀಡುವುದು, ಜನರ ಆಟಪಾಟಕ್ಕೆ ಹಣವನ್ನು ವೆಚ್ಚಮಾಡುವುದು, ಸುಖ ಸಂತೋಷಗಳಿಗಾಗಿ ಹಣವನ್ನೊದಗಿಸುವುದು, ಇತ್ಯಾದಿ ಅನೇಕ ಜವಾಬ್ದಾರಿಗಳು ಸರ್ಕಾರದ ಮೇಲೆ ಬಿದ್ದಿರುತ್ತವೆ. ಅವುಗಳಿಗೆಲ್ಲಾ ಸರ್ಕಾರ ಹಣದ ಮೂಲವನ್ನು ಕಂಡುಹಿಡಿಯ ಬೇಕಾಗಿದೆ. ಇಂಥ ಅನುಕೂಲಗಳೆಲ್ಲ ನಮಗೆ ಬೇಕೆಂದು ಕೇಳುವಾಗ ನಾವು ಟ್ಯಾಕ್ಸ್‌ಗಳನ್ನು ಹಾಕಬಾರದೆಂದು ಹೇಳುವುದು ಅಥವಾ ಆ ಬಗ್ಗೆ ಹಿಂದೆ ಬೀಳತಕ್ಕದ್ದು ಸರಿಯಾದ ನೀತಿಯಲ್ಲ.

ಇನ್ನು ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದರು, "ನಿಮಗೆ ಅಷ್ಟು ನಡೆಸಲಿಕ್ಕೆ ದಕ್ಷತೆ ಇಲ್ಲದಿದ್ದರೆ ಆಡಳಿತವನ್ನು ಬಿಟ್ಟು ಕೊಡಿ" ಎಂಬುದಾಗಿ. ಅದಕ್ಕೆ ಸರಿಯಾದ ಜವಾಬ್ದಾರಿ ಹೊರತಕ್ಕವರು ಮುಂದೆ ಬಂದರೆ ಅಧಿಕಾರವನ್ನು ಬಿಟ್ಟುಕೊಡಲು ನಾವು ತಯಾರಿದ್ದೇವೆ. ಆದರೆ ಕೇವಲ ಟೀಕೆ ಮಾಡಬೇಕೆಂಬ ಮನೋಭಾವದಿಂದ ಸರ್ಕಾರವನ್ನು ಹೀಯಾಳಿಸಿದರೆ ಅದರಿಂದೇನೂ ಪ್ರಯೋಜನವಾಗಲಾರದು, ಅದರಿಂದ ಅಂಥ ಪುರುಷಾರ್ಥ ಸಾಧಿಸಿದಂತಾಗುವುದಿಲ್ಲ. ಒಟ್ಟಿನಲ್ಲಿ ನಾನು ಹೇಳುವುದು ಇಷ್ಟು. ಟ್ಯಾಕ್ಸ್ ಹಾಕಲು ತಾವೆಲ್ಲರೂ ಒಪ್ಪಿಕೊಳ್ಳಲೇ ಬೇಕು, ಆದರೆ ಆ ಬಗ್ಗೆ ತಾವು ಯಾರಮೇಲೆ ಅದರ ಭಾರ ಬೀಳಬಾರದು, ಯಾರ ಮೇಲೆ ಬೀಳಬಹುದು ಎಂಬುದರ ಬಗ್ಗೆ ಸಲಹೆ ಕೊಡುವುದರಲ್ಲಿ ಅರ್ಥವಿದೆ. ಹಾಗಿಲ್ಲದೆ ತೆರಿಗೆಗಳನ್ನೇ ಹಾಕಬೇಡಿ ಎಂದು ಹೇಳುವುದು ಶುದ್ಧಾಂಗ ದಡ್ಡತನದ ಮಾತೆಂದು ನಾನು ಹೇಳಬೇಕಾಗಿದೆ. ಆದರೆ ಈಗ ಈ ಬಗ್ಗೆ ಹೆಚ್ಚು ಭಾಷಣ ಮಾಡುವುದಕ್ಕೆ ಅವಕಾಶವಿಲ್ಲದಿರುವ ಪ್ರಯುಕ್ತ ಸರ್ವರೂ ರಾಜಪ್ರಮುಖರ ಭಾಷಣದ ಬಗ್ಗೆ ವಂದನೆಗಳನ್ನು ಸಲ್ಲಿಸಲು ತಂದಿರತಕ್ಕ ನಿರ್ಣಯಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಬೇಕೆಂದು ಕೇಳಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri S. SRINIVASA IYENGAR (T-Narasipur).—Mr. Speaker, Sir, while supporting the amendment moved by the Leader of the Opposition, I beg to place before this House my views for their kind consideration. After a careful study of the speech delivered by the Rajpramukh, I submit, sir, that it is evident that the resources of the community are not used to the best advantage. The efforts of the Government have been to widen the gap of the budget deficit rather than closing it as claimed in the Address. The conditions of scarcity have worsened and consequently the hardships of the people have increased. The Government are very busy in furthering their partisan policies and the talk of co-operation with other parties is just a myth. This reminds me of what the greatest parliamentarian once said.

Sri B. NARAYANASWAMY (Mysore City South).—Are written speeches allowed?

Sri S. SRINIVASA IYENGAR.—I have made notes.

Mr. SPEAKER—He has made notes and refers to them.

Sri S. SRINIVASA IYENGAR.—This reminds me of what the greatest parliamentarian once said "What shadows we are and what shadows we pursue."

The strength of a country lies not in its wealth or man—power but in the faith of its moral ideals and spiritual character of its people. The people in the rural parts have maintained their cultural heritage. They are God-fearing and hold in reverence our great epics like Ramayana, Mahabharata and Bhagavadgita. In most of the villages in my constituency, I have encouraged the staging of dramas which have direct relationship to these epics. I have the privilege of representing my constituency where it is difficult to win and not easy to hold. In their own way the villagers have kept up their literary taste. I therefore feel that this scheme for the dissemination of culture is more an urgent necessity in urban parts rather than in rural parts and therefore any amount that has to be spent on this scheme can very well be subscribed by philanthropic gentlemen rather than by making an allotment out of the State's revenue.

It is true that a system of education that we are having to-day does not suit our national life and national needs. Educated unemployment is on the increase. Innocent parents have lost

their all to finance the education of their sons only to find that their beloved sons after graduation have become misfits to village life. Their sons have been found to have developed a taste to dislike the very structure of village life. Agriculture has been abandoned. The land that follows the economic principles of diminishing returns is never cared. Consequently production has dwindled and the national income *per capita* is rolling down the sloping hill. What measures have the Government indicated to adopt during this year to check this downward tendency? I shall wait and see how the much-trumpeted educational reforms now on the anvil will confer a lasting benefit to the people as claimed.

The Government have bungled in their food policy. Vain words are spoken about distribution of foodstuffs. Planned economy has never been thought of. War time controls are retained even after the war. The cost of living is on the increase. Enormous increase in the prices of essential foodstuffs and other primary products has been registered. No attempt has been made to keep down the prices. Anxiety looms large in the people about the future. Most pressing of all the problems of the moment is that of the cost of living. It would be incumbent on any Government to find some method of tackling the problem. Nothing in the world is a mere naked fraud than a system by which contributions are paid in at one price level and benefits paid out at another. Thousands find it impossible to make both ends meet with the wages and salaries they earn today. If it continues for too long a period, the result can only be bankruptcy either nationally or individually. Let us bear in mind that it is not what we earn but what we can buy with what we get that really counts. With the existing starvation wages of the labourers and the low salaries of the non-gazetted officers, proper and secure family life can never be thought of. After achieving Swaraj, everyone thought that he would have plenty to eat and plenty to wear. It is the welfare of the people that matters. Are they contented? Are they well-housed? Are they well-clothed? It is strange that the Rajpramukh's Address contains no proposal to solve these problems except a reference to their miserable condition. Mere sympathy will not go to fill the belly. The Government on the other hand have actually cut away a large slice of the poor man's income by raising the price of millet. It is true as W.R. James put it "he who is helped is hindered" But I submit that it is obligatory on the part of the Government to have definite policy to maximise production. While comparing the prices of foodstuffs with the neighbouring States, the Rajpramukh has not been pleased to draw a comparison about the national income *per capita* in those States. If this had been done, I believe the Government would have been convinced that a greater percentage of a poor man's income is spent on foodstuffs. The desire to hold always a beggar's bowl at the Centre's door-step should be shaken off.

I will not deal with the subject of the Five-Year Plan at this stage as the time at my disposal is too short and the subject is one of utmost importance.

Formerly half the cost of water supply schemes used to be contributed by Government, the other half being the contribution of the Municipality. Our popular Government have very graciously granted a loan to the Municipalities to finance the entire scheme.

Sri D. DEVARAJA URS.—Reading a speech is not allowed and is against the practice.

Sri S. SRINIVASA IYENGAR.—I am not reading the speech. Because it is an important subject, I have noted down points and I am making reference to them.

Mr. SPEAKER.—You are creating an impression that you are reading it.

Sri S. SRINIVASA IYENGAR.—If the member objects if I look at the sheet, I will speak without it.

Sri D DEVARAJA URS.—I am objecting to it according to rules.

Sri S. SRINIVASA IYENGAR.—I was just speaking about loans to municipalities for water supply schemes. Formerly for water supply schemes in

(SRI S. SRINIVASA IYENGAR.)

all the municipalities Government used to give half the amount as grant and the other half used to be contributed by the concerned municipality. But our popular Government have very graciously granted a loan to cover the entire amount necessary for such schemes. Not only have they granted the loan, but also they have stipulated a condition that the loan is to be repaid in 15 years' time with 5 per cent interest. Even the worst banker never thinks of realising five per cent on a heavy loan. But still our popular Government think it fair.

Rural water supply seems to have been a forgotten subject. Many villages even to-day cart water that is necessary for the men and the cattle in the village from long distances. The allotments made are not even spent. There seems to be incompetency and inefficiency in the administration. The Government are not devoting as much attention as is necessary towards this issue.

Mr. SPEAKER.—They have made a good provision in the budget for water supply in rural areas.

Sri S. SRINIVASA IYENGAR.—But it is not spent.

Sri A. G. RAMACHANDRA RAO.—The entire sum has been loaned out.

Sri S. SRINIVASA IYENGAR.—That is for municipalities. I am speaking of rural areas. So far as loans to municipalities are concerned, the conflicting Government Orders issued within a brief period have resulted in great confusion in the minds of the Public Works Department and the local bodies concerned. The municipalities were instructed by a Government Order to draw the loan themselves and credit it to the Public Works Department for getting the works executed but a few days later another Government Order was issued to the effect that the loan need not be drawn by the municipalities, so much so the Public Works Departmnnt were not sure as to what to do. Such a delay, you know, involves a revision of estimate; revision of estimate means extra cost; extra cost means additional funds. All these three become concyclic and go round and where they end nobody knows. One fine morning we find that nothing is accomplished.

Housing problem and social policy are the mainstay of good and healthy home life. So far as the Depressed Classes are concerned, the Government have asked them to commence the construction of their houses at their own cost to a certain stage and they were told that Government would supply the roofing material at Government cost. By a painful saving, many depressed class people have completed their portion of the work. This year, in my constituency, the entire allotment made by the Government has been adjusted towards acquisition charges. Not even a rupee has been paid to any single Harijan or depressed class man towards the construction of the houses this year. I submit that the Government should bestow greater attention on this subject.

Formerly, industries used to contribute a large portion of their profits towards the general revenues. For the past five years some of these industries are running in a loss, and consequently, are contributing nothing. There may be many reasons for this loss. One reason is that most of these industries have antidated machinery and so the goods produced through them can never stand in the competitive world. I submit that unless the Government take steps to equip these industries with the latest machinery, it will not be possible to realise any revenue from them.-Even though some of these industries are contributing a certain amount of their profits to the general revenues, I believe, by posting proper men to these industries, much can be turned out, and this deficit, much spoken of deficit, could very well be made up or made good by the profits earned in various industries. In some of these factories, goods manufactured have remained undisposed of for the last 8 to 10 months. The Mysore Silk Filatures have a lot of goods in stock and they are unable to market them and some of the industries have not been equipped with necessary reeling machinery and other things. Therefore, I feel that the Government

should devote greater attention on this subject. It is true that the party in power is quite strong in the Legislature (Sri J. Mohamed Imam.—Really ?) at least in numbers, but I submit that the observations and the remarks that I have made may kindly be considered with the necessary patience. I may be permitted to conclude by recalling the words of Milton : " What is strength without a double share of wisdom !"

Sri SYDNEY A. THOMAS (Nominated).--Mr. Speaker, sir, I rise to support the motion of Thanks now before the House. (A Voice : Amendments also). No Sir, I am not supporting the amendments. His Highness the Rajpramukh's Address is remarkable for its factual, though brief, review of the stewardship of this Government during the last nine months, and also for its sober yet hopeful anticipations for the coming year. His Highness very correctly has laid the greatest stress on the Five-Year Plan and it is on this aspect of the Address that I wish to dwell. Every one has heard of the Five-Year Plan ; many of us have read it ; but, because of its vastness and complexity, very few, if any, of us have not been able to gauge the full significance of the Plan. Critics have been many both in this House and outside, but I think it would be agreed on all hands that the Plan is a monumental document. It is the first deliberate and systematic attempt in our country's history to assess and to make a deep and comprehensive survey of our national resources and wealth and to chart the pace and the programme of our national progress. Some criticise the programme and state that too many things have been attempted in a hundred places at the same time. Others say that the Plan is not radical enough. Others again state that the policy of nationalisation has been dropped from the Five-Year Plan. I have had no time to go throgh the final Plan but I have read the Draft Plan very carefully. Some again state that the Plan is too slow. But whatever the criticism may be, I do not agree with it. Facile criticism comes from many quarters. It is utterly humanly impossible to evolve a perfect Plan, considering the many complexities and myriad aspects of our national life. Most Plans have their irregularities, angularities and imperfections, but I believe the Five-Year Plan is the fountain-head to-day of India's hopes and aspirations for the future.

To my mind, the Plan rests on three main pillars—financial, administrative and popular. To take the first pillar 'financial', the Planning Commission envisages an expenditure of Rs. 2,069 crores and even if we accept their calculation as correct, there will still be a gap of about Rs. 300—400 crores and it is not possible to make up this gap with our internal resources. The question of foreign aid is one which I do not wish to go into, but I believe it will be largely forthcoming if India is to continue to remain the bastion of democracy in the East. In our own State, the Government has to raise a loan of Rs. 9 crores and then there is the question of raising an almost equal amount by additional taxation. This additional taxation will not be very acceptable, very palatable to our people. Revise your policy of prohibition. That will be a most palatable policy—I speak very literally. By continuing this policy of prohibition, you are in effect more or less throwing away good whisky down bad drains. This policy of additional taxation will be not only throwing heavy burden on people, but it might tend to jeopardise the success of the Plan even in the initial stages, even though two years have passed.

The next pillar is 'administrative'. We must ensure that we can expect a reasonable amount of efficiency and integrity on the part of the officers entrusted with the execution of the big schemes. Recently we have got into the habit of belittling our administration, some of it very correctly. However, there must be no complacency in this matter. Vast schemes will involve an enormous amount of expenditure and we must exert a certain amount of vigilance. We have to see that there is no waste or corruption. Other countries advanced similar Plans and

(SRI SYDNEY A. THOMAS.)

they were not exempt from shortcomings and I do not expect India will be so. But I do believe that by increasing the functions or increasing the staff of the Efficiency Audit and Anti-Corruption branches, we can ensure that there is no unnecessary waste of money. Take for example, the case of Sindri Fertiliser Factory. The Factory has now merged as one of the largest factories in Asia, if not in the world. It had its own shortcomings. There was enough corruption and there was inefficiency and consequently, the rate of progress of this plant was delayed. So we must guard against this.

The third pillar is 'popular'. Our Prime Minister has repeatedly stated that the support and enthusiasm of the common man must be whipped up. Here again I suggest that we set up a separate Propaganda Department to infuse the idea of the Five-Year Plan into the minds of the masses. After all, the common man must be made to feel that upon the success of the Five-Year Plan depends his ultimate benefit. By 1956 the Plan envisages an increase of 11 per cent in the national income with additional employment for several millions of people, not to speak of all-round progress. So, I sincerely hope that the Five-Year Plan will not be made a pawn in party politics. Like the Constitution the plan should be above partisanship and political controversy. Other countries less fortunately situated than ours balanced and stabilised their economies by a series of plans and I do not see why India, given the goodwill of its people, cannot attain to prosperity. It is the duty of all sections of the House to give support to the Five-Year Plan, because it is the first sign post of our Welfare State.

(2 P.M.)

We must ensure that the ordinary man is given all reasonable human rights. We should see that he is fed and clothed sufficiently. Unless this is done, the programme of cultural development will not succeed. First of all, he should have his basic needs satisfied. There is no use taking a volume of the Ramayana, Mahabharata, or the Bible, and thrusting them down his throat. I assure you they will not digest on empty stomachs. I would commend the Five-Year Plan for the support of the House.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ಅಧ್ಯಕ್ಷರೇ, ರಾಜಪ್ರಮುಖರು ಭಾಷಣ ಮಾಡಿದುದಕ್ಕಾಗಿ ಅವರನ್ನು ವಂದಿಸುವುದಕ್ಕೆ ಶ್ರೀಮಾನ್ ಸಿದ್ಧಲಿಂಗಯ್ಯನವರು ನಮ್ಮ ಮುಂದೆ ಠರಾವನ್ನಿಟ್ಟಿದ್ದಾರೆ. ಈಗಾಗಲೇ ಕೆಲವರು ಅದನ್ನು ಸಮರ್ಥಿಸುತ್ತಲೂ ಮತ್ತೆ ಕೆಲವರು ಅದನ್ನು ವಿರೋಧಿಸುತ್ತಲೂ ಮಾತನಾಡಿದ್ದಾರೆ. ನಾನು ಅದನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಮೊದಲನೆಯದಾಗಿ ವಿದ್ಯಾಭ್ಯಾಸಕ್ರಮದಲ್ಲಿ ಸುಧಾರಣೆಗಳನ್ನು ಮಾಡಬೇಕೆಂದು ಏರ್ಪಾಡುಮಾಡಿದ್ದಾರೆ. ಈ ಸುಧಾರಣೆಗಳ ವಿಚಾರವಾಗಿ ಶ್ರೀಮಾನ್ ಪಟ್ಟಾಭಿರಾಮ್‌ರವರು ಬಹಳ ಹೊಗಳಿದ್ದಾರೆ. ಅದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅವರು ಹೇಳಿದಂತೆ ಈ ವಿಷಯದಲ್ಲಿ ನಮ್ಮ ಮೈಸೂರು ಒಂದು ಹೆಜ್ಜೆ ಮುಂದಿಟ್ಟಿದೆ. ಇತರ ಸಂಸ್ಥಾನಗಳಲ್ಲಿ ಸುಧಾರಣೆಗಳ ಹೆಸರನ್ನೇ ಇನ್ನೂ ಎತ್ತಿಲ್ಲ. ಆದರೆ ನಮ್ಮ ಸಂಸ್ಥಾನದ ವಿದ್ಯಾಮಂತ್ರಿಗಳೂ ಇತರರೂ ಸೇರಿ, ಕೇವಲ ಮೂರು ನಾಲ್ಕು ತಿಂಗಳುಗಳೊಳಗೆ ಸುಧಾರಣೆಗಳನ್ನು ತಯಾರುಮಾಡಿ ದೇಶದ ಮುಂದಿಟ್ಟಿದ್ದಾರೆ. ಅದಷ್ಟು ಬೇಗ ಇದನ್ನು ಜಾರಿಗೆತರುವುದಕ್ಕೆ ಪ್ರಯತ್ನ ಮಾಡಬೇಕು. ಹಣಕಾಸಿನ ಮುಗ್ಗಟ್ಟಿನ ಒಂದು ಕಷ್ಟವಿದೆ. ಇದಕ್ಕೆ ಬೇಕಾದ ಐದಾರು ಕೋಟಿ ರೂಪಾಯಿಗಳನ್ನು ಈ ಪರಿಸ್ಥಿತಿಯಲ್ಲಿ ಎಲ್ಲಿಂದ ತರುವುದು ಎಂಬ ಯೋಚನೆ ಬರುತ್ತದೆ. ನಾನು ಹೇಳುವುದಿಷ್ಟು. ಈ ಹಣದ ಮುಗ್ಗಟ್ಟಿನ ಕಾಲದಲ್ಲಿ ಈ ಸುಧಾರಣೆಗಳಲ್ಲಿ ಹೆಚ್ಚು ಹಣ ಖರ್ಚಾಗದೇಯಿರುವುದನ್ನು ಜಾರಿಗೆ ತರಲು ಪ್ರಯತ್ನಿಸಬೇಕು. ಮಿಕ್ಕ ಸುಧಾರಣೆಗಳನ್ನು ಎರಡು ಮೂರು ವರ್ಷಗಳಲ್ಲಿ ಜಾರಿಗೆ ತರಬೇಕೆಂದು ನನ್ನ ಆಶಯ. ಇದನ್ನು ವಿರೋಧಪಕ್ಷದ ಕಲವು ಸದಸ್ಯರೂ ಸಮರ್ಥಿಸಿ ಮಾತನಾಡಿದುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು.

ಇನ್ನು ಐದು ವರ್ಷದ ಯೋಜನೆಯನ್ನು ನಮ್ಮ ಸ್ನೇಹಿತರನೇಕರು ಸಮರ್ಥಿಸಿದ್ದಾರೆ. ಕೆಲವರು ವಿರೋಧಿಸಿ ಮಾತನಾಡಿದ್ದಾರೆ. ಇದೊಂದು ದೊಡ್ಡ ಯೋಜನೆ. ನಮ್ಮ ದೇಶದಲ್ಲಿ ಈ ಯೋಜನೆಯನ್ನು ತಯಾರು ಮಾಡುವುದಕ್ಕೆ ಸುಮಾರು ಎರಡು ವರ್ಷವನ್ನು ತೆಗೆದುಕೊಂಡಿದ್ದಾರೆ. ಇಂಥ ಯೋಜನೆಯನ್ನು ರಷ್ಯಾದೇಶ ತಯಾರಿಸಿ, ಅಲ್ಲಿನ ಜನರೆಲ್ಲರೂ ಒಗ್ಗಟ್ಟಾಗಿ ಒಂದೇ ಮುಖದಲ್ಲಿ ಕೆಲಸಮಾಡಿ, ಫಲಪ್ರದವಾಗಿ ಮಾಡಿದ್ದಾರೆ. ಆದುದರಿಂದ ಈ ದಿವಸ ಆ ದೇಶದಲ್ಲಿ ಆರ್ಥಿಕ ಮಟ್ಟ ಬಹಳ ಮಟ್ಟಿಗೆ ಹೆಚ್ಚಾಗಿದೆ. ಶ್ರೀಮಾನ್ ಸಿದ್ಧಲಿಂಗಯ್ಯನವರು ಹೇಳಿದ ಹಾಗೆ, ನಮಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲ. ಇದನ್ನು ಪಡೆಯಬೇಕಾದರೆ ನಾವು ಇಂಥ ಯೋಜನೆಯನ್ನು ಹಾಕಿಕೊಂಡು ಕೆಲಸಮಾಡಬೇಕು. ಸರ್ಕಾರದವರು ಈ ಯೋಜನೆಯನ್ನು ತಯಾರುಮಾಡಿ ನಮ್ಮ ಮುಂದಿಟ್ಟಿದ್ದಾರೆ. ಇದನ್ನು ಬಹು ಜನರು ಹೊಗಳಿದ್ದಾರೆ; ಕೆಲವರು ಮಾತ್ರ ವಿರೋಧಿಸಿದ್ದಾರೆ. ಈ ಯೋಜನೆ

ಫಲಪ್ರದವಾಗದೇ ಹೋದರೆ ದೇಶದಲ್ಲಿ ಅನರ್ಥವುಂಟಾಗುತ್ತದೆ. ಅದುದರಿಂದ ಎಲ್ಲರೂ, ವಿರೋಧಪಕ್ಷದವರೂ ಒಟ್ಟುಗೂಡಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಶ್ರಮಿಸುವುದು ಮುಖ್ಯ ಕರ್ತವ್ಯ.

ನಿನ್ನೆಯ ದಿವಸ ಎದುರುಪಕ್ಷದ ನಾಯಕರು ಮಾತನಾಡಿದುದನ್ನು ಕೇಳಿದೆ. ಅವರು ಬಹಳ ಕಾಲದಿಂದ ರಾಜಕೀಯದಲ್ಲಿ ಓಡಾಡುತ್ತಿದ್ದಾರೆ, ಕೆಲವು ವರ್ಷ ಮಂತ್ರಿಗಳೂ ಆಗಿದ್ದರು, ಮೂರು ನಾಲ್ಕು ವರ್ಷಗಳಿಂದ ಎದುರು ಪಕ್ಷದ ಮುಖಂಡರಾಗಿದ್ದಾರೆ. ಹೀಗಿದ್ದರೂ ಅವರು ಆ ರೀತಿ ಮಾತನಾಡಿದುದನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಅವರು ಸಹಕಾರ ಹಸ್ತವನ್ನು ನೀಡಲಿಲ್ಲ. ದೇಶಾಭಿವೃದ್ಧಿಗೆ ಸಾಧಕವಾದ ಇಂಥ ಒಂದು ದೊಡ್ಡ ಯೋಜನೆ ಬಂದಾಗ ಎದುರು ಪಕ್ಷದ ಎಲ್ಲರೂ ಸೇರಿ ಈ ಯೋಜನೆಯನ್ನು ಕಾರ್ಯಗತಮಾಡಲು ಅನುಕೂಲಮಾಡಬೇಕು. ಈ ಯೋಜನೆಯೂ ಆಹಾರ ಹೆಚ್ಚು ಬೆಳೆಯುವ ಯೋಜನೆ ಮತ್ತು ವನಮಹೋತ್ಸವ ಆದ ಹಾಗಾಗುತ್ತದೆಂದು ಅವರು ಹೇಳಿದರು. ಇಂಥ ಮುಖ್ಯ ವಿಷಯದಲ್ಲಿ ಹೀಗೆ ಲಘುವಾಗಿ ಹೇಳಬಾರದು. ದೇಶ ಬರಿದಾಗಿದೆ, ಸರ್ಕಾರದ ಖಜಾನೆ ಬರಿದಾಗಿದೆ, ಸಾಲ ಸಿಕ್ಕುವುದಿಲ್ಲ, ಲೂಟಿ ಆಗಿದೆ ಎಂದು ಅವರು ಹೇಳಿದರು. ನಾವು ಮನೆಯವರಹಾಗಿದ್ದು ಹೀಗೆ ಹೇಳಿದರೆ ಅದರಿಂದ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚಿಸಬೇಕು. ಇಂಥ ವಿಷಯದಲ್ಲಿ ನಾವು ಹಗುರವಾಗಿ ಮಾತನಾಡಬಾರದು. ಸಾಲ ಯಾರು ಕೊಡುತ್ತಾರೆ ಎಂದು ಈ ಸಭೆಯ ಸದಸ್ಯರೇ ಹೇಳಿದರೆ, ನಾವು ಸಾಲ ಕೇಳುವುದಕ್ಕೆ ಹೋದರೆ ಯಾರು ಕೊಡುತ್ತಾರೆ? ಅವರು ಈ ಸಂದರ್ಭದಲ್ಲಿ ಸಹಕಾರ ನೀಡಬೇಕಾಗಿತ್ತು. ಹಾಗೆ ಮಾಡಿದ್ದರೆ ಎಲ್ಲರಿಗೂ ಬಹಳ ಸಂತೋಷವಾಗುತ್ತಿತ್ತು. ಹಾಗೆ ಮಾಡದೆಯಿದ್ದುದರಿಂದ ಜನತೆ ಏನು ತಿಳಿದುಕೊಳ್ಳುತ್ತಾರೆ? ಬೇರೆ ಬೇರೆ ಪಕ್ಷಗಳಿರುವ ಕಡೆ ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಬರಬಹುದು. ಆದರೆ ಜನತೆಯ ಹಿತಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳಲ್ಲಿ ಎಲ್ಲರೂ ಸಹಕಾರ ಕೊಡಬೇಕು. ಯಾವಾಗಲೂ ಎದುರು ಪಕ್ಷದ ಟೀಕೆಗಳು ರಚನಾತ್ಮಕವಾಗಿರಬೇಕು, ಸರ್ಕಾರಕ್ಕೆ ಸಹಾಯಕವಾಗಿರಬೇಕು. ಇದನ್ನು ಬಿಟ್ಟು ಹೀಗೆ ಒಂದು ಒಳ್ಳೆಯ ಕಾರ್ಯಕ್ಕಾಗಿ ಸಾಲವನ್ನೆತ್ತುವಕಾಲದಲ್ಲಿ, ತೆರಿಗೆಯನ್ನು ಹಾಕುವ ಕಾಲದಲ್ಲಿ, ನಾವು ವಿರೋಧಿಸುತ್ತೇವೆಂದು ಹೇಳುವುದೆ? ಸಾಲವಾಗಿ ಹಣವನ್ನು ತೆಗೆದುಕೊಂಡು ವನಮಹೋತ್ಸವಕ್ಕಾಗಲಿ ಅಥವಾ ಇತರ ಯೋಜನೆಗಳಿಗಾಗಲಿ ಏನನ್ನೂ ಹಾಕುವುದಿಲ್ಲ. ದೇಶಕ್ಕೆ ಅತ್ಯಗತ್ಯವಾದ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಮಾತ್ರ ವಿನಿಯೋಗಿಸುತ್ತಾರೆ. ಇಂಥ ಒಳ್ಳೆಯ ಕೆಲಸಗಳಿಗೆ ಹಣವನ್ನೊದಗಿಸಲು ಹಣವನ್ನೆತ್ತುವಾಗ ಎದುರು ಪಕ್ಷ ಹಗುರವಾಗಿ ಮಾತನಾಡುವುದು ಸರಿಯಲ್ಲ.

ಇನ್ನು ಆಹಾರ ನೀತಿಯ ವಿಚಾರದಲ್ಲಿ ನಮ್ಮ ರಾಜಪ್ರಮುಖರು ಕೆಲವು ಮಾತುಗಳನ್ನು ಹೇಳಿದ್ದಾರೆ. ರಾಜಪ್ರಮುಖರು ಭಾಷಣಮಾಡಿದುದಕ್ಕಾಗಿ ವಂದಿಸುತ್ತಾ ಶ್ರೀಮಾನ್ ಸಿದ್ದಲಿಂಗಯ್ಯನವರು ಕೂಡ ಕೆಲವು ಮಾತುಗಳನ್ನು ಹೇಳಿದ್ದಾರೆ. ನಮ್ಮ ದೇಶದಲ್ಲಿ ಹೋದ ವರ್ಷಕ್ಕಿಂತ ಈ ವರ್ಷ ಆಹಾರ ಉತ್ಪತ್ತಿ ಕಡಮೆಯಾಗಿದೆ. ಈ ಸರ್ಕಾರ ಬಂದ ಮೇಲೆ ಆಹಾರ ಸಮಸ್ಯೆ ಇನ್ನೂ ದೊಡ್ಡದಾಗಿದೆ. ಇವರು ಬಂದ ಮೇಲೆ ಆದಷ್ಟು ಮಟ್ಟಿಗೆ ಸಾಗಾಣಿಕೆ ಹತೋಟಿಯನ್ನು ಸರಿಮಾಡಿದರು. ಬರಬರುತ್ತಾ ರಾಗಿ ಮತ್ತು ಜೋಳದ ಶೇಖರಣೆ ತೆಗೆದುಹಾಕಿದರು. ಆಹಾರದ ವಿಷಯದಲ್ಲಿ ಸಾಮಾನ್ಯವಾಗಿ ಇಂಡಿಯಾ ಸರ್ಕಾರದವರು ಅನುಸರಿಸತಕ್ಕ ನೀತಿಯನ್ನು ಅನುಸರಿಸಿ ನಡೆದುಕೊಂಡು ಬರುತ್ತಿದ್ದಾರೆ. ಪಾಂಚವಾರ್ಷಿಕ ಯೋಜನೆ ಫಲಪ್ರದವಾಗಬೇಕಾದರೆ ಐದು ವರ್ಷಗಳವರೆಗೆ ಕಂಟ್ರೋಲು ಇರಬೇಕೆಂದು ನಮ್ಮ ದೇಶದ ಮುಖಂಡರಾದ ನೆಹರೂರವರು ಹೇಳುತ್ತಿದ್ದಾರೆ. ಕೆಲವು ಸಂಸ್ಥಾನಗಳಲ್ಲಿ ಆಹಾರ ಹೆಚ್ಚು ಬೆಳೆಯುತ್ತಾರೆ, ಕೆಲವು ಸಂಸ್ಥಾನಗಳಲ್ಲಿ ಬೆಳೆಯುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಆಹಾರವನ್ನು ಮೊದಲಿನಿಂದಲೂ ಹೆಚ್ಚಾಗಿ ಬೆಳೆಯುತ್ತಿಲ್ಲ. ಹೆಚ್ಚು ಬೆಳೆಯುವವರಿಂದ ಬಲವಂತವಾಗಿ ಧಾನ್ಯವನ್ನು ಶೇಖರಿಸದೇ ಹೋದರೆ ಅನೇಕ ಜನರು ಕೊಡುವುದಿಲ್ಲ. ಅವರು ಸಾಮಾನ್ಯವಾಗಿ ಹೆಚ್ಚು ಬೆಲೆ ಕೊಡುವವರಿಗೆ ಮಾರುತ್ತಾರೆ. ಅಷ್ಟು ಹೆಚ್ಚು ಹಣ ಕೊಟ್ಟು ಕಾರ್ಮಿಕರೂ ಬಡವರೂ ಹೇಗೆ ತರಬೇಕು? ಹೆಚ್ಚು ಬೆಳೆಯುವ ಕಡೆಯಿಂದ ತಂದು ಕಡಮೆ ಬೆಳೆಯುವ ಪ್ರದೇಶಗಳಿಗೆ ಹಂಚುತ್ತಾರೆ. ಇದು ಕೇಂದ್ರ ಸರ್ಕಾರದ ಆಹಾರ ನೀತಿ. ಮೈಸೂರು ಸರ್ಕಾರ ಆ ನೀತಿಗೆ ಸಹಕಾರಿಯಾಗಿರಬೇಕು. ನಮ್ಮಲ್ಲಿ ಹೆಚ್ಚು ಬೆಳೆದವರಿಂದ ಧಾನ್ಯವನ್ನು ತೆಗೆದುಕೊಳ್ಳದೆ ಪೂರ್ತಿಯಾಗಿ ಹತೋಟಿಯನ್ನು ತೆಗೆದುಹಾಕಿ, ಕೇಂದ್ರ ಸರ್ಕಾರದವರನ್ನು ನಮಗೆ ಧಾನ್ಯ ಕೊಡಿ ಎಂದು ಕೇಳಿದರೆ ನ್ಯಾಯವೆ? ಆದಷ್ಟು ಮಟ್ಟಿಗೆ ನಾವು ನಮ್ಮ ಸಂಸ್ಥಾನದಲ್ಲಿ ಆಹಾರವನ್ನು ಶೇಖರಿಸಬೇಕು. ಯಾರು ಹೆಚ್ಚು ಬೆಳೆಯುತ್ತಾರೋ, ಯಾರಿಗೆ ಊಟ ಮಾಡಿ ಉಳಿಯುತ್ತದೆಯೋ ಅಂಥವರಿಂದ ತೆಗೆದುಕೊಳ್ಳುತ್ತಾರೆ. ಇಂಥ ನೀತಿಯಿಲ್ಲದಿದ್ದರೆ ಕೇಂದ್ರ ಸರ್ಕಾರದವರು ನಮಗೆ ಧಾನ್ಯ ಕೊಡುವುದಿಲ್ಲ. ಆದುದರಿಂದ ಮೂರು ದೊಡ್ಡ ಪಟ್ಟಣಗಳಲ್ಲಿ ಪಡಿತರವನ್ನಿಟ್ಟಿದ್ದಾರೆ. ಈಗಾಗಲೇ ಶೇಕಡ 80-85 ರಷ್ಟು ಧಾನ್ಯವನ್ನು ಆಹಾರ ಶೇಖರಣೆ ನಿಯಮಗಳ ಪ್ರಕಾರ ವಸೂಲು ಮಾಡಿದ್ದಾರೆ. ಹೀಗಿರುವಾಗ ಈಗಲೇ ಪಡಿತರ ವ್ಯವಸ್ಥೆಯನ್ನು ತೆಗೆದುಹಾಕಿದರೆ, ಈ ದವಸವನ್ನು ಏನು ಮಾಡಬೇಕು? ಮಳೆ ಇನ್ನು ಎರಡು ಮೂರು ತಿಂಗಳಲ್ಲಿ ಬರಬಹುದು, ಅನುಕೂಲವಾಗಬಹುದು. ಹೇಗಾದರೂ ಈ ವಿಷಯದಲ್ಲಿ ನಿಧಾನವಾಗಿ ಹೋಗಬೇಕು. ದೇಶದ ಲಕ್ಷಾಂತರ ಪ್ರಾಣಗಳನ್ನು ಉಳಿಸುವ ಕರ್ತವ್ಯ ಸರ್ಕಾರದ್ದಾಗಿದೆಯಾದ್ದರಿಂದ ನಿಧಾನವಾಗಿ ಎಚ್ಚರಿಕೆಯಿಂದ ಮುಂದುವರಿಯಬೇಕಾಗಿದೆ. ಆದಕಾರಣ ಇನ್ನು ಮೂರು ತಿಂಗಳು ಮಳೆ ಬೆಳೆಯಾಗುವವರೆಗೆ, ದವಸವನ್ನು ಶೇಖರಿಸಿ ಹಂಚಬೇಕಾದುದು ಸರ್ಕಾರದ ಕರ್ತವ್ಯ.

ನನ್ನ ಸ್ನೇಹಿತರು ಕೆಲವರು ಸಂಸ್ಕೃತಿ ಪ್ರಸಾರದ ವಿಷಯವಾಗಿ ಮಾತನಾಡಿದರು. ಈ ಸಂಸ್ಕೃತಿ ಪ್ರಸಾರ ಬೇಕೆಂದು ಹೇಳುವವರಲ್ಲಿ ನಾನೂ ಒಬ್ಬನು. ಇದನ್ನು ಸಮರ್ಥಿಸಿದವರ ಮತ್ತು ವಿರೋಧಿಸಿದವರ ಭಾಷಣಗಳನ್ನು ಕೇಳಿದೆ. ಆದರೆ ನನಗೆ ಒಂದು ಅನುಮಾನವಿದೆ. ನಮ್ಮ ದೇಶದಲ್ಲಿ ಗೀತಾ ಜಯಂತಿ, ರಾಮಾಯಣ, ಭಾರತ, ಖುರಾನ್, ಬೈಬಲ್ ಈ ವಿಷಯಗಳನ್ನು ಸರ್ಕಾರದವರು ಪ್ರಚಾರಮಾಡಬಹುದೆ? ಜಾತ್ಯತೀತವಾದ ರಾಷ್ಟ್ರದಲ್ಲಿ ಸರ್ಕಾರದವರು ಗೀತಾ ಜಯಂತಿ ಎಂದು ನಡೆಸಿದರೆ, ಹೊರಗಿನವರು ಪಾಕಿಸ್ಥಾನದವರು, ಪಾಶ್ಚಿಮಾತ್ಯ ದೇಶಗಳವರು ಇದನ್ನು ಕೇಳಿದರೆ ಇದನ್ನು ಸೆಕ್ಯುಲರ್ ಸ್ಟೇಟ್ ಎಂದು ಹೇಳುತ್ತಾರೆಯೆ? ಹಿಂದೂ ಮತವನ್ನು ಅಭಿವೃದ್ಧಿಮಾಡಲು ಹೊರಟಿದ್ದಾರೆಂದು ಅವರು ತಿಳಿದುಕೊಳ್ಳುವುದಿಲ್ಲವೇ? ಎಂದು ನನಗನ್ನಿಸುತ್ತದೆ. ಆದುದರಿಂದ ಇದು ಸರ್ಕಾ

(ಶ್ರೀ ಆರ್. ಅನಂತರಾಮನ್.)

ರದವರು ಮಾಡತಕ್ಕ ಕೆಲಸವಲ್ಲ, ಖಾಸಗಿ ಜನರು ಮಾಡ ತಕ್ಕ ಕೆಲಸವೆಂದು ತೋರುತ್ತದೆ. ನನಗೆ ಈ ಯೋಚನೆ ಈ ಅನುಮಾನ ಅನೇಕ ದಿವಸಗಳಿಂದ ಇದೆ. ಗೀತಾ ಜಯಂತಿ ಮತ್ತು ಸಂಸ್ಕೃತಿ ಬೇಕು ನಮ್ಮ ದೇಶಕ್ಕೆ. ಆದರೆ ಇದನ್ನು ಸರ್ಕಾರ ಮಾಡಬೇಕೇ ಖಾಸಗೀ ಜನ ಮಾಡಬೇಕೇ ಎನ್ನುವುದನ್ನು ಪುನರ್ವಿಮರ್ಶೆ ಮಾಡಿ ತೀರ್ಮಾನಕ್ಕೆ ಬರಬೇಕಾಗಿದೆ. ನಾನು ಇನ್ನು ಹೆಚ್ಚು ಮಾತನಾಡುವುದಿಲ್ಲ. ಒಟ್ಟಿನಲ್ಲಿ ಈ ವಂದನಾ ಸಮರ್ಪಣೆಯ ಠರಾವನ್ನು ನಾನು ಸಮರ್ಥಿಸು ತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಆನೇಕಲ್-ಹೊಸ ಕೋಟೆ).—ಮಾನ್ಯ ಅಧ್ಯಕ್ಷರೆ, ಶ್ರೀಮನ್ಮಹಾರಾಜರ ವರು ಏಳನೆಯ ತಾರೀಖು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸಂಯುಕ್ತ ಅಧಿವೇಶನದಲ್ಲಿ ನಮ್ಮನ್ನುದ್ದೇ ಶಿಸಿ ಮಾಡಿದ ಭಾಷಣಕ್ಕಾಗಿ ಕೃತಜ್ಞತೆಯನ್ನರ್ಪಿಸಲು ಸಂತೋಷಿಸುತ್ತೇನೆ. ಭಾಷಣದ ಪರವಾಗಿ ಮಾತನಾ ಡಿರುದನ್ನು ಅದರ ವಿರೋಧವಾಗಿ ಮಾತನಾಡಬೇ ಕೆಂದು ಮನಸ್ಸುಮಾಡಿ ಮಾಡಿದ ಭಾಷಣಗಳನ್ನು ಕೇಳಿ ದ್ದಾಯಿತು. ನನಗೆ ತೋರುವುದು, ಶ್ರೀಮನ್ಮಹಾರಾ ಜರವರ ಭಾಷಣದ ಒಂದು ಮಹತ್ವ, ವೈಶಿಷ್ಟ್ಯವೇನಿದೆ ಯೆಂದರೆ, ಇದನ್ನು ಎಷ್ಟೇ ವಿಮರ್ಶಾತ್ಮಕ ದೃಷ್ಟಿ ಯಿಂದ ಟೀಕಿಸಬೇಕೆಂದು ಓದಿದರೂ, ಓದುತ್ತಾ ಓದುತ್ತಾ ಅದಕ್ಕೆ ಅಭಿನಂದಿಸಬೇಕು. ಶ್ಲಾಘನೆಮಾಡಬೇ ಕೆಂದು ಮನಸ್ಸು ಬರುತ್ತದೆ. ಇದು ಇಂಥ ಮಹತ್ವ ದಿಂದ ಕೂಡಿದೆಯೆಂದು ಹೇಳಬೇಕಾಗಿದೆ. ಉದಾಹರ ಣೆಗೆ ಕೆಲವರ ಭಾಷಣಗಳನ್ನು ಮಾತ್ರ ಪ್ರಸ್ತಾಪಿಸು ತ್ತೇನೆ.

ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಇಮಾಂ ರವರು 'ನಮಗೆ ರಾಜಕೀಯ ಸ್ವರಾಜ್ಯ ದೊರಕಿದೆ, ಆರ್ಥಿಕ ಸ್ವರಾಜ್ಯ ಸ್ಥಾಪನೆ ಮಾಡತಕ್ಕ ವಿಚಾರ ಈ ಭಾಷಣದಲ್ಲಿಲ್ಲ ಎಂದು ಈ ನಿರ್ಣಯವನ್ನು ಮಂಡಿಸಿದ ಸದಸ್ಯರೇ ಹೇಳಿದ್ದಾರೆ' ಎಂದು ಹೇಳಿದರು. ಈಗಾ ಗಲೇ ಆರ್ಥಿಕ ಸ್ವರಾಜ್ಯವನ್ನು ಸ್ಥಾಪಿಸಿದ್ದೇವೆಯೋ ಇಲ್ಲವೆ ಎಂಬ ಪ್ರಶ್ನೆಗೆ ನಾನು ಈಗ ಹೋಗುವುದಿಲ್ಲ. ಈಗ ನಾವು ಶ್ರೀಮನ್ಮಹಾರಾಜರವರ ಭಾಷಣಕ್ಕಾಗಿ ಅವರನ್ನು ವಂದಿಸಬೇಕಾಗಿದೆ. ಆರ್ಥಿಕ ಸ್ವರಾಜ್ಯ ಯಾವಾಗ ಪ್ರಾಪ್ತವಾಗುತ್ತದೆಂದರೆ, ಜನತೆಯಲ್ಲಿ ಜ್ಞಾನವಿಕಾಸವಾಗಬೇಕು, ಎಲ್ಲರಿಗೂ ಉದ್ಯೋಗ ದೊರಕಬೇಕು, ವ್ಯವಸಾಯ ಉತ್ತಮಗೊಳ್ಳಬೇಕು, ಗ್ರಾಮೋದ್ಧಾರವಾಗಬೇಕು, ನೈತಿಕಮಟ್ಟ ಹೆಚ್ಚ ಬೇಕು, ಕೈಗಾರಿಕೆಗಳು ಹೆಚ್ಚಬೇಕು. ಬಡವರ ಮತ್ತು ಹಿಂದುಳಿದವರ ಉದ್ಧಾರಕ್ಕಾಗಿ ಸರ್ಕಾರ ಪ್ರಯತ್ನ ಮಾಡಬೇಕು, ಆವಾಗ ಈ ಎಲ್ಲವನ್ನೂ ತೆಗೆದುಕೊಂಡು ಶ್ರೀಮನ್ಮಹಾರಾಜರು ಈ ವರ್ಷ ಸರ್ಕಾರದ ನೀತಿ ಅಥವಾ ಧೋರಣೆ ಏನಿದೆ ಎಂಬುದನ್ನು ಬಹಳ ಚೆನ್ನಾಗಿ ನಮ್ಮ ಮುಂದಿಟ್ಟಿದ್ದಾರೆ. ನಿನ್ನೆಯ ದಿವಸ ಮಾನ್ಯ ಶ್ರೀ ಪಟ್ಟಾಭಿರಾಮನ್‌ರವರು ಭಾಷಣಮಾಡಿದಾಗ ಅವರದೇ ಆದ ವೈಶಿಷ್ಟ್ಯದಿಂದ ಕೂಡಿದ ಅವರ ವಾಕ್ ಪ್ರವಾಹ ತಡೆಬಡೆಯಿಲ್ಲದೆ ಹರಿದುಹೋಗುತ್ತಿರುವಾಗ ಇನ್ನೆಷ್ಟು ವಿಮರ್ಶಾತ್ಮಕ ದೃಷ್ಟಿಯಿಂದ ಕಟುವಾಗಿ ವಿರೋಧಿಸುತ್ತಾರೋ ಎಂಬ ಕಾತರತೆ ನನ್ನಲ್ಲಿ ಉಂಟಾ ಗಿತ್ತು. ಆದರೆ ಅವರು ತಮ್ಮ ಭಾಷಣವನ್ನು ಮುಗಿ ಸುತ್ತಾ ಕೊನೆಯಲ್ಲಿ, ವಿದ್ಯಾಭ್ಯಾಸ ಕ್ರಮದಲ್ಲಿ ಹೊಸ ದಾಗಿ ತರತಕ್ಕ ಸುಧಾರಣೆಗಳನ್ನು ಮನಸಾರ ಪ್ರಶಂ ಸಿಸಿ ಸಮರ್ಥಿಸಿದರು. ಶ್ರೀಮಾನ್ ಲಿಂಗಣ್ಣನವರು ಸಂಸ್ಕೃತಿ ಪ್ರಸಾರದ ವಿಷಯವನ್ನು ಪ್ರಸ್ತಾಪಿಸುತ್ತಾ ನಮ್ಮ ದೇಶಕ್ಕೆ ಸಂಸ್ಕೃತಿ ಪ್ರಸಾರ ಬೇಕೆಂದು ಹೇಳಿ ದರು. ಇದನ್ನು ಬೇಕಾದರೆ ವಯಸ್ಕರ ಸಮಿತಿಯ ಶ್ರೀ ಮಾದಯ್ಯಗೌಡರಿಗೆ ವಹಿಸಬಹುದಾಗಿತ್ತು ಎಂದು ಹೇಳಿದರು. ಹಣವನ್ನುಳಿಸುವ ಸಲಹೆ ಮಾಡುತ್ತಾರೋ ಏನೋ ಎಂದು ನಿರೀಕ್ಷಿಸಿದ್ದರೆ, ಏನೂ ಮಾಡಲಿಲ್ಲ. ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರನ್ನಾದರೂ ಇಟ್ಟು ಅವರಿಗೆ ಸಂಬಳ ಕೊಡೋಣ, ಸಂಸ್ಕೃತಿ ಪ್ರಸಾ ರವೂ ಆಗಲಿ, ಸಂಬಳವನ್ನೂ ಕೊಡಿ ಎಂದು ಹೇಳಿದರು. ಒಟ್ಟಿನಲ್ಲಿ ಸಂಸ್ಕೃತಿ ಪ್ರಸಾರವನ್ನು ವಿರೋಧಿಸಲಿಲ್ಲ, ಮೆಚ್ಚಿದ್ದರು, ಶ್ಲಾಘಿಸಿದರು.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಭಾಷಣ ಮಾಡುತ್ತಾ ಹೇಳಿದರು, 'ತಮ್ಮ ಕಾನ್ಸ್ಟಿಟ್ಯೂಯನ್ಸಿ ಯಲ್ಲಿ ಹರಿಜನರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಡು ತ್ತೇವೆಂದು ಹೇಳಿದ್ದವರು ಆ ಬಗ್ಗೆ ಒಂದು ಕಾಸನ್ನಾ ದರೂ ಖರ್ಚುಮಾಡಿಲ್ಲ' ಎಂಬುದಾಗಿ. ಇದೇ ಸಂ ಬಂಧವಾಗಿ ಶ್ರೀಮನ್ಮಹಾರಾಜರವರು ಅವರ ಭಾಷಣ ದಲ್ಲಿ ಕೇವಲ 9 ತಿಂಗಳ ಅವಧಿಯೊಳಗಾಗಿ 6,91,724 ರೂಪಾಯಿಗಳನ್ನು ಖರ್ಚುಮಾಡಿ 3,833 ಮನೆಗಳನ್ನು ಕಟ್ಟಿಸಿದ್ದಾರೆಂದೂ, ಇಲ್ಲಿಯವರೆಗೆ ಅವರಿಗಾಗಿ ಕಟ್ಟಿಸಿ ಕೊಟ್ಟಿರತಕ್ಕ ಮನೆಗಳ ಒಟ್ಟು ಸಂಖ್ಯೆ 27,285 ಎಂಬುದಾಗಿ ಅವರು ಅಪ್ಪಣೆ ಕೊಡಿಸಿದ್ದಾರೆ.—ಈ ವಿಷ ಯವನ್ನು ಅವರು ನಮ್ಮೆಲ್ಲರಿಗೂ ಬಹಳ ಮನವರಿಕೆ ಯಾಗುವಂತೆ ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಆ ರೀತಿ ಟಿ. ನರಸೀಪುರದ ತಾಲ್ಲೂಕಿನಲ್ಲಿ ಕಟ್ಟಿಸಿಕೊಟ್ಟಿದ್ದರೇನು ?

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ನಮ್ಮ ಮಾನ್ಯ ಸದಸ್ಯರು ಕೆಲವರು ಪಾಂಚವಾರ್ಷಿಕ ಯೋಜನೆಯ ಬಗ್ಗೆ ಮಾತನಾಡುತ್ತ, ದೇಶದ ಸಂಪತ್ತು ಹೇಗೆ ಬೆಳೆಯ ಬೇಕು, ದೇಶದ ಅಭಿವೃದ್ಧಿ ಹೇಗೆ ಹೆಚ್ಚಾಗಬೇಕು ಎಂಬುದೊಂದನ್ನೂ ತಿಳಿಸದೆ, ಸುಮ್ಮನೆ ಅದು ಪ್ರಯೋ ಜನವಿಲ್ಲೆಂದು ಮಾತ್ರ ತಿಳಿಸಿರುತ್ತಾರೆ. ಆದರೆ ಇದರ ಬಗ್ಗೆ ಅವರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿ ಸಿದ್ದಾರೆಂದರೆ, ಇದಕ್ಕಾಗಿ ಹಣವನ್ನು ಕಡಿಸಲು ಕಷ್ಟ, ಹಣವನ್ನೆತ್ತಲು ಸಾಧ್ಯವಿಲ್ಲವೆಂದು ಹೇಳಿದ್ದಾರೆಯೆ ಹೊರತು, ಆ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಯಾರೂ ಭಿನ್ನಾಭಿಪ್ರಾಯಪಟ್ಟಂತೆ ತೋರಲಿಲ್ಲ. ಇದ ಕ್ಕಾಗಿ ನಮ್ಮ ಸರ್ಕಾರದವರು 9 ಕೋಟಿ ರೂಪಾಯಿ ಗಳನ್ನು ಸಾಲದ ರೂಪವಾಗಿಯೂ ಮತ್ತು 8·80 ಕೋಟಿ ರೂಪಾಯಿಗಳನ್ನು ತೆರಿಗೆಯ ರೂಪದಲ್ಲಿಯೂ ಎತ್ತತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡಿರು ತ್ತಾರೆಂಬುದಾಗಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ತೆರಿಗೆಗಳನ್ನು ಹಾಕದೆ ಜನಜೀವನದ ಸೌಕರ್ಯಗಳನ್ನು ಹೆಚ್ಚಿಸಿಕೊಡಿ ಎಂದು ಯಾರೂ ಹೇಳಲಾರರು. ಅನಾರೋಗ್ಯವಾದ ಮನುಷ್ಯ ನಿಗೆ ಔಷಧಿಯು ಅಧರಕ್ಕೆ ಕಹಿಯಾಗಿದ್ದರೂ ಉದರಕ್ಕೆ ಸಿಹಿಯಾಗಿದ್ದಂತೆ ಹೇಗೆ ನಾವೆಲ್ಲರೂ ಔಷಧಿಯನ್ನು ಪರಿಗಣಿಸಿ ಸೇವಿಸುತ್ತೇವೆಯೋ ಅದೇ ರೀತಿಯಲ್ಲಿ ಇದೂ ಸಹ ಇರುತ್ತದೆ. ಯಾವಾಗ ಒಂದು ದೇಶದ ಆರ್ಥಿಕ ಪರಿಸ್ಥಿತಿಯು ಮುಗ್ಗಟ್ಟಿನಲ್ಲಿ ಸಿಕ್ಕಿಬಿದ್ದು ದೇಶದ ಅಭಿ ವೃದ್ಧಿಗೆ ಅವಕಾಶವಿಲ್ಲವೆಂದು ಕಂಡುಬಂದಾಗ ಜನರಿಗೆ ಕೊಂಚ ನೋವಾದರೂ ಅದನ್ನು ಲೆಕ್ಕಿಸದೆ ತೆರಿಗೆ ಗಳನ್ನು ನಾವು ತೆರಲೇಬೇಕಾಗುತ್ತದೆ, ಆದರೆ ಅದನ್ನು ಯಾವ ರೀತಿ, ಯಾರು ಯಾರಿಗೆ ಅನ್ವಯಿಸುವಂತೆಮಾಡ ಬೇಕೆಂಬುದನ್ನು ನಾವು ಮುಂದೆ ಪರ್ಯಾಲೋಚಿಸಲು ಅವಕಾಶವಿದೆ.

ಇನ್ನು ಸಂಸ್ಥಾನದ ಮುನಿಸಿಪಾಲಿಟಿಗಳಲ್ಲಿ ನೀರು ಸರಬರಾಯಿಯ ಯೋಜನೆಗಳಿಗೆ ಹಣಕಾಸಿನ ಸಹಾಯವನ್ನು ಸಾಲದ ರೂಪದಲ್ಲಿ ಒದಗಿಸುವುದಕ್ಕಾಗಿ ನಮ್ಮ ಸರ್ಕಾರದವರು 50 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿರುತ್ತಾರೆ. ಈ ಮೊಬಲಗನ್ನು 79 ಮುನಿಸಿಪಾಲಿಟಿಗಳಿಗೆ ಹಂಚಲು ಈಗಾಗಲೇ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆಯೆಂದು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಇದೇ ಸಂದರ್ಭದಲ್ಲಿ ನಾನು ಚುನಾವಣೆ ಹೊಂದಿ ಬಂದಿರತಕ್ಕ ನನ್ನ ಕಾನ್‌ಸ್ಟಿಟ್ಯುಯನ್ಸಿಗೆ ಎಂದರೆ ಹೊಸಕೋಟೆ ಮತ್ತು ಆನೇಕಲ್ ತಾಲ್ಲೂಕು ಮುನಿಸಿಪಾಲಿಟಿಗಳಿಗೆ ಈ ನೀರಿನ ಸರಬರಾಯಿಗೋಸ್ಕರವಾಗಿ ಸರ್ಕಾರದವರು 2½ ಲಕ್ಷ ರೂಪಾಯಿಗಳ ಸಾಲವನ್ನು ಮಂಜೂರುಮಾಡಿರುವುದಕ್ಕಾಗಿ ನಮ್ಮ ಸರ್ಕಾರಕ್ಕೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

ಇನ್ನು ಸಾಮುದಾಯಿಕ ಯೋಜನೆ, ಎಂದರೆ, ನಾವು ಕಮ್ಯುನಿಟಿ ಪ್ರಾಜೆಕ್ಟ್ ಎಂಬುದಾಗಿ ಯಾವುದನ್ನು ಕರೆಯುತ್ತಿದ್ದೇವೆಯೋ ಅಂಥದನ್ನು ಹೋದ ವರ್ಷದ ಅಕ್ಟೋಬರ್ ಎರಡನೆಯ ತಾರೀಖಿನಲ್ಲಿ ಪ್ರಾರಂಭಿಸಲಾಗಿದೆ.

ಹೀಗೆಯೇ ಪ್ರತಿಯೊಂದು ಅಂಶದ ಬಗ್ಗೆಯೂ ಅಂಕಿ ಅಂಶಗಳನ್ನು ಕೊಟ್ಟುಕೊಂಡು ಹೋಗುತ್ತ ಭಾಷಣವನ್ನು ಮುಂದುವರಿಸಿದ್ದೇ ಆದರೆ ಇದೇ ಒಂದು ಬಡ್ಜೆಟ್ ಭಾಷಣವಾಗಿ ಪರಿಣಮಿಸೀತೆಂಬ ಒಂದು ಶಂಕೆ ನನಗಿರುವುದರಿಂದ, ನಾನಿನ್ನು ಹೆಚ್ಚು ವಿಷಯಗಳನ್ನು ಪ್ರಸ್ತಾಪಿಸಲಿಕ್ಕೆ ಇಚ್ಛೆಪಡದೆ, ನಮ್ಮ ಶ್ರೀಮನ್ಮಹಾರಾಜರವರು ಸಂಸ್ಥಾನದ ಪುರೋಭಿವೃದ್ಧಿಯನ್ನೂ ಮತ್ತು ಪ್ರತಿಯೊಬ್ಬ ಪ್ರಜೆಯ ಏಳಿಗೆಯನ್ನೂ ಸರ್ವಮುಖಗಳಿಂದಲೂ ಕೋರಿ ನಮಗೆಲ್ಲರಿಗೂ ಅಪ್ಪಣೆಕೊಡಿಸಿರತಕ್ಕಂಥ ಅವರ ದೊಡ್ಡ ಅಮೋಘವಾದ ಭಾಷಣದ ಸಂಬಂಧವಾಗಿ ನಮ್ಮೆಲ್ಲರ ವಂದನಾರ್ಪಣೆಗಳನ್ನು ಸಲ್ಲಿಸಲು ತಂದಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡಿ, ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ) —ಸ್ವಾಮಿ, 7ನೆಯ ತಾರೀಖು ಶನಿವಾರ ನಡೆದ ಮೈಸೂರು ವಿಧಾನ ಪರಿಷತ್ತಿನ ಮತ್ತು ಮೈಸೂರು ವಿಧಾನ ಸಭೆಯ ಸಂಯುಕ್ತಾಧಿವೇಶನದಲ್ಲಿ ರಾಜಪ್ರಮುಖರು ಇತ್ತಿರುವ ಭಾಷಣದ ಬಗ್ಗೆ ಈ ಸಭೆಯವರು ಅಭಿನಂದನೆಗಳನ್ನರ್ಪಿಸಬೇಕೆಂದು ಒಂದು ನಿರ್ಣಯವೂ ಮತ್ತು ಅದರ ಬಗ್ಗೆ ವಿಷಾದವನ್ನು ಸೂಚಿಸತಕ್ಕ ಬಗ್ಗೆ ಕೆಲವು ತಿದುಪಡಿ ಸೂಚನೆಗಳನ್ನೊಳಗೊಂಡ ನಿರ್ಣಯಗಳೂ ಈಗ ಸಭೆಯಮುಂದೆ ಮಂಡಿಸಲ್ಪಟ್ಟಿವೆ. ಈ ಎರಡು ಸೂಚನೆಗಳ ಬಗ್ಗೆಯೂ ಕೆಲವು ಮಾತುಗಳನ್ನಾಡಬೇಕೆಂದು ನಾನೀಗ ಎದ್ದು ನಿಂತಿದ್ದೇನೆ.

ಈ ಸಂದರ್ಭದಲ್ಲಿ ನಾನು ಸರ್ಕಾರದವರ ಮುಖ್ಯ ಗಮನವನ್ನು ಅವರ ಧ್ಯೇಯಗಳೇನಿವೆಯೋ ಅವುಗಳ ಕಡೆಗೆ ಸೆಳೆಯಬೇಕೆಂದು ಆಶಿಸಿದ್ದೇನೆ. ಆದರೆ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿದ್ದಿದ್ದರೆ ಬಹಳ ಚೆನ್ನಾಗಿತ್ತು. ನಾನು ಸಾಗರದಲ್ಲಿ ಅವರಿಗೆ ಒಂದು ಮನವಿಯನ್ನು ಕೊಡಲು ಹೋದಾಗ 'ನೀವುಬನ್ನಿ, ಎಲ್ಲ ವಿಷಯಗಳನ್ನೂ ಚರ್ಚೆಮಾಡೋಣ' ಎಂದು ಹೇಳಿದರು. 'I am a better representative than you' ಎಂದು ಹೇಳಿದರು. ಆದರೆ ಈ ದಿವಸ ಅವರು ಅನಾರೋಗ್ಯದ ನಿಮಿತ್ತ ಇಲ್ಲಿಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ನಾನು ಅವರ ಆರೋಗ್ಯ ಬೇಗ ಉತ್ತಮಗೊಳ್ಳಲೆಂದು ಆಶಿಸುತ್ತೇನೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರದ ಧ್ಯೇಯ, ಅದರ ಧೋರಣೆ ಮತ್ತು ಅದು ಅನುಸರಿಸುತ್ತಿರುವ ನೀತಿ ಮತ್ತು ದೇಶದ ಜನತೆ ಇವರಿಂದೇನನ್ನು ನಿರೀಕ್ಷಣೆ ಮಾಡುತ್ತಿತ್ತು, ಅದರ ಬಗ್ಗೆ ಇವರೇನುಮಾಡಿರುತ್ತಾರೆ ಎಂಬ ವಿಚಾರದಲ್ಲಿ ನಾನು ಕೆಲವು ಮಾತುಗಳನ್ನು ಕಟುವಾಗಿ ಆಡಿದರೆ, ಆ ಬಗ್ಗೆ ತಾವೆಲ್ಲರೂ ತಮ್ಮ ಸಹನೆಯನ್ನು ತೋರಿಸಬೇಕೆಂದು ನಾನು ಮೊದಲೇ ತಮ್ಮೆಲ್ಲರನ್ನೂ ಕೇಳಿಕೊಳ್ಳುತ್ತೇನೆ.

ನಾನು ದೂರದಿಂದ ನಿಂತು ನೋಡಿದರೆ, ಈ 'ವೆಲ್‌ಫೇರ್ ಸ್ಟೇಟ್' ಎಂದ ಹೇಳಿಕೊಳ್ಳುತ್ತಿರುವ ಸರ್ಕಾರದ ಪ್ರಯತ್ನ ಎತ್ತ ಕಡೆಗೆ ಸಾಗುತ್ತಿದೆಯೆಂಬುದನ್ನು ವಿಮರ್ಶೆಮಾಡಿ ನೋಡಿದರೆ, ನನಗೆ ಅದು ಹೇಗೆ ಕಂಡುಬರುತ್ತಿದೆಯೆಂದರೆ, ಒಂದು ತೂತು ಮಡಕೆಯಲ್ಲಿ ನೀರನ್ನು ಹೊತ್ತುಕೊಂಡು ಹೋಗಿ ಗುಡ್ಡದಮೇಲೆ ಮರಳಿನಿಂದ ಒಂದು ಮನೆಯನ್ನು ಕಟ್ಟಲು ನಡೆಸುತ್ತಿರುವ ಯತ್ನದಂತೆ ಕಾಣುತ್ತಿದೆ. ಈ ಮಾತಿನಲ್ಲಿ ಸತ್ಯವಿದೆಯೇ ಇಲ್ಲವೇ ಎಂಬುದನ್ನು ತಾವು ತಿಳಿಯಬೇಕಾದರೆ, ತಾವು ಹೊರಗಡೆ ಹೋಗಿ ಎಲ್ಲರಿಂದಲೂ ಅಭಿಪ್ರಾಯಗಳನ್ನು ತೆಗೆದುಕೊಂಡು ಅವುಗಳನ್ನೆಲ್ಲ ಕ್ರೋಢೀಕರಿಸಿ, ಅನಂತರ ನೀವು ಇದನ್ನು ವಿಚಾರಮಾಡಬಹುದು. ಆಗ ತಮಗೇ ಇದು ವೇದ್ಯವಾಗುತ್ತದೆ. ಈ ಬಗ್ಗೆ ಜನರ ಅಭಿಮತವೇನಿರುತ್ತದೆಂಬುದನ್ನು ನಾನಾಗಲೇ ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನೆಹರೂರವರು ಹೇಳಿರತಕ್ಕಂಥ ಒಂದು ಮಾತನ್ನು ಪ್ರಸ್ತಾಪಿಸುವುದು ಅನುಚಿತವಾಗಲಾರದೆಂದು ಭಾವಿಸುತ್ತೇನೆ. ಅವರು ಟೀಕೆಮಾಡತಕ್ಕವರ ವಿಚಾರದಲ್ಲಿ, 'the country will go to the dogs' ಎಂದು ಹೇಳುವವರು ಕರ್ನಲ್ ಬ್ಲಿಂಪ್ಸ್ ಇದ್ದಹಾಗೆ ಎಂದು ಹೇಳಿದ್ದಾರೆ.

ಅವರು ಮಾಡತಕ್ಕ ಪ್ರಯತ್ನದಲ್ಲಿ, ಒಂದು ದೇಶವನ್ನು ಹೊಸದಾಗಿ ನಿರ್ಮಾಣಮಾಡತಕ್ಕ ಉತ್ಸಾಹ ಭರದಲ್ಲಿ, ಜನರು ಆಡಿಕೊಳ್ಳತಕ್ಕ ಮಾತುಗಳಿಂದ ಅವರ ಮನಸ್ಸಿಗೆ ಹಾಗೆ ಅನ್ನಿಸಿರಬಹುದು. ಅದಕ್ಕಾಗಿ ಅವರು ಹಾಗೆ ಹೇಳಿದ್ದರೂ ಹೇಳಿರಬಹುದು. ಹಾಗೆ ಆ ಮಾತುಗಳನ್ನು ಅವರು ಒಂದು ದೇಶವನ್ನು ಹೊಸದಾಗಿ ನಿರ್ಮಾಣಮಾಡತಕ್ಕ ಉತ್ಸಾಹ ಭರದಲ್ಲೇ ಆಡಿರಬಹುದೆಂದು ಭಾವಿಸೋಣ. ಆದರೆ ಹಾಗೆ ಅವರು ಮಾಡಿರತಕ್ಕ ಭಾಷಣದಲ್ಲಿ ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಅವುಗಳನ್ನೆಲ್ಲ ಈ ಸಂದರ್ಭದಲ್ಲಿ ಹೇಳಬೇಕಾಗಿಲ್ಲ.

ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿ ಅಡಕವಾಡಬೇಕಾಗಿದ್ದಂಥ ಬೇರೆಬೇರೆ ಮಹತ್ತಾದ ಅನೇಕ ಘಟನೆಗಳಿದ್ದವು. ಅವುಗಳೆಲ್ಲವನ್ನೂ ಅವರು ತಿಳಿಸಬೇಕಾಗಿತ್ತು. ಅವರ ಮನಸ್ಸಿಗೆ ಚೆನ್ನಾಗಿ ತಿಳಿದಿದ್ದಾಗ್ಯೂ ಕೆಲವನ್ನು ಮಾತ್ರ ಹೇಳಿ ಮತ್ತೆ ಕೆಲವು ವಿಷಯಗಳನ್ನು ಬಿಡಲು ಶ್ರೀಮನ್ಮಹಾರಾಜರವರಿಗೆ ಯಾರು ಅಂಥ ಸೂಚನೆಗಳನ್ನು ಕೊಟ್ಟರೋ ಅಥವಾ ಅವರೇ ಆ ವಿಷಯಗಳನ್ನು ಬಿಡಲು ಅಂಥಾ ಕಾರಣಗಳಾದರೂ ಏನಿತ್ತೋ ನನಗಂತೂ ಅರ್ಥವಾಗದು. ಅಥವಾ ಅವರು ಆ ವಿಷಯಗಳನ್ನೆಲ್ಲಾ ಬಹಳ ಕ್ಷುಲ್ಲಕ ವಿಷಯಗಳೆಂದು ಬಿಟ್ಟಿರಬಹುದೇ ಎಂದು ಯೋಚಿಸಿ ನೋಡಿದರೆ, ಅದಕ್ಕೂ ಸಹ ಅಂಥ ಅವಕಾಶವಿದ್ದಹಾಗೆ ನನಗೆ ಕಾಣುವುದಿಲ್ಲ. ಮೊನ್ನೆ ತಾನೆ ಮಂತ್ರಿಮಂಡಲದಲ್ಲಿದ್ದಂಥ ಒಬ್ಬ ಮಂತ್ರಿಗಳು

(ಶ್ರೀ ಎಸ್. ಗೋಪಾಲಗೌಡ.)

ತಮ್ಮ ಸ್ಥಾನಕ್ಕೆ ರಾಜೀನಾಮೆಕೊಟ್ಟು ಹೊರಗೆ ಬಂದಿದ್ದಾರೆ. ಆದರೆ ಈ ಸಂದರ್ಭದಲ್ಲಿ ಪೂರ್ಣ ಮಂತ್ರಿಮಂಡಲವೇ ರಾಜೀನಾಮೆಯನ್ನು ಕೊಡಬೇಕಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಈ ಸಂದರ್ಭದಲ್ಲಿ ನಡೆದಿರುವಂಥ ಇನ್ನೂ ಅನೇಕ ಸತ್ಯಾಂಶಗಳನ್ನು ಮುಚ್ಚಿಹಾಕಿದ್ದಾರೆಂದು ನನಗೆ ತಿಳಿದುಬಂದಿದೆ. ಅದೆಲ್ಲವನ್ನೂ ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ.

ಇನ್ನು ಕರ್ಣಾಟಕ ಏಕೀಕರಣದ ವಿಷಯವಾಗಿ, ಎಂದರೆ, ಭಾಷಾವಾರು ಪ್ರಾಂತ್ಯಗಳ ಪ್ರಶ್ನೆ ಬಂದಿದ್ದಾಗ, 'ಅದಕ್ಕೆ ಈಗ ಕಾಲ ಸನ್ನಿಹಿತವಾಗಿಲ್ಲ' ಎಂದು ಹೇಳಿಬಿಟ್ಟಿದ್ದವರು, ಇತ್ತೀಚೆಗೆ ಮೈಸೂರಿನಿಂದ ಹಾಗೆಯೇ ನೇರವಾಗಿ ಎರಡು ಮನವಿಗಳನ್ನು ಕೇಂದ್ರಕ್ಕೆ ಕಳುಹಿಸಿ, ಒಂದರಲ್ಲಿ ನಮಗೆ ಸದ್ಯಕ್ಕೆ ಭಾಷಾವಾರು ಪ್ರಾಂತದ ಅಗತ್ಯವಿಲ್ಲವೆಂದು ಹೇಳಿ, ಅನಂತರ ಎರಡನೆಯ ಮನವಿಯಲ್ಲಿ ನಮಗೆಲ್ಲರಿಗೂ ಅದರಲ್ಲಿ ಪೂರ್ಣಮನಸ್ಸಿರುತ್ತೆಂದೂ ಇದಕ್ಕೆ ಯಾರದೂ ವಿರೋಧವಿಲ್ಲವೆಂದೂ ತಿಳಿಸಿದ್ದಾರೆ. ಜಸ್ಟಿಸ್ ವಾಂಚೂರವರು ಪ್ರತಿಯೊಂದು ಕಡೆಯೂ ಹೋಗಿ ಜನರ ಅಭಿಪ್ರಾಯಗಳೇನಿರುತ್ತದೆಂಬುದನ್ನು ತಿಳಿದುಕೊಂಡು ಭಾಷಾವಾರು ಪ್ರಾಂತಗಳ ನಿರ್ಮಾಣ ಕಾರ್ಯದಲ್ಲಿ, ಅದರಲ್ಲೂ ಮೊದಲನೆಯದಾಗಿ ಆಂಧ್ರದೇಶದ ನಿರ್ಮಾಣಕ್ಕೆ ಅಡಿಪಾಯವನ್ನು ಹಾಕುತ್ತಿರುವಂಥ ಸನ್ನಿವೇಶ ಒದಗಿದ್ದರೂ, ಮತ್ತು ಈ ಭಾಷಾವಾರು ಪ್ರಾಂತಗಳು ಬೇಗ ನಿರ್ಮಾಣವಾಗತಕ್ಕಂಥ ಕಾಲ ಸನ್ನಿಹಿತವಾಗುತ್ತಿದೆಯೆಂದು ಇಡೀ ಕರ್ಣಾಟದಲ್ಲೆಲ್ಲಾ ಪ್ರಚಾರ ಕಾರ್ಯಗಳನ್ನು ನಡೆಸುತ್ತಿರುವಾಗ, ಆ ವಿಷಯವಾಗಿ ಇವರು ಏನನ್ನೂ ಪ್ರಸ್ತಾಪಿಸದೆ ಇದನ್ನು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟುಬಿಟ್ಟಿರುತ್ತಾರೆಂದೂ ಮತ್ತು ಹಾಗೆ ಇದನ್ನು ಕೈಬಿಡಲು ಇದರಲ್ಲಿ ಇನ್ನೂ ಏನೋ ಬೇರೆ ರಾಜಕೀಯವಿದೆಯೆಂದು ನಾನು ಭಾವಿಸುವುದಕ್ಕೂ ಕೂಡ ಅವಕಾಶವಿದೆ. ಇದೆಲ್ಲವನ್ನೂ ನೋಡಿದರೆ ಇವರು ಬೇಕೆಂದೆಯೇ ಇದನ್ನು ಬಿಟ್ಟಿದ್ದಾರೆಂದು ಚೆನ್ನಾಗಿ ಎದ್ದು ಕಾಣುತ್ತದೆ.

ಹೀಗೆ ಈ ರಾಜಪ್ರಮುಖರ ಭಾಷಣದಲ್ಲಿ ಇನ್ನೂ ಅನೇಕ ಬಹು ಮುಖ್ಯವಾದಂಥ ವಿಷಯಗಳೆಲ್ಲವನ್ನೂ ಕೈಬಿಡಲಾಗಿದೆ. ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳಿಕೊಂಡು ರಾಜ್ಯಭಾರಮಾಡುತ್ತಿರುವ ಈ ಮಂತ್ರಿಮಂಡಲಗಳು ಜನರಿಗೆ ಅನುಕೂಲವಾದಂಥ ಬಿಲ್ಲುಗಳನ್ನು ತಂದು ದೇಶಕ್ಕೆ ಅನುಕೂಲಮಾಡುತ್ತಾರೆಂದು ಬಹಳವಾಗಿ ಆಶಿಸಿದ್ದೆವು. ಈ ಜೋಡಿ, ಜಹಗೀರ್ ಇತ್ಯಾದಿಗಳನ್ನೆಲ್ಲ ರದ್ದುಪಡಿಸಿ ಭೂ ಸ್ವಾಮ್ಯವನ್ನು ಪರಿವರ್ತನೆಮಾಡಿ, ಭೂಮಿಯನ್ನು ಉಳತಕ್ಕ ರೈತನಿಗೆ ಭೂಮಿಯನ್ನು ಹಂಚುತ್ತೇವೆಂದು ಹೇಳಿದ್ದರು. ಆದರೆ ಅಂಥ ಒಂದು ಅನುಕೂಲವನ್ನು ಕಲ್ಪಿಸತಕ್ಕ ಶಕ್ತಿ ಇಡೀ ಭಾರತದಲ್ಲೇ ಯಾವ ಸಿದ್ಧಾಂತಕ್ಕೂ ಇದ್ದಂತೆ ಕಾಣುವುದಿಲ್ಲ. ಅಲ್ಲಿ ಕಾಶ್ಮೀರದ ಷೇಕ್ ಅಬ್ದುಲ್ಲಾರವರು ಭೂ ಸುಧಾರಣೆಮಾಡಲು ಸಾಧ್ಯವಾಗಬಹುದು, ಆದರೆ ನೆಹರೂರವರಿಗೆ ಇಲ್ಲಿ ಮಾಡಲು ಸಾಧ್ಯವಾಗಿರುವುದಿಲ್ಲ ಎಂದರೆ, ಇದರಿಂದ ಏನೊಂದು ಕಾರ್ಯಮಾಡಲಿಕ್ಕೂ ಆಗುವುದಿಲ್ಲವೆಂದು ಹೇಳಬೇಕಾಗಿದೆ. ಈ ಲ್ಯಾಂಡ್ ರಿಫಾರಂಸ್‌ಮೇಲೆಯೇ ಈಗ ತಾವು ಹೇಳತಕ್ಕ ಪಾಂಚವಾರ್ಷಿಕ ಯೋಜನೆಯು ಬಹುಭಾಗ ನಿಂತಿದೆ. ತಾವು ಬಿಲ್ಲುಗಳನ್ನು ಈ ಸಭೆಯಮುಂದೆ ತರಬೇಕೆಂದು ಏನೊಂದು ಪೀಠಿಕೆಯನ್ನು ಹಾಕಿದ್ದೀರೋ ಅದರಲ್ಲಿ ಇಂಥಾ ಒಂದು ಬಿಲ್ಲನ್ನು ತರತಕ್ಕ ಉದ್ದೇಶವಾದರೂ ಇದೆಯೆಂದು ತಾವು ತಿಳಿಸಿದ್ದರೂ ತಿಳಿನಬಹುದಿತ್ತು. ಆದರೆ ತಾವು ಇಂಥ ಮುಖ್ಯವಾದ ಮತ್ತು ಮೂಲಭೂತವಾದ ಬದಲಾವಣೆಗಳಿಗೆ ಸಂಬಂಧಪಟ್ಟ ಬಿಲ್ಲುಗಳೊಂದನ್ನೂ ತರುವ ಸೂಚನೆಯೇ ಇಲ್ಲ. ಇಂಥ ವಿಷಯಗಳೆಲ್ಲಾ ಈ ಭಾಷಣದಲ್ಲಿ ಕೈಬಿಟ್ಟುಹೋಗಿವೆ.

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ "ನಿಮ್ಮ ಹೃತ್ಪೂರ್ವಕವಾದ ಸಹಕಾರವೂ, ಸಂಪೂರ್ಣ ಬೆಂಬಲವೂ ದೊರೆತರೆ ನಮ್ಮ ಸರ್ಕಾರದವರು ಅವರ ಕೆಲಸಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು, ಆಡಳಿತ ಸುಗಮವಾಗಿ ನಡೆಯಲು ಸಹಾಯವಾಗುತ್ತದೆ" ಎಂದು ತಿಳಿಸಿದ್ದಾರೆ. ಆದರೆ ಈ ಸಂದರ್ಭದಲ್ಲಿ ಶ್ರೀ ವಿ. ಪಿ. ಮೆನನ್‌ರವರ ಒಂದು ಮಾತನ್ನು ತಿಳಿಸಬೇಕಾಗಿದೆ. ಅವರು ಏನು ಹೇಳಿದ್ದಾರೆಂದರೆ:—

'There is no Government worth the name in any of the Part B States. They may collapse any moment due to their internal conflict, financial bankruptsy and other things.'

ಶ್ರೀ ಮೆನನ್‌ರವರು ಈ ಮಾತುಗಳನ್ನು ಯಾರ ಪರವಾಗಿಯೂ ಹೇಳಿಲ್ಲ. ಮತ್ತು ಅವರು ಯಾರ ಪಕ್ಷವನ್ನೂ ಸೇರಿರತಕ್ಕವರಲ್ಲ. ಅವರ ಭಾಷಣದಲ್ಲಿ ಅಂಥ ಒಂದು ಹೇಳಿಕೆಯನ್ನೇ ಅವರು ಕೊಟ್ಟಿದ್ದಾರೆ.

Sri A. G. RAMACHANDRA RAO.—At any rate his remarks do not apply to Mysore. Mysore is an exception to Part B States.

ಶ್ರೀ ಎಸ್. ಗೋಪಾಲಗೌಡ.—ನಾನು ಅಂಥ ಒಂದು ಎಕ್ಸೆಪ್ಷನ್ನನ್ನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಲು ಆಗುವುದಿಲ್ಲ.

Sri A. G. RAMACHANDRA RAO.—It is left to you.

ಶ್ರೀ ಎಸ್. ಗೋಪಾಲಗೌಡ.—ಈ ಭಾಷಣದಲ್ಲಿ ಮೊಟ್ಟಮೊದಲನೆಯದಾಗಿ ಸಂಸ್ಕೃತಿ ಪ್ರಚಾರಕ್ಕೆ ಪ್ರಥಮಸ್ಥಾನ ಕೊಟ್ಟಿದ್ದಾರೆ. ಇದನ್ನು ನಾನು ಒಂದು ದುಃಖಕರವಾದ ಪ್ರಸಂಗವೆಂದು ಬಹಳ ಕ್ರೋಧದಿಂದ ಹೇಳಬೇಕಾಗಿದೆ. ಹೀಗೆ ನಾನು ಕ್ರೋಧದಿಂದ ಹೇಳುವಾಗ ಒಂದು ಕಣ್ಣು ಕೆಂಪಾಗುತ್ತದೆ; ಇನ್ನೊಂದುಕಡೆ ಜನತೆಯ ಸ್ಥಿತಿಗತಿಗಳನ್ನು ಒಳಹೊಕ್ಕು ನೋಡುವುದಾದರೆ, ಅವರು ಸತ್ತು ಸುಣ್ಣವಾಗುತ್ತಿದ್ದಾರೆ; ಅದನ್ನು ನೋಡಿ ಇನ್ನೊಂದು ಕಣ್ಣಿನಲ್ಲಿ ನೀರು ಬರುತ್ತಿದೆ. ಇಂಥ ಒಂದು ಸಂಸ್ಕೃತಿ ಪ್ರಚಾರದ ನಾಟಕವನ್ನಾಡಲು ಒಂದುಕಡೆ ಇದಕ್ಕೆ 5 ಲಕ್ಷ ಖರ್ಚಾಗುತ್ತದೆಂದೂ ಮತ್ತೊಂದುಕಡೆ ಇದಕ್ಕೆ 15 ಲಕ್ಷ ಮುಡುಪಾಗಿಟ್ಟಿದ್ದಾರೆಂದೂ ಜನತೆಯು ಹೇಳಿಕೊಳ್ಳುತ್ತಿದ್ದಾರೆ.

Sri J. MOHAMED IMAM.—On a point of information.

I think five lakhs is mentioned under Supplementary Demand.

Sri A. G. RAMACHANDRA RAO.—It is provided in the Budget.

ಶ್ರೀ ಎಸ್. ಗೋಪಾಲಗೌಡ.—ಹೀಗೆ ಸಂಸ್ಕೃತಿ ಪ್ರಚಾರಕ್ಕೆ ಅಡಿಗಲ್ಲು ಹಾಕುತ್ತ, ಇದೇ ಸಂದರ್ಭದಲ್ಲಿ

ನಮ್ಮ ವಿದ್ಯಾಭ್ಯಾಸದ ಬದಲಾವಣೆಯನ್ನು ಸಹ ಪ್ರಸ್ತಾಪಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಕಡೆ ಭಾಷಣಮಾಡುತ್ತ, 'ಮನುಷ್ಯನಿಗೆ ಬರಿ ವಸ್ತು ಪ್ರಪಂಚ ಒಂದರಲ್ಲೇ ಬದುಕಿದ್ದರೆ ಸಾಲದು, ಅಲ್ಲಿಗೆ ಎಲ್ಲ ಮುಕ್ತಾಯವಾದಂತಾಗಲಿಲ್ಲ; ಮನುಷ್ಯನಿಗೆ ಅನ್ನಮಯಕೋಶ, ಪ್ರಾಣಮಯಕೋಶ, ಜ್ಞಾನಮಯಕೋಶ ಇಷ್ಟಕ್ಕೇ ಮುಕ್ತಾಯವಾದರೆ ಸಾಲದು, ಅವನಿಗೆ ವಿಜ್ಞಾನಮಯಕೋಶ, ಆನಂದ, ಇತ್ಯಾದಿಗಳೆಲ್ಲದರಲ್ಲೂ ವಿಹರಿಸುವಂಥ ಅವಕಾಶವಿರಬೇಕು' ಎಂದು ಹೇಳಿದ್ದಾರೆ. ಮನುಷ್ಯನ ಜೀವನದ ಮುಖ್ಯಾಧಾರ ಪ್ರಾಣ. ಇದನ್ನು ಪೂರ್ಣ ದೃಷ್ಟಿಯಿಟ್ಟು ಯಾವ ಕಡೆಯಿಂದ ನೋಡಿದರೂ ಮನುಷ್ಯನ ಜೀವಾಧಾರಕ್ಕೆ ಅನ್ನಮಯಕೋಶ ಮುಖ್ಯ ಅಧಾರವಾದುದಾಗಿದೆ. ಈ ತುತ್ತಿನ ಚೀಲ ಬರಿದಾಗಿದ್ದರೆ ಪ್ರಾಣಪಕ್ಷಿಯು ಹಾರಿಹೋಗುತ್ತದೆ.

Mr. SPEAKER.—You have two minutes more.

2—30 P.M.

ಶ್ರೀ ಎಸ್. ಗೋಪಾಲಗೌಡ.—ಅನ್ನದ ಆಧಾರದ ಮೇಲೆ ಪ್ರಾಣ; ಪ್ರಾಣದ ಆಧಾರದಮೇಲೆ ಜ್ಞಾನ; ಇವು ಮೂರರಮೇಲೆ ವಿಜ್ಞಾನ; ಅದರಿಂದ ಆನಂದ. ಇದು ಎಲ್ಲರಿಗೂ ತಿಳಿದಿರುವ ಮಾತು. ಆದರೆ ದೇಶದಲ್ಲಿ ಕ್ಷಾಮಡಾಮರಗಳಿದ್ದು 'ಅನ್ನ' 'ಅನ್ನ' ಎಂದು ಜನ ಬಳಲುತ್ತಿದ್ದರೆ 'ನೀವು ಭಾರತ ಓದಿ, ರಾಮಾಯಣ ಓದಿ, ಹರಿದಾಸರ ಕಥೆಗಳನ್ನು ಕೇಳಿ, ಶಿವಶರಣರ ವಚನಗಳನ್ನು ಹಾಡಿ' ಎನ್ನುವುದು ಎಷ್ಟು ಹಾಸ್ಯವಾಗಿ ಕಾಣುತ್ತದೆ! ಇದನ್ನು ನಾನು ನಿಜವಾಗಿಯೂ ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆಂದು ತಿಳಿಯಿರಿ. ಇಂಥ ದುರದೃಷ್ಟ ನಮ್ಮ ದೇಶಕ್ಕೆ ಬಂತೇ, ಇಂಥ ಅನೀತಿಯ ಸರ್ಕಾರ ಇನ್ನೂ ಜೀವಂತವಾಗಿ ಇದೆಯೆ, ಎಂಬ ಆರ್ತನಾದ ಕೇಳಿಬರುತ್ತಿದೆ!! ಇದರಿಂದಾಗಿ ನನಗೆ ಇದುವರೆಗೆ ಪ್ರಜಾಪ್ರಭುತ್ವದಲ್ಲಿದ್ದ ಅಲ್ಪಸ್ವಲ್ಪ ನಂಬಿಕೆಯೂ ಅಳಿದುಹೋಗುತ್ತಾ ಬಂದಿವೆ. ಈ ಹೊತ್ತು ಸಂಸ್ಕೃತಿಯನ್ನು ನಾವು ಪುನರುದ್ಧಾರಮಾಡುತ್ತೇವೆಂದು ಹೇಳಿಕೊಂಡು ಬೊಬ್ಬೆಹಾಕುತ್ತಾ ಊರು ಊರುಗಳಲ್ಲಿ ಹೋಗುತ್ತಿದ್ದರೆ, ಇದು ಕೇವಲ ಹೊಗಳುಭಟ್ಟರ ಕೂಟ, ಹೂವಿನ ಮಾಲೆಗಾಗಿ, ಹೊಗಳಿಸಿಕೊಳ್ಳಬೇಕು ಎಂಬ ಕಾಂಕ್ಷೆಯಿಂದ ಅಲ್ಲಿ ಹೋಗಿ ಕೂರುತ್ತಿದ್ದೀರಿ ಎಂದು ಹೇಳದೆ ವಿಧಿಯಿಲ್ಲ. ಅಲ್ಲಿ ನಡೆಯುವುದನ್ನು ನೋಡಿದರೆ ನನಗೊಂದು ಪದ್ಯ ಸಮಯೋಚಿತವಾಗಿ ಜ್ಞಾಪಕ್ಕೆ ಬರುತ್ತದೆ; ಏನೆಂದರೆ:

"ಒಂಟೆಗಳ ಮದುವೆಯಲ್ಲಿ ಕತ್ತೆಗಳೆ ಗಾಯಕರು!
ತಮತಮಗೆ ಹೊಗಳಿಕೊಳ್ಳುವರು.
ಏನ್ರೂಪಮೇನ್ನಾನಮೆಂದು!"

ಒಬ್ಬ ಸದಸ್ಯರು.—ಸಂಸ್ಕೃತಿ ಪ್ರಚಾರವನ್ನು ತಾವು ಇಲ್ಲೇ ಮಾಡುತ್ತಿದ್ದೀರಿ!

ಶ್ರೀ ಎಸ್. ಗೋಪಾಲಗೌಡ.—ಹೌದು. ಈ ಮಾನ್ಯ ಸಭೆಯ ಮುಂದೆ ನಾನು ಸಂಸ್ಕೃತಿ ಪ್ರಚಾರ ಮಾಡಬೇಕಾದ ಪ್ರಸಂಗ ಬಂದಿದೆಯಲ್ಲ! ಅದಕ್ಕಾಗಿ ನಾನು ವಿಷಾದಪಡುತ್ತೇನೆ. ಈ ಹೊತ್ತು ದೇಶದಲ್ಲಿ ಅನ್ನವಿಲ್ಲದೆ, ಕವಿಯು ಹಾಡಿರುವಂತೆ,

'ಅನ್ನದನ್ಯಾಯ ದಾವಾಗ್ನಿಯಲಿ ಕರಗುತಿದೆ
ನಗತೆ, ಸಂಸ್ಕೃತಿ, ಪ್ರೀತಿ, ದಿವದಬಯಕೆ!'

ಅನ್ನಕೊಡಿ, ಬಟ್ಟೆಕೊಡಿ, ವಸತಿಮಾಡಿಕೊಡಿ ಎಂದು ಜನ ಪರಿತಪಿಸುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಸಂಸ್ಕೃತಿ ಪ್ರಚಾರ ಮಾಡಹೊರಟರೆ ಇನ್ನು ಇದಕ್ಕಿಂತ ವಿಕಟ ಅಟ್ಟಹಾಸ ಬೇರೆಯಿದೆಯೆ?

ಒಬ್ಬ ಸದಸ್ಯರು.—ದಾಸರು! ದಾಸರು!

ಶ್ರೀ ಎಸ್. ಗೋಪಾಲಗೌಡ.—ಹೌದು, ನಾನು ದಾಸನಾಗಿಯೇ ಇರುತ್ತೇನೆ — ಜನರಿಗೆ; ನಿಮಗಲ್ಲ. ಈ ವಿಷಯಲ್ಲಿ ಇನ್ನೂ ಎಷ್ಟೋ ಹೇಳಬೇಕಾದದ್ದಿದೆ; ಅಂದಮಾತ್ರಕ್ಕೆ ಸಂಸ್ಕೃತಿ ನಮಗೆ ಬೇಡವೆಂದು ನಾನು ಹೇಳುತ್ತಿಲ್ಲ. ಅದಕ್ಕೆ ಇದು ಸಕಾಲವಲ್ಲ ಅಷ್ಟೆ. ಈಗ ಅಂಥದಕ್ಕೆ ಕೈಹಾಕುವುದು ವಿವೇಕದ ಮಾರ್ಗವಲ್ಲ. ಇದು ವಿವೇಕಶೂನ್ಯತೆಯ ಪರಮಾವಧಿ ಎಂದು ಖಂಡಿಸುವುದಕ್ಕಾಗಿಯೇ ನಾನು ಈ ಭಾಷಣದ ಕಾಲವನ್ನು ಮೀಸಲಾಗಿಟ್ಟಿದ್ದೇನೆ. ಇಂಗ್ಲಿಷಿನಲ್ಲಿರುವ ಒಂದು ಗಾದೆಯನ್ನು ಇಲ್ಲಿ ಉದಹರಿಸುವುದಾದರೆ—'ರೋಂದೇಶ ಉರಿಯುತ್ತಿರುವಾಗ ನೀರೋ ಫಿಡ್ಲ್ ಬಾರಿಸುತ್ತಿದ್ದಂತೆ'—ಹಾಗಾಗಿದೆ ನಿಮ್ಮ ಸಂಸ್ಕೃತಿಪ್ರಚಾರ. ಇನ್ನು ಇದರ ಬಗ್ಗೆ ಬಹಳವಾಗಿ ಹೇಳಬೇಕಾಗಿದೆ. ಕಾಲವಿಲ್ಲದಿರುವುದರಿಂದ ಮಿಕ್ಕ ವಿಷಯುವನ್ನು ಬಡ್ಜೆಟ್ಟಿನ ಸಂದರ್ಭದಲ್ಲಿ ಹೇಳುತ್ತೇನೆ.

(ಸದಸ್ಯರ ಭಾಷಣದ ಕಾಲಾವಧಿ ಮುಗಿಯಿತೆಂದು ಅಧ್ಯಕ್ಷರು ಸೂಚಿಸಿದರು).

ಇನ್ನು ಒಂದೆರಡು ನಿಮಿಷ ನನಗೆ ಅವಕಾಶ ಕೊಡಬೇಕು.

Mr. SPEAKER.—You have now spoken for seventeen minutes.

ಶ್ರೀ ಎಸ್. ಗೋಪಾಲಗೌಡ.—ಎರಡನೆಯದಾಗಿ, ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆಮಾಡುವ ಬಗ್ಗೆ 40,000 ರೂಪಾಯಿಗಳ ಖರ್ಚಿನಿಂದ ಒಂದು ಸಮಿತಿಯನ್ನು ಮಾಡಿದರು. ಅದು ಕೆಲವು ಸುಧಾರಣೆಗಳನ್ನು ಸೂಚಿಸಿದೆ. ಬಹುಮಟ್ಟಿಗೆ ಈಗಿರತಕ್ಕ ವಿದ್ಯಾಭ್ಯಾಸ ಕ್ರಮವನ್ನು ಬದಲಾವಣೆಮಾಡಬೇಕೆಂದು ಹೇಳಿ ಅದರಲ್ಲಿ ಸೂಚನೆಯಿದೆ. ಅದಕ್ಕೂ ಕೂಡ ಹಣವೇ ಒಂದು ದೊಡ್ಡದಾದ ಅಡ್ಡಿಯಾಗಿ ಪರಿಣಮಿಸುತ್ತದೆಂದು ಕಾಣುತ್ತದೆ. ಆದ್ದರಿಂದ ಆ ಸುಧಾರಣೆಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಮಾಡುತ್ತಾರೋ ಕಾದು ನೋಡಬೇಕು.

ಆಹಾರದ ನೀತಿಯ ಬಗ್ಗೆ ಆಗಲೇ ಅನೇಕ ಪ್ರಶ್ನೆಗಳು ಬಂದು ತಕ್ಕಮಟ್ಟಿಗೆ ಚರ್ಚೆಯಾಗಿದೆ, ಮುಂದೆ ಕೂಡ ಚರ್ಚೆಯಾಗುವುದಿದೆ. ದೇಶದಲ್ಲಿ ಆಹಾರದ ಬೆಲೆಯನ್ನು ಹೆಚ್ಚಿಸಿರುವುದನ್ನು ಇಳಿಸಬೇಕೆಂದು ಮೈಸೂರು ಮುಂತಾದ ಕಡೆಗಳಲ್ಲಿ ಸತ್ಯಾಗ್ರಹಗಳು ನಡೆಯುತ್ತಿವೆ. ಜನತೆ ಬಹಳವಾಗಿ ಇದನ್ನು ವಿರೋಧಿಸುತ್ತಿದ್ದಾರೆ ಮತ್ತು ಜನತೆಗೆ ಈ ಬೆಲೆಯಲ್ಲಿ ಕೊಳ್ಳುವುದಕ್ಕೆ ಆಗುತ್ತಿಲ್ಲ ಎಂಬುದು ವ್ಯಕ್ತಪಡುತ್ತಿದೆ. ಹಳ್ಳಿಗಳಲ್ಲಿ ಕೂಡ ಆಗಾಗಲೇ ಅಕ್ಕಿಯ ಧಾರಣೆ ಪಲ್ಲಕ್ಕೆ 50—60—70 ರೂಪಾಯಿಗಳಾಗುತ್ತಿದೆ. ಹೀಗಿರುವಲ್ಲಿ ಇನ್ನು ನಾಲ್ಕಾರು ತಿಂಗಳಲ್ಲಿ ಯಾವರೀತಿಯಾಗುತ್ತದೋ, ಯಾವರೀತಿ ಈ ವರ್ಷ ಸುಗ್ಗಿಯತನಕ ಹೊಟ್ಟೆ ಹಿಡಿದುಕೊಂಡಿರುತ್ತೇವೋ ನೋಡಬೇಕು.

ಪಾಂಚವಾರ್ಷಿಕ ಯೋಜನೆಯ ಬಗ್ಗೆ ಇವೊತ್ತು ಹೆಚ್ಚಿಗೆ ಏನೂ ಹೇಳುವುದಿಲ್ಲ. ಏಕೆಂದರೆ ಇನ್ನೊಂದು ದಿವಸವನ್ನೇ ಇದಕ್ಕಾಗಿ ಮೀಸಲಾಗಿಟ್ಟಿದ್ದಾರೆಂದು ತಿಳಿಯುತ್ತೇವೆ.

ಆಮೇಲೆ ಸಾಮುದಾಯಿಕ ಯೋಜನೆಗಳ ವಿಷಯ. ಅದರ ಬಗ್ಗೆ ನಮ್ಮ ಜಿಲ್ಲೆಯಲ್ಲಿರುವುದು ಈಗಾಗಲೇ

(ಶ್ರೀ ಎಸ್. ಗೋಪಾಲಗೌಡ.)

ಅಕ್ಟೋಬರಿನ ಎರಡನೆಯ ತಾರೀಖಿನಲ್ಲಿ ಪ್ರಾರಂಭವಾಯಿತೆಂದು ಗೊತ್ತಾಗಿದೆ. ಅದರ ವಿಷಯದಲ್ಲಿ ಏನೇನೋ ವರದಿಗಳು ಬಂದಿವೆ. ನಮ್ಮ ಸಂಸ್ಥಾನದವರೆಲ್ಲರೂ ಅದನ್ನು ಬಹಳ ಕುತೂಹಲದಿಂದ ಕಾದು ನೋಡುತ್ತಿದ್ದಾರೆ. ಅನೇಕರು ಇದರಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಯೂ ಇದ್ದಾರೆ. ಜೆ. ಸಿ. ಕುಮಾರಪ್ಪನವರು ಇದರಮೇಲೆ ಮಾತನಾಡುತ್ತಾ, ಇದೊಂದು ಅಮೇರಿಕಾದೇಶದವರ trap ಎಂದು ಹೇಳಿದ್ದಾರೆ. ಏಕೆಂದರೆ ಇದರಲ್ಲಿರುವುದೆಲ್ಲ ಅಮೆರಿಕನ್ನರ ತಂತ್ರ, ಅಮೆರಿಕನ್ನರ ಯಂತ್ರ, ಇದಕ್ಕೆ ಮಂತ್ರಮಾಡಿ ಎಷ್ಟರಮಟ್ಟಿಗೆ ಮಾವಿನಕಾಯನ್ನು ಉದುರಿಸಬಹುದು ? ನೀವೇ ಯೋಚನೆಮಾಡಿ. ಮುಖ್ಯಮಂತ್ರಿ ಹನುಮಂತಯ್ಯನವರು ಈ ಬಗ್ಗೆ ಮಾತನಾಡುತ್ತಾ 'ಇದಕ್ಕೆ ಉಪಯೋಗಿಸುವ ಸಿಬ್ಬಂದಿಯ ಖರ್ಚೇ ಬಹಳವಾಗಿರುತ್ತದೆ. ಆದ್ದರಿಂದ ಇದರ ಫಲಾಫಲಗಳನ್ನು ಇನ್ನು ನಾವು ಕಾದು ನೋಡಬೇಕಾಗಿದೆ' ಎಂದಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಅಧ್ಯಕ್ಷರೇ, ಮಹಾರಾಜರವರ ಭಾಷಣದ ವಿಷಯವಾಗಿ ಎದುರುಪಕ್ಷದವರು ಸ್ವಾರಸ್ಯವಾದ ಭಾಷಣಗಳನ್ನು ಮಾಡಿದ್ದಾರೆ. ಭಾಷಣಗಳು ಎಷ್ಟು ಸ್ವಾರಸ್ಯವಾಗಿದ್ದರೂ ಕೂಡ, ಅವುಗಳನ್ನು ಒಳಹೊಕ್ಕು ನೋಡಿದರೆ, ಎಷ್ಟರಮಟ್ಟಿಗೆ ತಿರುಳಿದೆ, ಸತ್ಯಾಂಶವಿದೆಯೆಂದು ಪರೀಕ್ಷಿಸಿದರೆ, ಬಹಳಮಟ್ಟಿಗೆ ನಿರಾಶೆಯೇ ಆಗುತ್ತದೆ. ನಮ್ಮ ದೇಶ ಸ್ವರಾಜ್ಯವನ್ನು ಸಂಪಾದಿಸಿ ಐದು ವರ್ಷಗಳಾದುವು, ನಮಗೆ ರಾಜಕೀಯ ಸ್ವಾತಂತ್ರ್ಯ ಸ್ವರಾಜ್ಯ ಬಂತು. ವಿದೇಶೀಯರು ನಮಗೆ ಆಡಳಿತವನ್ನು ಬಿಟ್ಟುಕೊಟ್ಟು ಹೋದರು, ಅಷ್ಟೆ. ಆದರೆ ನಮ್ಮ ಸಾಮಾನ್ಯ ಜನರನ್ನು ನಾವು ಮೇಲಕ್ಕೆತ್ತಿ ಅವರನ್ನು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಮತ್ತು ನೈತಿಕವಾಗಿಯೂ ಮುಂದುವರಿಯುವಂತೆ ಮಾಡುವುದು ಇನ್ನೂ ಉಳಿದಿದೆ. ಇದಕ್ಕಾಗಿ ಒಂದು ಕಾರ್ಯಕ್ರಮ, ಒಂದು ಯೋಜನೆ ಇಟ್ಟುಕೊಳ್ಳಬೇಕೆಂದು ಆಲೋಚನೆಮಾಡಿ, ನಮ್ಮ ಮುಖಂಡರೂ, ಕೇಂದ್ರಸರ್ಕಾರದವರೂ ನಮ್ಮ ಪ್ರಧಾನ ಮಂತ್ರಿಗಳಾದ ನೆಹ್ರೂರವರೂ ತಜ್ಞರ ವಿಶೇಷ ಅನುಭವವುಳ್ಳವರ ಒಂದು ಕಮಿಷನ್ನನ್ನು ನೇಮಿಸಿ ನಮ್ಮ ದೇಶ ಆರ್ಥಿಕವಾಗಿ ಮುಂದಕ್ಕೆ ಬರಬೇಕಾದರೆ, ನಮ್ಮ ದೇಶದ ಸಂಪತ್ತು ಹೆಚ್ಚಬೇಕಾದರೆ, ನಮ್ಮ ದೇಶದಲ್ಲಿರತಕ್ಕ ಅಸಮಾನತೆಯನ್ನು—ಅಂದರೆ ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ಅಸಮಾನತೆಯನ್ನು—ಹೋಗಲಾಡಿಸಬೇಕಾದರೆ, ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದನ್ನು ಆಲೋಚನೆ ಮಾಡುವ ಒಂದು ಏರ್ಪಾಡು ಮಾಡಿದರು. ಆ ಕಮಿಷನ್ನಿನವರು ದೇಶವನ್ನೆಲ್ಲಾ ಸಂಚಾರಮಾಡಿ ನಮ್ಮ ದೇಶದ ಈಗಿನ ಸಾಂಪತ್ತಿಕಸ್ಥಿತಿ ಆರ್ಥಿಕ ಆಧಾರ—ಇವುಗಳನ್ನು ಆಲೋಚನೆಮಾಡಿ ಒಂದು ಯೋಜನೆ ತಯಾರುಮಾಡಿದರು. ಅದೇ ಪಾಂಚವಾರ್ಷಿಕ ಯೋಜನೆ. ಈ ಪಾಂಚವಾರ್ಷಿಕ ಯೋಜನೆಯನ್ನು ಕೇವಲ ಒಂದು ಆರ್ಥಿಕ ಯೋಜನೆ ಅಥವಾ 2,000 ಕೋಟಿ ರೂಪಾಯಿಗಳ ಖರ್ಚಿನ ಅಂದಾಜೆಂದು ಭಾವಿಸದೆ, ಇಡೀ ದೇಶವನ್ನು, ಇಡೀ ಜನಾಂಗವನ್ನು ಕಟ್ಟತಕ್ಕಂಥ ಮತ್ತು ನೈತಿಕವಾಗಿಯೂ, ಸಾಮಾಜಿಕವಾಗಿಯೂ ಹಾಗೂ ಆರ್ಥಿಕವಾಗಿಯೂ ಜನರನ್ನು ಮೇಲಕ್ಕೆತ್ತಿ, ಒಂದು ಹೊಸ ಸಮಾಜವನ್ನು, ಯಾವ ಅಸಮಾನತೆಯೂ ಇಲ್ಲದ ಸಮಾಜವನ್ನು ಕಟ್ಟಬೇಕೆಂದು ಏನು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರೋ ಅಂಥ ಸಮಾಜವನ್ನು ಕಟ್ಟಿ, ನಮ್ಮ ದೇಶ ಪ್ರಪಂಚಕ್ಕೆ ಮಾದರಿಯಾಗಿರುವಂತೆ ಮಾಡಬೇಕೆಂಬುದು ಈ ಯೋಜನೆಯ ಆಕಾಂಕ್ಷೆ. ಈ ಯೋಜನೆಯನ್ನು ಸಾಧನೆಮಾಡುವವರು ಕೇವಲ ಕೇಂದ್ರಸರ್ಕಾರದವರಲ್ಲ, ಪ್ರಾಂತಸರ್ಕಾರದವರು ಮಾತ್ರವಲ್ಲ, ಡಿಸ್ಟ್ರಿಕ್ಟ್ ಬೋರ್ಡಿನವರು ಮಾತ್ರವಲ್ಲ, ಯಾವ ಸಂಸ್ಥೆಗಳು ಮಾತ್ರವಲ್ಲ; ನಮ್ಮ ದೇಶದ ಪ್ರತಿಯೊಬ್ಬ ಗಂಡಸೂ, ಹೆಂಗಸೂ, ಹುಡುಗರೂ, ಚಿಕ್ಕವಯಸ್ಸಿನವರೂ ಕೂಡ ಅವರವರ ಯೋಗ್ಯತಾನುಸಾರವಾಗಿ ಈ ಯೋಜನೆಯನ್ನು ತಿಳಿದುಕೊಂಡು ಚೆನ್ನಾಗಿ ಅದರ ಅಂಶಗಳೇನು, ಅದರಲ್ಲಿ ತನ್ನ ಪಾತ್ರವೇನು, ತಾನು ಅದಕ್ಕೆ ಏನು ಸಹಕಾರ ಕೊಡಬೇಕು ಎಂಬುದನ್ನು ಈ ಯೋಜನೆಯಲ್ಲಿ ಸೂಚಿಸಿದ್ದಾರೆ. ಈ ಯೋಜನೆಯು ವಿಶೇಷವಾಗಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿದೆ. ದೊಡ್ಡ ದೊಡ್ಡ ಸಭೆಗಳಲ್ಲೂ ಕಾನ್ಫರೆನ್ಸ್‌ಗಳಲ್ಲೂ ಇದರ ವಿಷಯವಾಗಿ ಅಭಿಪ್ರಾಯಗಳು ಬಂದಿವೆ. ಪತ್ರಿಕೆಗಳಲ್ಲೂ ಅನೇಕವಾಗಿ ಟೀಕೆಗಳೂ ಮೆಚ್ಚಿಕೆಗಳೂ ಬಂದಿವೆ. ನಮ್ಮ ದೇಶದ ಪತ್ರಿಕೆಗಳು ಮಾತ್ರ ಇದರ ಮೇಲೆ ಲೇಖನಗಳನ್ನು ಬರೆದಿಲ್ಲ. ಹೊರದೇಶದ ಪತ್ರಿಕೆಗಳಲ್ಲೂ ಇದು ಉಲ್ಲೇಖಿತವಾಗಿದೆ. ಅಂತರ ರಾಷ್ಟ್ರೀಯ ಪತ್ರಿಕೆಯಾದ ಸೈನ್ಸ್ ಜರ್ನಲ್, ಲಂಡನ್ ಟೈಮ್ಸ್, ಮಾಂಚೆಸ್ಟರ್ ಗಾರ್ಡಿಯನ್, ಅಮೇರಿಕಾದಲ್ಲಿ ನ್ಯೂಯಾರ್ಕ್ ಟೈಮ್ಸ್—ಮುಂತಾದುವು ಯಾವ ರೀತಿ ಈ ಯೋಜನೆಯನ್ನು ಕಂಡಿವೆಯೆಂಬುದು ಗಮನಾರ್ಹವಾದುದು. ಇದೊಂದು ದೊಡ್ಡ ಪ್ರಯೋಗ, ಮಹಾ ಪ್ರಯತ್ನ, ಸರ್ವರ ಬೆಂಬಲವೂ ಇದಕ್ಕೆ ಅಗತ್ಯ—ಎಂದು ಹೇಳಿ ಇದು ಜಯಶಾಲಿಯಾಗಲಿ ಎಂದು ಆಶಿಸಿದ್ದಾರೆ. ಇದರಲ್ಲಿ ಒಂದಂಶವನ್ನು ನಾವು ಗಮನಿಸಬೇಕು. ನಮ್ಮ ದೇಶ ಪ್ರಜಾಪ್ರಭುತ್ವದ ತತ್ವದ ಮೇಲೆ ಇರತಕ್ಕ ದೇಶ. ರಷ್ಯಾದೇಶದಲ್ಲಿ ಈಗಾಗಲೇ 5 ಯೋಜನೆಗಳನ್ನು ಸಾಧಿಸಿದ್ದಾರೆ; ನಿಜ. ಆದರೆ ಆ ದೇಶ ಅನೇಕ ಕಟ್ಟುಪಾಡುಗಳಿಗೆ ಒಳಪಟ್ಟ ದೇಶ. ಅಲ್ಲಿನ ವಿಧಾನ ಮತ್ತು ಪದ್ಧತಿಗಳಿಗೂ, ನಮ್ಮ ದೇಶದ ವಿಧಾನ ಮತ್ತು ಪದ್ಧತಿಗಳಿಗೂ ಬಹಳ ವ್ಯತ್ಯಾಸವಿದೆ. ನಮ್ಮದು ಅಹಿಂಸಾ ತತ್ವದ ಮೇಲೆ ನಿಂತಿರುವ ಪ್ರಜಾಪ್ರಭುತ್ವ ರಾಷ್ಟ್ರ. ನಾವು ಪ್ರಜಾಸಮುದಾಯದ ಬೆಂಬಲದಿಂದ ಇದನ್ನು ಮಾಡಬೇಕೇ ಹೊರತು ಚಾವಟಿ ಹಿಡಿದುಕೊಂಡು, Iron handನಿಂದ, ಬಲೋದ್ಬಂಧನದಿಂದ ಏನನ್ನೂ ನಾವು ಸಾಧಿಸುವಹಾಗಿಲ್ಲ. ನಾವು ಅನುಸರಿಸುವ ಮಾರ್ಗ, ನಿಧಾನವಾದ ಮಾರ್ಗ; ಹಾಗೂ ಶಾಂತಿಯುತವಾದ ಮಾರ್ಗ. ನಾವು ಯಾರಿಗೂ ಅಹಿತವಾಗಿರುವ ಮಾರ್ಗದಲ್ಲಿ ಹೋಗುವುದಿಲ್ಲವೆಂಬುದನ್ನು ಗಮನಿಸಬೇಕು. ಇವೊತ್ತಿನ ದಿವಸ ಈ ಯೋಜನೆಯನ್ನು ಜಾರಿಗೆತರುವುದಕ್ಕೆ ನಾವುಗಳೆಲ್ಲರೂ ಕೂಡ ಒಟ್ಟಿಗೆ ಸೇರಿ ಶ್ರಮಿಸಬೇಕಾಗಿದೆ. ಈ ಐದು ವರ್ಷದ ಯೋಜನೆಯಲ್ಲಿ ಈಗಾಗಲೇ ಎರಡು ವರ್ಷಗಳು ಕಳೆದುಹೋಗಿದೆ. ಇನ್ನು ಉಳಿದಿರತಕ್ಕ ಮೂರು ವರ್ಷಗಳಲ್ಲಿ ಈ ಯೋಜನೆಯಲ್ಲಿನ ಎಲ್ಲ ಅಂಶಗಳನ್ನೂ ಸಾಧಿಸಬೇಕು. ಇದನ್ನು ಸಾಧಿಸಬೇಕಾದರೆ ಎಷ್ಟರಮಟ್ಟಿನ ದುಡಿಮೆ, ಸಾಹಸ ಬೇಕೆಂಬುದನ್ನು ನಾವು ಯೋಚನೆಮಾಡಬೇಕು. ಎದುರು ಪಕ್ಷದವರೂ ಕೂಡ ಪಾರ್ಲಿಮೆಂಟಿನಲ್ಲಿ ಈ ಯೋಜನೆಗೆ ವಿರುದ್ಧವಾಗಿ ಮಾತನಾಡಿದ್ದರೂ ಈ ಯೋಜನೆಯಲ್ಲಿರತಕ್ಕ ಕೇವಲ ಒಂದೆರಡು ಅಂಶಗಳನ್ನು ಮಾತ್ರ ಟೀಕಿಸಿದ್ದಾರೆಯೇ ಹೊರತು, ಈ ಯೋಜನೆಯನ್ನೆಲ್ಲಾ ಬುಡಮೇಲಾಗಿ ವಿರೋಧಮಾಡಿಲ್ಲ.

(ಇಷ್ಟು ಹೊತ್ತಿಗೆ 2-44 ಘಂಟೆಯಾಗಿದ್ದು ಶ್ರೀ ಮಾಧವಾಚಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಆದ್ದರಿಂದ ನಾವೆಲ್ಲರೂ ಕಷ್ಟಪಟ್ಟು ಯೋಚನೆಮಾಡಿ ವಿಚಾರ ವಿಮರ್ಶೆಯಿಂದ ತಂದಿರತಕ್ಕ ಇಂಥ ಯೋಜನೆಯನ್ನು ಜಾರಿಗೆತರುವ ಪ್ರಯತ್ನ ಮಾಡಬೇಕು. ಹಾಗೆ ಜಾರಿಗೆತರಲು ಶಾಸನಸಭಾ ಸದಸ್ಯರು ಇಲ್ಲಿ ಮಾತನಾಡಿದರೆ ಮಾತ್ರ ಆಗಲಿಲ್ಲ, ತಮ್ಮ ತಮ್ಮ ಕಾನ್‌ಸ್ಟಿಟ್ಯೂಯನ್ಸಿಗಳಿಗೆ ಹೋಗಿ ಈ ಯೋಜನೆಯೇನು, ಇದರಲ್ಲಿರತಕ್ಕ ಅಂಶಗಳೇನು, ಇದಕ್ಕಾಗಿ ಜನರು ಯಾವ ರೀತಿ ಸಹಕಾರ ಕೊಡಬೇಕೆಂಬುದನ್ನು ಚೆನ್ನಾಗಿ ಹೇಳಬೇಕು. ಇಲ್ಲಿ ಸದಸ್ಯರುಗಳು ಇದಕ್ಕೆ ಬೆಂಬಲಕೊಟ್ಟು ಮಾತನಾಡಿದ್ದರಿಂದ ಈ ಯೋಜನೆಯನ್ನು ಸಾಧಿಸಿದಂತಾಗುವುದಿಲ್ಲ. ದೇಶಾದ್ಯಂತ ಅಗಾಧವಾದ ಪ್ರಚಾರ ಕಾರ್ಯವನ್ನೂ ಮತ್ತು ಸಾಹಸಯುತವಾದ ಒಂದು ಉದ್ಯಮವನ್ನೂ ನಾವೆಲ್ಲರೂ ಕೈಕೊಳ್ಳಬೇಕು. ಇದಕ್ಕಾಗಿಯೇ ಈ ಯೋಜನೆಯಲ್ಲಿ ನಮ್ಮ ಮುಖಂಡರು ಹೇಳಿರತಕ್ಕ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳಾದ ಶ್ರೀ ಸಿ. ಡಿ. ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಹೇಳಿರುವುದೇನೆಂದರೆ: ನಮ್ಮ ದೇಶದಲ್ಲಿ ಹಿಂದೆ ಇದ್ದುದು ಒಂದು ಪೋಲೀಸ್ ಸರ್ಕಾರ, ಜನರನ್ನು ಹತೋಟಿಯಲ್ಲಿಡುವ ಸರ್ಕಾರ, ಹೀಗೆಯೇ ಜನ ನಡೆಯಬೇಕೆಂಬ ಆಜ್ಞೆಯರೂಪದಲ್ಲಿ ಕೆಲಸನಡೆಸತಕ್ಕ ಸರ್ಕಾರ; ಈಗ ವೆಲ್‌ಫೇರ್ ಸ್ಟೇಟ್ ಎಂದರೆ ಜನರ ಯೋಗಕ್ಷೇಮವನ್ನು ವಿಚಾರಿಸುವ ಮತ್ತು ನೋಡಿಕೊಳ್ಳುವ ಸರ್ಕಾರ ಸ್ಥಾಪನೆಯಾಗಿದೆ. ಈ ಸರ್ಕಾರ ಯಾವ ಕೆಲಸವನ್ನು ಮಾಡಬೇಕಾದರೂ ಜನರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸಮಾಡಬೇಕಾಗುತ್ತದೆ; ಆದಕಾರಣ ಇಂಥ ವೆಲ್‌ಫೇರ್ ಸ್ಟೇಟಿನಲ್ಲಿ ಯಾವ ರೀತಿ ಕೆಲಸಮಾಡಬೇಕು ಎಂಬ ಬಗ್ಗೆ ಎರಡು ಮೂರು ಮಾತುಗಳನ್ನು ಹೇಳಿದ್ದಾರೆ;

> "The transition from a regulatory to a welfare State", the Finance Minister emphasised "was never easy. It required inspired enthusiasm and understanding leadership, sense of discipline, a co-operative attitude and a spirit of sacrifice in the interest of the common good on the part of the community".

ಆದುದರಿಂದ ಈ ಯೋಜನೆಯನ್ನು ಜಾರಿಗೆತರಬೇಕಾದರೆ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯೂ ಸಹಕಾರ ನೀಡಬೇಕು. ಈ ಯೋಜನೆಯಲ್ಲಿರತಕ್ಕ ಮುಖ್ಯ ಅಂಶಗಳನ್ನು ಗಮನಿಸಿ ಎದುರು ಪಕ್ಷದವರೂ ಕೂಡ, ತಮಗೆ ಏನೇನು ಸಂದೇಹಗಳಿವೆಯೋ ಅವನ್ನು ಪರಿಹಾರ ಮಾಡಿಕೊಂಡು, ಸಂಪೂರ್ಣ ಸಹಕಾರ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನೊಂದು ವಿಷಯ ಈ ಯೋಜನೆಯಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಮಾತ್ರ ಸೇರಿವೆಯೆಂದು ಭಾವಿಸಬಾರದು. ಇದರಲ್ಲಿ ಗ್ರಾಮಕೈಗಾರಿಕೆಗಳಿವೆ, ಗೃಹ ಕೈಗಾರಿಕೆಗಳಿವೆ, ಸಣ್ಣಸಣ್ಣ ಕೈಗಾರಿಕೆಗಳು, ಗ್ರಾಮಾಭಿವೃದ್ಧಿ ಮುಂತಾದ ಅನೇಕ ವಿಷಯಗಳು ಇದರಲ್ಲಿ ಅಡಕವಾಗಿವೆ. ಆದುದರಿಂದ ಬರೀ ದೊಡ್ಡ ವಿಷಯಗಳಿಗೆ ಗಮನಕೊಟ್ಟು ಸಣ್ಣ ಸಣ್ಣ ಕೈಗಾರಿಕೆಗಳನ್ನು ಮರೆತಿದ್ದೇವೆ ಎಂಬ ಅಪವಾದನೆಗೆ ಅವಕಾಶವಿಲ್ಲ. ಎಲ್ಲ ಅಂಶಗಳನ್ನೂ ವಿವರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ. ಒಂದೇ ಮಾತಿನಲ್ಲಿ ಈ ಯೋಜನೆಯಲ್ಲಿ ಏನು ಹೇಳಿದ್ದಾರೆಂಬುದನ್ನು ಇನ್ನೊಂದು ಸಾರಿ ಓದುತ್ತೇನೆ.

> "Public co-operation and public opinion constitute the principal force and sanction behind planning. It is vital to the success of the Plan that action by the agencies of the Government should be inspired by an understanding of the role of the people and supported by practical steps to enlist their enthusiastic participation."

ಆದುದರಿಂದ, ಜನರ ಸಹಕಾರ ಇದಕ್ಕೆ ಅವಶ್ಯಕವಾದುದರಿಂದಲೇ ಮೈಸೂರು ಸರ್ಕಾರದವರು ಇದರ ಸಂಬಂಧದಲ್ಲಿ ಜನರಲ್ಲಿ ಪ್ರಚಾರಮಾಡುವುದಕ್ಕೆ ಒಂದು ಯೋಜನೆಯನ್ನಿಟ್ಟುಕೊಳ್ಳಬೇಕೆಂದು ಹೇಳಿ ಮುಗಿಸುತ್ತೇನೆ.

Sri M. PALANIYAPPAN (Ulsoor).—Mr. Speaker, Sir, I fully associate myself with the mover of the Motion of Thanks to His Highness. In the Address of the Rajpramukh, Cultural Development takes the first place and it needs our consideration. The moral standard of the people should be elevated if they want to be more civilized. Some of the members on the opposite side said that it is a criminal waste to spend, on cultural development, the sum of five lakhs of rupees when people are suffering and starving. But I would say that man has got more things to do than to eat. More than his stomach, he has to look to other aspects of life. It is not food alone that counts. The civilization of a man should also be taken into consideration. That is the one distinction between man and beast. Cultural development brings home to the people the past glories of our country. We have a very glorious past and it is the duty of every individual to just think over the past. Individuals should take a keen interest in this cultural development. Government can also take this issue and help the people to attain cultural development. I quite appreciate and I am highly grateful to

(SRI M. PALANIYAPPAN).

His Highness for giving the first place to Cultural Development.

There are the educational reforms mentioned in the Address. This is the most important one mentioned by His Highness. In the olden days we were crying for more education. Thousands of our youngsters were groping in the dark. After great effort a scheme of education was introduced which produced clerks for Government service instead of producing knowledge in the minds of the people. It is high time that educational reforms are introduced. I understand that the Government have completed the scheme and it is going to be implemented.

The food policy is engaging the greater attention of the Government and the members of this House. Food policy is being changed from time to time, and, I think, it is receiving greater attention. The Government is adopting the mottos of 'Service at Cost' and 'No Profit and No Loss'. But the people are not satisfied and I feel that there should be a complete change in the present policy. I hope Government will take greater interest and do their best in this matter.

There is a separate day allotted for the discussion of the Five-year Plan. I do not know if I should dilate on that topic now. However, I will reserve my comments to that day regarding this Five-year Plan.

The Community Project has been started in the State first in the Shimoga District, a malnad area. It is the scheme of Gandhiji who wanted that every village in this country should be developed and that educated people should go into the rural areas and do some service to the masses. The Community Project introduced in Shimoga is a starting point and in its implementation our Government is taking a very keen interest in the development of villages.

Coming to the District Boards and Municipalities, the major problem of the Municipalities is in regard to water supply and drainage. It is in these two things that they are lacking. But it is gratifying to note that Government have promised aid to Bangalore, Mysore and Davangere Municipalities in their effort to secure good water supply. I am sure and hope that this water supply scheme will be implemented in these Municipalities as early as possible.

Coming to the point of rural credit, one feels glad to note that Government has allotted five lakhs to the Apex Bank for giving credit to the rural folk. This is a very good encouragement shown by the Government. It is the duty of the Government to see that we grow as much as we require. Self-sufficiency should be aimed at. In order to encourage the agriculturist to attain this end, it is gratifying to note that Government has allotted five lakhs for rural credit.

Housing for the Depressed Classes has also received the attention of His Highness in the Address. But I am sorry to say that the houses that are constructed are very meagre compared to the population that is existing. The population of the State is increasing and the housing problem is also increasing. But the rate at which the houses are being built is deplorable. I hope that Government will see their way and take immediate steps for providing adequate amenity to these people.

Industry is as important in our State as any other thing. Mysore is a State noted for its industries. Most of the State's income in derived from its industries. The Central Government also thinks that Mysore State is a fit place to start all their industries. We have got the Hindustan Aircraft Factory, the Telephone Industry and the Government of India are going to start the Hindustan Tool Factory in the State. But we have a complaint here. The needs of the people who work in these factories should be attended to. More amenities in the shape of water, light, housing, etc., should be given. More than anything else people in this State should be appointed more and more in number in these factories. Preference is being given to people who are far off from this place in many appointments. People from other parts are being given the preference. But it is the duty of

the Government to provide employment for the unemployed people in the State first. From now on, at least, I hope that Govenment will take immediate steps to negotiate with the Central Government and see that more unemployed people of the State are given employment in these factories. This is one of the fundamental duties of our Government. I am very glad to note that industries like the raw-film industry is going to be started in the State. It is one of the most important industries.

With these few words I close, with a request to my friends on the opposite side that they withdraw their amendments and give their full support to the Motion of Thanks.

Mr. CHAIRMAN (Sri B. Madhavachar).—The House will now rise and meet again at 3-30 P.M.

The House adjourned at Three of the Clock for Lunch and met again at Thirty Minutes past Three of the Clock.

[*Mr. Speaker in the Chair.*].

Sri B. V. NARAYANA REDDY (Bagepalli—Gudibanda).—Sir, in supporting the amendment moved by the Leader of the Opposition, I would like to say a few things.

The first and foremost is that His Highness in his Address has said much about cultural development. It has been elaborately dealt with by so many members and especially and rightly too by Sri Gopala Gowda who strongly criticised it, and in the other camp also Sri R. Anantharaman said that this ought to have been done by private bodies or some other agencies rather than by Government. One thing I would like to point out is that they have said that it should be done in Kannada Kritis of Sivasaranas and Haridasas and several other Keerthanas. Somehow the revered name of Sri Thiagaraja is left out. Sri Thiagaraja is such a great poet and no cultural organisation worth the name or Sangeetna Kacheri can begin or end without his Keerthanas. This looks as though this has been calculatively left out to wound the feelings of the 3½ millions of Telugu-speaking people in the State.

Sri N. C. NAGAIAH REDDY (Goribidnur).—Thiagaraja is one of the Haridasas.

Sri B. V. NARAYANA REDDY.—He was a great Telugu poet.

While speaking on the Address, Sri Gopala Gowda said about Akhila Karnataka and of course all the parties in India have accepted the principle. I must say that when the question of Akhila Karnataka is taken up, the question of Vishala Andhra must also be taken up and all the contiguous parts of Royalaseema or Andhra parts that are in Mysore—part of Chitaldrug, whole of Kolar and part of Bangalore and Tumkur—must be added to Vishala Andhra.

Regarding Education I would like to say some more things about Telugu and how it has been neglected.

Mr. SPEAKER.—There is a resolution in your name.

Sri B. V. NARAYANA REDDY.—I do not know whether it comes up at all. Telugu schools are lacking in the State. I do not know if there are half a dozen or a dozen schools of Telugu. For a population of 3½ millions, I would like to know whether the number is adequate and as the Constitution has guaranteed that the mother-tongue of pupils should be taught in primary stages, whether it has not been neglected there.

In regard to Five-Year Plan it is said that Government would raise a loan of Rs. 9 crores and that a sum of Rs. 8·80 crores would be raised from additional taxation. I would very much like to know who would give a loan to an insolvent Government. I quote it as insolvent because there was deficit last year, there is deficit here and I do not know what it would be next time. No businessman worth the name would give loan to the Government. And who is prepared to give further taxes? As it is, people have no food to eat and we know that there is famine and the time is inopportune for taxation. Why not

(SRI B. V. NARAYANA REDDY).

postpone it for better days to come? If you are in such hurry to get money, you take it from the rich people, millionaires and use it for better purposes.

With regard to Telugu, I would once again request the Government to immediately implement and see that more of primary and middle schools are opened.

With this, I close.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ).—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ವಿಚಾರವಾಗಿ ನಮ್ಮ ಪಾರ್ಟಿ ನಾಯಕರು ಈಗಾಗಲೇ ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಸೂಚನೆಯನ್ನು ಪುಷ್ಟೀಕರಿಸಲು ಒಂದೆರಡು ಮಾತುಗಳನ್ನಾಡುತ್ತ ಈ ಸಭೆಯ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಲಿಚ್ಛಿಸುತ್ತೇನೆ. ನಮ್ಮ ಲೀಡರ್ ಅವರು ಮಂಡಿಸಿರತಕ್ಕ ತಿದ್ದುಪಡಿಯಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದಮೇಲೆ ಸರ್ಕಾರದವರು ಆಡಳಿತ ನಡೆಸುತ್ತಿರುವ ವಿಚಾರದಲ್ಲಿ, ಪ್ರಜೆಗಳು ನಿಮ್ಮಿಂದ ನಿರೀಕ್ಷಿಸುತ್ತಿದ್ದಂಥ ಅನುಕೂಲಗಳೊಂದೂ ಆಗದೆ, ಆಡಳಿತದಲ್ಲಿ ದಕ್ಷತೆ ದಿನೇ ದಿನೇ ಕಡಮೆಯಾಗುತ್ತಿರುವುದನ್ನು ನೋಡಿ ನಾವು ನಮ್ಮ ವಿಷಾದವನ್ನು ಅದರಲ್ಲಿ ಸೂಚಿಸಿದ್ದೇವೆ. ಈ ಸಂದರ್ಭದಲ್ಲಿ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇಲಾಖೆಗಳು ತಮ್ಮ ಕೆಲಸ ಕಾರ್ಯಗಳನ್ನು ಯಾವ ರೀತಿ ನಡೆಸಿಕೊಂಡು ಬರುತ್ತಿವೆ ಎಂಬ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ರೂರಲ್ ಡೆವಲಪ್‌ಮೆಂಟ್ ಇಲಾಖಾ ವಿಚಾರವಾಗಿ ಹೇಳುವುದಾದರೆ, ಡಿಪ್ರೆಸ್ಡ್ ಕ್ಲಾಸಿನವರಿಗೆ ಸರ್ಕಾರದವರೇನೋ ಉದಾರ ಭಾವನೆಯಿಂದ ಒಂದು ನಿರ್ದಿಷ್ಟ ಕಾಲದಲ್ಲಿ ಅವರೆಲ್ಲರನ್ನೂ ಮುಂದಕ್ಕೆ ತರಬೇಕೆಂಬ ಒಂದು ಯೋಜನೆಯನ್ನು ಹಾಕಿದ್ದಾರೆ. ಆದರೆ ಆ ವಿಚಾರದಲ್ಲಿ ಆಡಳಿತ ವರ್ಗದವರು ಹೀಗೆ ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆಂಬುದನ್ನು ಸ್ವಲ್ಪ ವಿಮರ್ಶೆಮಾಡಿನೋಡೋಣ. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕಂಥ ನಿಮ್ನ ತರಗತಿಗಳವರ ವಾಸದ ಮನೆಗಳನ್ನು ಒದಗಿಸಿಕೊಡತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ 19ಲಕ್ಷ ರೂಪಾಯಿಗಳನ್ನು ಈ ಚಾಲ್ತಿ ಸಾಲಿಗೆ ಒದಗಿಸಿದ್ದಾರೆ. ಆ ಪೈಕಿ ಈಗ ಖರ್ಚಾಗಿರುವುದು ಕೇವಲ 7ಲಕ್ಷ ಮಾತ್ರ. ಇನ್ನೂ ಅರ್ಧಕ್ಕೆಮೇಲಾಗಿ ಹಣ ಹಾಗೆಯೇ ಉಳಿದುಹೋಗಿದೆ. ಈಗ 9 ತಿಂಗಳ ಅವಧಿಯಲ್ಲಿ 7ಲಕ್ಷವನ್ನು ಮಾತ್ರ ಖರ್ಚುಮಾಡಿದ್ದಾರೆ. ಆ 9 ತಿಂಗಳು ಕಳೆದಮೇಲೆ 2ತಿಂಗಳು ಮುಗಿದುಹೋಗಿ ಇನ್ನು ವರ್ಷ ಭರ್ತಿಯಾಗುವುದಕ್ಕೆ ಉಳಿದಿರುವುದು ಕೇವಲ ಒಂದು ತಿಂಗಳು ಮಾತ್ರ. ಉಳಿದಿರತಕ್ಕ ಒಂದೇ ಒಂದು ತಿಂಗಳಿನಲ್ಲಿ ಅವರು ಮೀಸಲಾಗಿಟ್ಟಿದ್ದ 19ಲಕ್ಷದಲ್ಲಿ ಉಳಿದ 12ಲಕ್ಷವನ್ನು ಹೇಗೆ ಖರ್ಚುಮಾಡಲು ಸಾಧ್ಯವಿದೆ? ಹೀಗೆ ಸರ್ಕಾರ ಒದಗಿಸಿದ ಮೊಬಲಗನ್ನು ಖರ್ಚುಮಾಡದೆ ಪುನಃ ಅದು ಸರ್ಕಾರಕ್ಕೆ ಸೇರುವಂತೆ ಇಲಾಖೆಗಳು ಕೆಲಸಮಾಡುತ್ತಿವೆ. ಇದು ಆಡಳಿತದ ಸುಲಕ್ಷಣವಲ್ಲ. ಇದನ್ನು ತಾವು ಮೊದಲು ಸರಿಪಡಿಸಬೇಕಾಗಿದೆ. ಹೀಗೆ ಯಾರಿಂದ ಇಂಥ ನಿಧಾನಗಳಿಗೆಲ್ಲಾ ಅವಕಾಶವಾಯಿತೆಂಬುದನ್ನು ತಿಳಿದು, ಅವರಿಗೆ ತಕ್ಕಬಂದೋಬಸ್ತನ್ನೂಮಾಡಿ, ಆಡಳಿತಗಾರರಿಗೆ ತಾವು ಸರಿಯಾದ ತಾಕೀತನ್ನು ಮತ್ತು ಸಲಹೆಯನ್ನೂ ಕೊಡದಿದ್ದರೆ ಇಂಥ ಯೋಜನೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಇವನ್ನು ಮೊದಲು ಕ್ರಮಪಡಿಸಬೇಕೆಂದು ನಾನು ಸರ್ಕಾರದವರಿಗೆ ಒಂದು ಸಲಹೆಮಾಡುತ್ತೇನೆ, ಮತ್ತು ಇದೇ ಸಂದರ್ಭದಲ್ಲಿ ನಾನು ತಾವು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಮೀಸಲಾಗಿಡುತ್ತೀರೋ ಅಷ್ಟು ಹಣ ಆ ಅವಧಿಯಲ್ಲೇ ವಿನಿಯೋಗವಾಗುವಂತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಎರಡನೆಯದಾಗಿ, ನಮ್ಮ ಲ್ಯಾಂಡ್ ರೆವೆನ್ಯೂ ಕೋಡು ಸರಿಯಾಗಿ ತಿದ್ದುಪಡಿಯಾಗದೆ, ಹಿಂದೆ ಯಾವ ಒಂದು ಬ್ಯೂರಾಕ್ರೆಟಿಕ್ ಸರ್ಕಾರವಿತ್ತೋ ಈಗ ಅನುಸರಿಸಿದ್ದಂಥ ರೀತಿ ನೀತಿಗಳನ್ನೇ ಪ್ರಜಾಪ್ರಭುತ್ವ ಸರ್ಕಾರ ಜಾರಿಗೆಬಂದಮೇಲೂ ಅನುಸರಿಸಲಾಗುತ್ತಿದೆ. ಇದರಿಂದ ದೇಶಕ್ಕೆ ಯಾವ ಅಭಿವೃದ್ಧಿಯೂ ಆಗುತ್ತಿಲ್ಲ. ಇದನ್ನು ತಿದ್ದುಪಾಟುಮಾಡಲು ಸರ್ಕಾರ ಯಾವ ಕಾರ್ಯಕ್ರಮವನ್ನೂ ಕೈಕೊಂಡಂತೆ ಕಾಣುವುದಿಲ್ಲ. ಹಾಗೆ ಇದನ್ನು ಬದಲಾವಣೆಮಾಡದಿರುವ ಕಾರಣದಿಂದ, ನಾವು ಯಾವ ಒಂದು ಕೆಲಸಕ್ಕೇ ಕೈಹಾಕಲಿ, ಅಂದರೆ ಒಂದು ದರಖಾಸ್ತು, ಅಥವಾ ಅಕ್ವಿಜಿಷನ್ ಇತ್ಯಾದಿ ಯಾವ ಕೆಲಸಕ್ಕೇ ಕೈಹಾಕಲಿ, ಹಿಂದಿದ್ದ ಬ್ಯೂರಾಕ್ರೆಟಿಕ್ ಸರ್ಕಾರದಲ್ಲಿ ಹೇಗೆ ಕೆಲಸಗಳು ನಡೆಯುತ್ತಿದ್ದವೋ ಹಾಗೆಯೇ ಪ್ರಜಾಸರ್ಕಾರ ಬಂದಮೇಲೆಯೂ ನಡೆಯುತ್ತಿದೆ. ಇದನ್ನು ತಾವು ಕೂಡಲೇ ಪರಿಹರಿಸಬೇಕು. ಇದೇ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕೊಡಬೇಕೆಂದಿರುವ ಒಂದು ಸಲಹೆಯೇನೆಂದರೆ, ತಾವು ಅಮಲ್ದಾರರವರಿಗೂ ಮತ್ತು ಸಬ್ ಡಿವಿಜನ್‌ರವರಿಗೂ ಇನ್ನೂ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಅವರು ಬರತಕ್ಕ ಅರ್ಜಿಗಳನ್ನು ಆಗಿಂದಾಗ್ಗೆ ಬೇಗ ತೀರ್ಮಾನಮಾಡುವಂತೆ ಮಾಡಿ ಬಡ ಜನರಿಗೆ ಅನುಕೂಲಮಾಡಬೇಕೆಂದು ತಿಳಿಸುತ್ತೇನೆ.

ಮೂರನೆಯದಾಗಿ, ನಮ್ಮ ಇಂಡಿಯಾ ಸರ್ಕಾರದವರು ಹಿಂದುಳಿದ ಮತ್ತು ನಿಮ್ನವರ್ಗಗಳವರ ಅಭಿವೃದ್ಧಿಯನ್ನು ಸರ್ವೆಮಾಡಲು ಒಂದು ಬ್ಯಾಕ್‌ವರ್ಡ್ ಕಮಿಷನನ್ನು ನೇಮಕ ಮಾಡಿದ್ದಾರೆ. ಆ ಸಮಿತಿಗೆ ಮೈಸೂರಿನಿಂದ ಸಹ ಒಬ್ಬ ಪ್ರತಿನಿಧಿಗಳನ್ನು ತೆಗೆದುಕೊಂಡಿದ್ದಾರೆಂದು ನಾನು ಕೇಳುತ್ತಿದ್ದೇನೆ. ಈ ಕಮಿಷನ್ನಿನವರು ಪ್ರತಿಯೊಂದು ಭಾಗದಲ್ಲೂ ಸಂಚಾರಮಾಡಿ ಈ ಬಗ್ಗೆ ಅಂಕಿ ಅಂಶಗಳನ್ನು ಶೇಖರಣೆ ಮಾಡುತ್ತಾರೆಂದು ತಿಳಿದುಬಂದಿದೆ. ಹಾಗೆ ಅಂಕಿ ಅಂಶಗಳನ್ನು ಶೇಖರಿಸಲು ಅವರು ಇಲ್ಲಿಗೆ ಬಂದಾಗ ಇಲ್ಲಿನ ಬ್ಯಾಕ್‌ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸಿನವರ ನಿಜವಾದ ಸ್ಥಿತಿಗತಿಗಳೇನು ಮತ್ತು ಆ ಬಗ್ಗೆ ನಿಜವಾದ ಅಂಕಿ ಅಂಶಗಳು ಯಾವುವು ಎಂಬುವನ್ನು ಅವರಿಗೆ ತಿಳಿಸುವಂತೆ ಮತ್ತು ಇಲ್ಲಿನ ನಿಜಸ್ಥಿತಿಗಳನ್ನು ಅವರ ವರದಿಯಲ್ಲಿ ಅಡಕವಾಗುವಂತೆ ಮಾಡಲು ತಾವು ಒಂದು ಅವಕಾಶವನ್ನು ಇಲ್ಲಿನವರಿಗೆ ಕಲ್ಪಿಸಬೇಕಾಗಿದೆ. ಆ ರೀತಿ ಒಂದು ಏರ್ಪಾಡನ್ನು ತಾವು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ನಡೆಸುವುದಾಗಿ ಲೀಡರ್‌ರವರು ನಮಗೊಂದು ಅಷ್ಯೂರೆನ್ಸು ಕೊಡಬೇಕೆಂದು ಆಶಿಸುತ್ತೇನೆ.

ಆದರೆ ಇನ್ನೂ ಅನೇಕ ವಿಚಾರಗಳನ್ನು ತಿಳಿಸಬೇಕಾಗಿತ್ತು. ಆದರೆ ಅದಕ್ಕೆಲ್ಲ ಮುಂದೆ ಇನ್ನೂ ಅವಕಾಶವಿರುವ ಕಾರಣ, ಕೊನೆಯದಾಗಿ ನಾನು ತಮ್ಮಲ್ಲಿ ಆ ಬ್ಯೂರಾಕ್ರೆಟಿಕ್ ಆಡಳಿತ ಪದ್ಧತಿಯಲ್ಲಿದ್ದ ಕಾನೂನುಗಳನ್ನೆಲ್ಲಾ ಬೇಗ ಬದಲಾಯಿಸಿ ಬಡಜನರಿಗೆ ಅನುಕೂಲ

ಕಲ್ಪಿಸಿಕೊಡಬೇಕೆಂದು ನನ್ನ ಈ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Sri B. NARAYANASWAMY (Mysore City—South).—Mr. Speaker, I will not commit the mistake of converting this debate on the Motion of Thanks to the Rajpramukh into a debate on Budget. I am sorry that experienced legislators like Sri Mohamed Imam and Sri Pattabhiraman have committed this mistake.

The Address that is made by Rajpramukh is quite clear in that he has referred only to two things, namely, what are the important achievements of the Government in the current year, and, secondly, what is the business of the House for this session. Incidentally he might have traversed the ground about the probable policy of the Government for the coming year.

I have heard the speeches made by the Leader of the Opposition and my friend Sri Pattabhiraman. Sri Mohamed Imam came down like thunder on Government. Sri Pattabhiraman was no doubt pompous in his language and perhaps in the midst of his words he lost himself. Sri Gopala Gowda in his ecstasy could not say what he wanted to say though he attempted to do so. It may be deemed that Sri Gopala Gowda would be a very good propagandist.

I personally feel that it is a happy coincidence that the Rajpramukh has first of all referred to the cultural development and moral re-armament. We here require moral re-armament programme because I find from the Opposition that there is lack of culture, namely, that they are not tolerant to say a good word for the good act done by the Government.

As a matter of fact, Sri Imam must be grateful to Government for having come to their aid in the distress areas and especially Chitaldrug. So also Sri Pattabhiraman. As a matter of fact, Government have done very good service to relieve the distress areas of very many calamities. They have spent a good deal of amount and they propose to spend more amount in these distress areas. One thing. In a matter like this, where the Address of the Rajpramukh is placed before the House, as a formal business, it is our duty to thank His Highness for having placed before us, in brief, the achievements of the Government and the problems of the day. That does not require all these destructive criticisms. Government will certainly welcome any constructive criticisms, and if there is any scope for the Opposition to make such criticisms about these acts, they are certainly welcome to do so. Sri K. Pattabhiraman and Sri Gopala Gowda came out with full faith in the educational reforms to be contemplated. Perhaps there should be something for them to say that the educational reforms that are now to be laid before this Assembly require the whole-hearted support of all the members. And Sri Srinivasa Iyengar and Sri Imam could have been more charitable in their criticisms.

Sri J. MOHAMED IMAM.—We have been very charitable.

Sri B. NARAYANASWAMY.—It will speak for itself how charitable the Opposition leader has been. It is not right on his part to condemn the Government to be inefficient and to say all sorts of things. I can tell Sri Imam that no Government would have done like this at a time when there has been financial stringency and when there is food scarcity and at a time when the Government have been faced with famine and distress conditions. What could you expect from any other Government? This Government have done their best and there is every positive evidence to show that what all could be done is being done with utmost ability. There are men who come from distress areas, there is enough evidence before us, and I am sure the members of the Opposition will agree with them when they say that Government have done all that is best.

Sri Mulka GOVINDA REDDY (Chitaldrug) —We do not agree.

Sri B NARAYANASWAMY.—I know some will not agree even though in their heart of hearts they are agreeing to several things. Because, it is in the nature of things that the Opposition has to oppose certain things; if not

(SRI B. NARAYANASWAMY).

their existence itself will be very critical. After all, we are dealing with human elements and as human beings we are not perfect. Whatever scheme is framed will not be perfect. It will be imperfect. After all, it is a Plan and no Plan can be perfect and any Plan if it is to be perfect can only be perfect in the gradual course of events and not in the way the Opposition wants. The Five-Year Plan has been carefully thought out and has been given after years of deliberation and to-day our friends come and tell us that this Plan is of no use and that it is a scrap of paper. Why not wait for three years? Already two years have passed, The Government have taken it up. have gone with the programme without borrowing any money or without additional taxation, for the last two years and there are three more years to carry out the programme. If my friends on the other side will bear with the Government for three more years, I am sure the Opposition members will come forward and say that the Government have done the right thing, and whatever they said to-day, they are going to repent for it. I do not think this is the time for us to speak on the budget, to criticise the budget. Much can be said on both sides. It is said that deficit financing is the order of the day. When there is need for projects to be taken up, it is through deficit financing that we can work them up. All those matters we could very well discuss at the time of the budget discussion, not at the time when we have to offer our thanks to the Rajpramukh for the fine words he has addressed us, and he has addressed only on two important matters. I hope the Opposition will not press their amendments and will withdraw them and will unanimously be with us when we pass the motion of Thanks.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಅಧ್ಯಕ್ಷರೇ, ಇದುವರೆಗೂ ನಮ್ಮ ಶ್ರೀಮನ್ಮಹಾರಾಜರವರು ದಯಪಾಲಿಸಿದ ಭಾಷಣದ ಮೇಲೆ ಅನೇಕ ಜನರು ಅನೇಕ ವಿಧವಾಗಿ ಚರ್ಚೆಗಳನ್ನು ಮಾಡಿದ್ದಾರೆ; ತಮ್ಮ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ ಭಾಷಣ ಈಗಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವುದಾದರೆ, ನಿಜವಾಗಿಯೂ ಚೆನ್ನಾಗಿದೆ. ಅದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಶ್ರೀ ಜೆ. ಮಹಮದ್ ಇಮಾಂ.—ವಿಧಿಯಿಲ್ಲ; ವಂದಿಸಲೇಬೇಕು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಾಗಲ್ಲ; ಇದ್ದದ್ದನ್ನು ಇದ್ದಹಾಗೆ ಹೇಳಬೇಕಾದದ್ದು ನ್ಯಾಯ. ನಿಜವಾಗಿಯೂ ಇದು ಅಭಿನಂದನಾರ್ಹವಾಗಿದೆಯೆಂದು ಹೇಳಬೇಕು. ಆದರೂ ಇಲ್ಲಿ ಕೊಟ್ಟಿರುವ ಒಂದೆರಡು ಸೂಚನೆಗಳ ವಿಷಯದಲ್ಲಿ ಸ್ವಲ್ಪ ನಾನು ಹೇಳಬೇಕಾಗಿದೆ. "ನಾವು ಸ್ವಲ್ಪ ಸುಧಾರಿಸಿಕೊಂಡರೆ ಒಳ್ಳೆಯದು; ದೇಶದ ಹಿತದೃಷ್ಟಿಯಿಂದ ಕೊಂಚ ಮಟ್ಟಿಗೆ ಯೋಚನೆಮಾಡಿರಿ" ಎಂದು ಹೇಳುತ್ತಾರೆ. ಒಳ್ಳೆಯದು, ಹಾಗೆಯೇ ಯೋಚನೆಮಾಡೋಣ. ಹಾಗೆಯೇ ಯೋಚನೆಮಾಡುತ್ತಾ ಹೋದರೂ, ಇಲ್ಲಿ ಮೊದಲನೆಯದಾಗಿ, ಸಂಸ್ಕೃತಿಯ ಅಭಿವೃದ್ಧಿಯ ವಿಚಾರವಾಗಿ ಇವರೇನು ಮಾಡಿದ್ದಾರೋ ಅದನ್ನು ನೋಡುವುದಾದರೆ, ನನಗೆನ್ನಿಸುತ್ತದೆ,—ದೇಶದ ಸಂಸ್ಕೃತಿ ಯಾವುದು? ಯಾವುದಕ್ಕೆ ನಾವು ಸಂಸ್ಕೃತಿಯೆಂದು ಹೇಳಬೇಕು? ಯಾವ ಮತದ್ದು! ಎಂದು. ನಮ್ಮ ದೇಶದಲ್ಲಿ ಎಷ್ಟೋ ಪಂಗಡಗಳಿವೆ, ಎಷ್ಟೋ ಮತಗಳಿವೆ! ಇವು ಯಾವುದರ ತಿದ್ದುಪಾಟಿನ ಮೇಲೆ ಸಂಸ್ಕೃತಿಯನ್ನು ಅಭಿವೃದ್ಧಿಮಾಡಬೇಕು ಎಂಬ ಯೋಚನೆ ಬರುತ್ತದೆ. ಇನ್ನೊಂದೇನೆಂದರೆ, ಸಂಸ್ಕೃತಿಯನ್ನು ಅಭಿವೃದ್ಧಿಮಾಡಬೇಕಾಗಿದೆಯೆಂದರೆ, ಈಗ ನಮ್ಮ ಸಂಸ್ಕೃತಿ ಹಿಂದುಳಿದಿದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬಹಳ ಉತ್ತಮವಾದ, ಸುಸಂಸ್ಕೃತವಾದ, ಮುಂದುವರಿದ ದೇಶ ನಮ್ಮದು. ಈಗೇನೋ ಕೆಲವು ಕಾಲದಿಂದ, ರಾಜಕೀಯ ಕಾರಣಗಳ ದೆಸೆಯಿಂದ ಕೊಂಚ ಅವ್ಯವಸ್ಥೆಯಾಗಿದೆಯೇ ಹೊರತು ಇನ್ನೇನೂ ಇಲ್ಲ. ಈ ಅವ್ಯವಸ್ಥೆಗೂ ಕಾರಣ ಇಷ್ಟೆ: ನಮ್ಮ ಆರ್ಥಿಕಸ್ಥಿತಿ ಸರಿಯಾಗಿಲ್ಲದಿರುವುದೇ ಇಷ್ಟಕ್ಕೆ ಎಡೆ ಕೊಟ್ಟಿದೆ. ಆದ್ದರಿಂದ ಆರ್ಥಿಕ ವ್ಯವಸ್ಥೆಯನ್ನು ಸರಿಮಾಡಿತೆಂದರೆ ಈ ಒಂದು ಕುಂದುಕೊರತೆ ಬರಲಿಕ್ಕೆ ಕಾರಣವಿಲ್ಲ. ಅದನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಿ ತನ್ಮೂಲಕ ನಮ್ಮ ಸಂಸ್ಕೃತಿಯನ್ನು ಬೆಳಗುವಂತೆ ಮಾಡುವುದು ಸರಿಯಾದ ಮಾರ್ಗ. ಏಕೆಂದರೆ, ಹಿಂದಿನಿಂದಲೂ ದೊಡ್ಡದಾದ ಸಂಸ್ಕೃತಿ ನಮ್ಮ ದೇಶದಲ್ಲಿದೆ. ಅದೇ ಸಂಸ್ಕೃತಿಯನ್ನು ಇಟ್ಟುಕೊಂಡರೆ ನಮಗೆ ಸಾಕು ಎಂದು ನನಗೆ ತೋರುತ್ತದೆ. ಇದಕ್ಕಾಗಿ ಪ್ರಚಾರ ಬೇಕಿಲ್ಲ. ದೊಡ್ಡ ದೊಡ್ಡ ಗುರುಗಳು, ಮಹಾಸ್ವಾಮಿಗಳು, ಪ್ರಸಿದ್ಧವಾದ ಸಂಘ ಸಂಸ್ಥೆಗಳು ಏನೇನಿವೆಯೋ ಅವುಗಳ ಕಡೆಗೆ ಹೆಚ್ಚಿಗೆ ಗಮನವಿಟ್ಟು ಸಹಾಯ ನೀಡಿ ಅವರ ಕಾರ್ಯಗಳನ್ನು ಪ್ರೋತ್ಸಾಹಿಸಿದರೆ ಈ ಸಂಸ್ಕೃತಿಯ ಕೆಲಸ ಹೆಚ್ಚಿಗೆ ಆಗುತ್ತದೆಂದು ನಾನು ಭಾವಿಸುತ್ತೇನೆ. ಹಾಗಿಲ್ಲದೆ ಈ ರೀತಿ ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಹೋಗಿ ಅನೇಕರನ್ನು ನೇಮಿಸಿ ಎಲ್ಲರೂ ಇಂಥ ಪಾಠ, ಪುಸ್ತಕಗಳನ್ನು ನೋಡಿಕೊಂಡು ಸಂಸ್ಕೃತಿ ಪ್ರಚಾರ ಮಾಡುವುದಕ್ಕೆ ಹೋದರೆ ಅದರಿಂದ ಏನು ಪ್ರಯೋಜನವಾಗುತ್ತದೆಂದು ನೀವೇ ಊಹಿಸಬಹುದು. ಇದಕ್ಕಿಂತ ಹೆಚ್ಚಿಗೆ ಈ ವಿಚಾರದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನೊಂದು, ವಿದ್ಯಾಭ್ಯಾಸದ ವಿಚಾರ ಹೇಳಿದ್ದಾರೆ. ಈ ವಿಷಯದಲ್ಲಿ ಮಹಾರಾಜರವರು ಅಪ್ಪಣೆಕೊಡಿಸಿರುವುದು ಸೂಕ್ತವಾಗಿದೆಯೆಂದು ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಕೂಡ ತಮ್ಮ ಸಂತೋಷವನ್ನು ವ್ಯಕ್ತ

ಪಡಿಸಿದ್ದಾರೆ. ನನಗೆ ಮಾತ್ರ ಅದರಲ್ಲೇನೂ ಗೊತ್ತಾಗುವುದಿಲ್ಲ. ಅದರೂ ದೊಡ್ಡ ದೊಡ್ಡ ಮಹನೀಯರು, ವಿದ್ವಾಂಸರು, ಮೇಧಾವಿಗಳು ಸೇರಿ ಇದನ್ನು ಮಾಡಿರುವುದು. ಶ್ರೀಮಾನ್ ಪಟ್ಟಾಭಿರಾಮಯ್ಯರವರೂ ಕಮಿಟಿಯಲ್ಲಿದ್ದರು. ಅವರು ಎಲ್ಲವನ್ನೂ ಚೆನ್ನಾಗಿ ನೋಡಿ ಮಾಡಿರಬೇಕೆಂದು ತೋರುತ್ತದೆ. ಆದ್ದರಿಂದ ಇದರ ವಿಷಯದಲ್ಲಿ ನಮ್ಮಂಥ ಅರಿಯದವರು ಏನೂ ಹೆಚ್ಚಿಗೆ ಮಾತನಾಡುವುದಕ್ಕೆ ಮುಂಚೆ ಕೊಂಚ ಕಾದುನೋಡುವುದು ಮೇಲು ಎಂದು ಭಾವಿಸಿದ್ದೇನೆ. ಪ್ರೈಮರಿ ಸ್ಕೂಲು ವಿದ್ಯಾಭ್ಯಾಸದ ಮಟ್ಟಿಗೆ ಒಂದು ವರ್ಷ ಕಡಮೆ ಮಾಡಿದ್ದಾರೆ. ಇದು ಬಹಳ ಚೆನ್ನಾಗಿದೆ. ಪ್ರತ್ಯಕ್ಷವಾಗಿ ನೋಡದೆ ಇದ್ದರೂ ಇದು ಒಳ್ಳೆಯದೆಂದು ನಾನು ಒಪ್ಪಿಕೊಳ್ಳುತ್ತೇನೆ. ಅವರುಗಳು ಹೇಳಿದುದನ್ನು ಕೇಳಿದ್ದರಲ್ಲಿ ಚೆನ್ನಾಗಿದೆಯೆಂದು ಕಾಣುತ್ತದೆ. ಅನೇಕರು ಸೇರಿ ದೇಶದ ಹಿತದೃಷ್ಟಿಯಿಂದ ಮಾಡಿರುವುದು ಆದ್ದರಿಂದ ಈ ವಿಚಾರದಲ್ಲಿ ಮಹಾರಾಜರವರು ಹೇಳಿರುವುದು ಸಾಧುವಾಗಿದೆಯೆನ್ನಬಹುದು.

ಆ ಮೇಲೆ ಆಹಾರ ವಿಷಯ ನೋಡಿದರೆ, ನಮ್ಮ ಸಂಸ್ಥಾನದಲ್ಲಿ ಆಹಾರದ ಪ್ರಶ್ನೆ ಅಷ್ಟಾಗಿ ಎದ್ದು ಕಾಣುತ್ತಿಲ್ಲವೆನ್ನಬಹುದು. ಹಿಂದಿನಸಾರಿ ಇದೇ ಪ್ರಶ್ನೆ ಸಭೆಯ ಮುಂದೆ ಬಂದು ಅನೇಕರು ಕಂಟ್ರೋಲ್ ತೆಗೆಯಿರಿ ಎಂದು ಹೇಳುತ್ತಿದ್ದರೂ ನಾನು ಕಂಟ್ರೋಲ್ ತೆಗೆಯಕೂಡದೆಂದು ವಾದಿಸಿದೆ. ಏಕೆಂದರೆ, ಆಗಿನ ಸಂದರ್ಭ ಹಾಗಿತ್ತು; ಮಳೆಯಿಲ್ಲದೆ ದನಕರುಗಳಿಗೆ ಮೇವು ಕೂಡ ಸಿಕ್ಕದಿರುವ ಸ್ಥಿತಿ ಆಗಿತ್ತು. ಆದರೆ ಈಚೆಗೆ, ಹಿಂದೆ ಮಳೆ ಎಷ್ಟು ಹೋಗಿತ್ತೋ ಅಷ್ಟು ಹೆಚ್ಚಿಗೆ ಬಂದು ಎಲ್ಲಿ ಹೋದರೂ ನಿಮ್ಮೂರಿನ ಕೆರೆ ಕಟ್ಟೆಗಳಾಸವಾದರೂ ಒಡೆಯಿತೇನಪ್ಪಾ ಎಂದು ಕೇಳುವ ಸ್ಥಿತಿ ಬಂತು. ಇದರಿಂದಾಗಿ ಎಂದೂ ಕಾಣದ ಬೆಳೆ ಈ ಸಾರಿ ಕಂಡಿದ್ದೇವೆ. ಮೊದಲು ಒಂದು ಜೋಳದ ಗೆಡ್ಡೆಗೆ ಒಂದು ತೆನೆ ಬಿಡುತ್ತಿದ್ದುದು ಒಂದೊಂದೂ ಕವಲೊಡೆದು ಮೂರು ನಾಲ್ಕು ತೆನೆಗಳು ಬಿಟ್ಟಿವೆ; ಜೊತೆಗೆ ಮೊದಲನೆ ಬೆದೆಗೆ ಹಾಕಿದ ಬೆಳೆಯ ಕೂಳೆಯಿಂದ ಕೂಡ ಎಕರೆಗೆ 8—10 ಪಲ್ಲದಷ್ಟು ದವಸ ಬಂತು. ಹೀಗಿರುವಾಗ ಇನ್ನು ಕಂಟ್ರೋಲ್ ಇಟ್ಟುಕೊಳ್ಳುವ ಅವಶ್ಯಕತೆಯಿಲ್ಲ. ಕಂಟ್ರೋಲನ್ನು ತೆಗೆಯಬಹುದೆಂದು ನಾನೇ ಈಗ ಹೇಳುತ್ತೇನೆ. ಹಿಂದೆ ನಾನೇ ಕಂಟ್ರೋಲ್ ಇರಬೇಕೆಂದು ಹೇಳಿದ್ದವಳು. ಈಗ ಅಗತ್ಯವಿಲ್ಲ. ನೀವು ಈಗ ಧೈರ್ಯವಾಗಿ ತೆಗೆಯಬಹುದು. ಇದರಿಂದ ಸರ್ಕಾರದವರಿಗೂ 50 ಲಕ್ಷ ರೂಪಾಯಿಗಳ ಹೆಚ್ಚಿನ ಖರ್ಚು ಉಳಿಯುತ್ತದೆ. ಈ ಹಣವನ್ನು ಉಳಿಸಿಕೊಂಡರೆ ಈ ಪಾಂಚವಾರ್ಷಿಕ ಯೋಜನೆಗಾದರೂ ಅನುಕೂಲವಾಗಬಹುದು; ದೇಶಕ್ಕೂ ಒಳ್ಳೆಯದಾಗುತ್ತದೆ. ಕಂಟ್ರೋಲ್ ತೆಗೆಯೆಂದಾಕ್ಷಣ ಪೂರ್ತಿಯಾಗಿ ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆಂದಲ್ಲ. ಸರ್ಕಾರಿ ಡಿಪೋಗಳು ಹೋದರೆ ವರ್ತಕರ ಕೈಯಲ್ಲಿ ರೂಪಾಯಿಗೆ ಒಂದು ಸೇರಿನಂತೆ ಕೊಂಡುಕೊಳ್ಳಬೇಕಾದೀತೆಂಬ ಭೀತಿಯಿರಬೇಕಾಗಿಲ್ಲ. ಸರ್ಕಾರ ಫೇರ್‌ಪ್ರೈಸ್ ಡಿಪೋಗಳನ್ನಿಟ್ಟು ಮಾರಾಟ ಮಾಡಿಸಬಹುದು, ಆ ರೀತಿ ಮಾಡುವಂತೆ ತಮ್ಮ ಹತೋಟಿ ವ್ಯವಸ್ಥೆಯನ್ನು ತಿದ್ದುಪಾಟುಮಾಡಿಕೊಂಡರೆ ಒಳ್ಳೆಯದು. ಒಟ್ಟಿನಲ್ಲಿ ಕಂಟ್ರೋಲ್ ಹೋಗುವುದು ಒಳ್ಳೆಯದೆಂದು ನಾನು ಅಭಿಪ್ರಾಯಪಡುತ್ತೇನೆ.

ಆ ಮೇಲೆ ಕೈಗಾರಿಕೆಗಳ ವಿಚಾರದಲ್ಲಿ ಮಹಾರಾಜರವರು ಒಂದು ಮಾತು ಹೇಳಿದ್ದಾರೆ. ಕೈಗಾರಿಕೆಗಳನ್ನು ತಾವು ಹೇಗೆ ನಡೆಸಬೇಕು ಎಂಬುದನ್ನು ತಿಳಿಯಬೇಕು. ಈಗ ಎರಡು ಮೂರು ಪಟ್ಟಣಗಳಲ್ಲಿ ಕೆಲವು ಕೈಗಾರಿಕೆಗಳನ್ನು ಮಂಜೂರುಮಾಡಿರುವುದಾಗಿಯೂ ಸದ್ಯದಲ್ಲೆ ಪ್ರಾರಂಭಮಾಡುವುದಾಗಿಯೂ ಕೇಳಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಈ ರೀತಿ ಪಟ್ಟಣಗಳಲ್ಲಿ ಹೆಚ್ಚು ಹೆಚ್ಚಿಗೆ ಕೈಗಾರಿಕೆಗಳನ್ನು ಏರ್ಪಾಡು ಮಾಡುವುದು ಸೂಕ್ತವಲ್ಲ. ಏಕೆಂದರೆ ಪಟ್ಟಣಗಳಲ್ಲಿನ ಜನರಿಗೆ ಈಗಿರುವಂತೆಯೇ ಬೇಕಾದಷ್ಟು ಕೂಲಿ ಸಿಕ್ಕುತ್ತಿದೆ. ಅವರಿಗೆ ಇನ್ನೂ ಹೆಚ್ಚಿಗೆ ಕೂಲಿಗೇಕೆ ಅವಕಾಶ ಮಾಡಿಕೊಡಬೇಕು? ಅದಕ್ಕೆ ಬದಲಾಗಿ ಹಳ್ಳಿಗಳಿಗೆ ಹೋಗಿ ಹಳ್ಳಿಗಳವರಿಗೆ ಕೂಲಿನಾಲ ದೊರೆಯುವಂತೆ ಮಾಡಿದರೆ ಅವರ ಆರ್ಥಿಕಸ್ಥಿತಿ ಉತ್ತಮವಾಗುತ್ತದೆ. ಆದ್ದರಿಂದ ಹಳ್ಳಿಗಳಲ್ಲಿ ಮುಖ್ಯವಾಗಿ ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳು ಹುಟ್ಟಬೇಕು. ಅದರಲ್ಲೂ ಹಳ್ಳಿಯ ಮನೆ ಮನೆಯಲ್ಲೂ ಕೈಗಾರಿಕೆಗಳು ಬೆಳೆಯುವಂತಾಗಿ, ಹಳ್ಳಿಯ ಮನೆ ಮಕ್ಕಳೇ ಇವುಗಳನ್ನು ನಡೆಸುವಂತಾಗಬೇಕು. ಅವರು ತಯಾರುಮಾಡಿದ ಪದಾರ್ಥಗಳಿಗೆ ಸರಿಯಾದ ಮಾರ್ಕೆಟ್ಟನ್ನು ಮಾತ್ರ ತಾವು ಏರ್ಪಾಡು ಮಾಡಿಕೊಟ್ಟರೆ ಸಾಕು. ಹೀಗೆ ಮಾಡಬೇಕೇ ಹೊರತು ಪಟ್ಟಣಗಳಲ್ಲೇ ಹೆಚ್ಚು ಹೆಚ್ಚಿಗೆ ಕೈಗಾರಿಕೆಗಳು ಬೆಳೆಯುವುದಕ್ಕೆ ಅವಕಾಶ ಮಾಡಕೂಡದು. ದೇಶದ ಎಲ್ಲ ಜನರಿಗೂ ಸುಖ ಸಿಕ್ಕಬೇಕೆಂದರೆ ಈ ರೀತಿಯಾಗಿ ಮನೆಯಲ್ಲಿರುವವರಿಗೆ ಕೆಲಸ ಸಿಕ್ಕುವಂತೆ ಮಾಡಬೇಕು.

4 P.M.

ಮುನಿಸಿಪಾಲಿಟಿಗಳಿಗೆ 50 ಲಕ್ಷ ರೂಪಾಯಿ ಗ್ರಾಂಟುಕೊಟ್ಟು ಸಹಾಯ ಮಾಡಿದ್ದಾರೆ. ಅಲ್ಲದೆ ಕೆಲವು ಪಟ್ಟಣಗಳಿಗೆ—ದಾವಣಗೆರೆ, ಬೆಂಗಳೂರು ಮತ್ತು ಮೈಸೂರು—ಈ ಮೂರು ಪಟ್ಟಣಗಳಲ್ಲಿ ನೀರು ಸರಬರಾಯಿ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಇದು ನಾವು ಸ್ವಲ್ಪ ಯೋಚನೆ ಮಾಡಬೇಕಾದ ವಿಷಯ. ಹಳ್ಳಿಗಳಲ್ಲಿ ನೋಡಿದರೆ, ಅಲ್ಲಿ ಕೆರೆಗಳಲ್ಲಿ ನೀರಿಲ್ಲ, ಸ್ನಾನಮಾಡುವುದಕ್ಕೂ ನೀರಿಲ್ಲದೆ ನಾಲ್ಕು ದಿನಗಳಿಗೊಮ್ಮೆ ಕೂಡ ಸ್ನಾನ ಮಾಡಲು ಸಾಧ್ಯವಿಲ್ಲ. ಪಟ್ಟಣಗಳಿಗೆ ಸಹಾಯಮಾಡಲಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಹಳ್ಳಿಗಳ ಕಡೆ ನೀರು ಸರಬರಾಯಿ ವ್ಯವಸ್ಥೆಗೆ ಹೆಚ್ಚುಗಮನ ಕೊಡಬೇಕು. ಒಂದೊಂದು ಹಳ್ಳಿಗೆ ಕೇವಲ ಮೂರು ನಾಲ್ಕು ಸಾವಿರ ರೂಪಾಯಿ ಖರ್ಚುಮಾಡಿದರೆ ಸಾಕು. ಬಾವಿ ತೋಡಿಸಿ ಪಂಪುಗಳನ್ನಿಟ್ಟರೆ ಎಷ್ಟೋ ಅನುಕೂಲವಾಗುತ್ತದೆ ಆ ಹಳ್ಳಿ ಜನರಿಗೆ. ನೀರಿಗಾಗಿ ಕಷ್ಟಪಡುತ್ತಿರುವ ಹಳ್ಳಿಯ ಹೆಣ್ಣುಮಕ್ಕಳು ಸರ್ಕಾರಕ್ಕೆ ಆಶೀರ್ವಾದ ಮಾಡುತ್ತಾರೆ, ಎಷ್ಟೋ ಸಮಾಧಾನ ಪಡುತ್ತಾರೆ. ಹಳ್ಳಿಯ ಜನರನ್ನೂ ಗಮನದಲ್ಲಿಟ್ಟುಕೊಂಡು ಮೂರು ಪಟ್ಟಣಗಳಿಗೆ ಖರ್ಚುಮಾಡುವಷ್ಟು ಹಣವನ್ನು, 79 ಹಳ್ಳಿಗಳಿಗೆ ಖರ್ಚುಮಾಡಿ ಸಹಾಯ ಮಾಡಿದರೆ ನಮ್ಮ ಸರ್ಕಾರವನ್ನು ಎಲ್ಲರೂ ಹೊಗಳುತ್ತಾರೆ.

ಇನ್ನು ವ್ಯವಸಾಯಗಾರರಿಗೆ ಸಾಲವನ್ನು ಕೊಡುವ ಏರ್ಪಾಡು ಮಾಡಿರುವುದಾಗಿ ಹೇಳಿದೆ. ಸಾಮಾನ್ಯವಾಗಿ ರೈತನಿಗೆ ಅಡಮಾನದ ಬ್ಯಾಂಕು ಸಾಲಕೊಡುವುದೆಂದರೆ, ರೈತ ಎಷ್ಟು ಸಾಲ ಮಾಡಿಕೊಂಡಿರುತ್ತಾನೆ, ಅವನ ಆಸ್ತಿ ಮತ್ತು ಜಮೀನು ಎಷ್ಟಿದೆ ಎಂಬುದನ್ನೆಲ್ಲಾ ನೋಡಿ, ಅದಕ್ಕೆಷ್ಟು ಬೇಕೋ ಅಷ್ಟುಮಾತ್ರ ವ್ಯವಸ್ಥೆಮಾಡುತ್ತಾರೆ, ಸಾಲವನ್ನು ತೀರಿಸುವುದಕ್ಕೆ ಮಾತ್ರ ಕೊಡುತ್ತಾರೆಯೇ ಹೊರತು ಮಿಕ್ಕದ್ದಕ್ಕೆ ಕೊಡುವುದಿಲ್ಲ. ಇದರಿಂದ ರೈತನ ಮುಂದಿನ ಅಭಿ

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ವೃದ್ಧಿಯಾಗುವುದಿಲ್ಲ. ರೈತನಿಗಿದ್ದ ಸಾಲ ತೀರಿಸಿಕೊಂಡಮೇಲೆ ತನ್ನ ಜಮೀನನ್ನು ಅಭಿವೃದ್ಧಿಮಾಡಲು, ಬೀಜ ಕೊಂಡುಕೊಳ್ಳಲು ಅಥವಾ ಬೇರೆ ವ್ಯವಸಾಯದ ಖರ್ಚಿಗೆ ಹಣಸಿಕ್ಕುವುದಿಲ್ಲ. ಆಗ ರೈತನಿಗೆ ತೊಂದರೆ ಬರುತ್ತದೆ. ಸಾಹುಕಾರರಲ್ಲಿ ಹೋದರೆ ಅವರು ತೊಂದರೆ ಮಾಡುತ್ತಾರೆ, ರೈತರಲ್ಲಿ ಹಣವಿರುವುದಿಲ್ಲ, ಸರ್ಕಾರದಿಂದ ಸಾಲಸಿಕ್ಕುವುದಿಲ್ಲ. ಹೀಗೆ ಒಳ್ಳೆಯ ಸಮಯದಲ್ಲಿ ತೊಂದರೆಯಾಗಿ, ರೈತನ ಅಭಿವೃದ್ಧಿಯಾಗುವುದಿಲ್ಲ. ಆದುದರಿಂದ ವ್ಯವಸಾಯವನ್ನು ಉತ್ತಮಗೊಳಿಸಲು ಸಮಯಕ್ಕೆ ಸರಿಯಾಗಿ ರೈತನಿಗೆ ಹಣ ಕೊಡುವಂತೆ ಏರ್ಪಾಡು ಮಾಡಬೇಕೆಂದು ಈ ಮೂಲಕ ಅರಿಕೆ ಮಾಡುತ್ತೇನೆ.

ನಿಮ್ಮ ತರಗತಿಯವರಿಗೆ ಒಟ್ಟು 27 ಸಾವಿರ ಮನೆಗಳನ್ನು ಕಟ್ಟಿಸಿದ್ದಾರೆ. ಈ ವರ್ಷ ಒಂಬತ್ತು ತಿಂಗಳಲ್ಲಿ 3,833 ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇದು ಬಹಳ ಹೆಚ್ಚಿನದೆಂದೇ ಹೇಳಬೇಕು. ಸರ್ಕಾರದಲ್ಲಿ ಹಣವಿಲ್ಲದೇ ಇರುವಾಗ ಇಷ್ಟು ಮಾಡುವುದು ಹೆಚ್ಚು. ಸುಲಭವಾಗಿ ಮಾತನಾಡಬಹುದು; ಇಷ್ಟು ಕೆಲಸ ಮಾಡಬೇಕೆಂದರೆ ಸುಲಭವಲ್ಲ. ಇದೇ ದೊಡ್ಡದೆಂದು ಭಾವಿಸಬೇಕು. 27,285 ಮನೆಗಳನ್ನು ಕಟ್ಟಿಸಿರುವುದರಿಂದ ಎಷ್ಟೋ ಅನುಕೂಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಎಷ್ಟೋ ವರ್ಷಗಳಿಂದ ಕಟ್ಟಿರುವುದು ಇದು. ಇನ್ನೂ ಎಷ್ಟೋಜನ ತೊಂದರೆ ಪಡುತ್ತಿದ್ದಾರೆ. ಇನ್ನು ಹತ್ತು ವರ್ಷಗಳಲ್ಲಿ ಇತರರ ಮಟ್ಟಕ್ಕೆ ತರಲು ಸಾಧ್ಯವೆ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಿಮ್ಮದು ಬಣ್ಣದ ಕನ್ನಡಕದ ದೃಷ್ಟಿ ಎಂದು ಕಾಣುತ್ತದೆ. ಸ್ವಚ್ಛವಾದ ಕನ್ನಡಕ ಹಾಕಿಕೊಳ್ಳಿ, ಸರಿಯಾಗಿ ಕಾಣುತ್ತದೆ! (ನಗು!)

ಹೋದವರ್ಷದಲ್ಲಿ ಈ ಬಾಬಿನಲ್ಲಿ ಏನು ಹಣ ಉಳಿದಿದೆಯೋ ಅದನ್ನು ಇದಕ್ಕಾಗಿಯೇ ಇಟ್ಟುಕೊಂಡು ವಿನಿಯೋಗಿಸಬೇಕು. ಇನ್ನು ಹತ್ತು ವರ್ಷಗಳಲ್ಲಿ ಎಷ್ಟೋ ಮಾಡಬಹುದು. ಈಗ ಎರಡು ವರ್ಷ ಕಳೆದಿದೆ. ಇನ್ನು ಎಂಟು ವರ್ಷಗಳಲ್ಲಿ ಇನ್ನೇನೇನು ಕೆಲಸಮಾಡಬೇಕು, ಹೇಗೆ ಇವರನ್ನು ಅಭಿವೃದ್ಧಿಸ್ಥಿತಿಗೆ ತರಬೇಕು ಎಂಬುದನ್ನು ಯೋಚಿಸಿನೋಡಿ ಅದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಎಲ್ಲರೂ ಒಂದೇ ಘನ ಉದ್ದೇಶವನ್ನಿಟ್ಟುಕೊಂಡು ಶ್ರಮಪಡಬೇಕು. ದೇಶದ ಉದ್ಧಾರಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ; ಜನರ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೆ. ದೇಶದ ಉದ್ಧಾರಕ್ಕೆ ಜನರ ಉದ್ಧಾರಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡಬೇಕು. ಹಾಗೆ ಮಾಡಿ ಮೈಸೂರಿನ ಕೀರ್ತಿಯನ್ನು ಉಳಿಸಬೇಕು, ಬೆಳೆಸಬೇಕು.

ಇನ್ನು ಈ ಸಭೆಯ ಮುಂದೆ ಬರಬೇಕಾಗಿರುವ ಹನ್ನೆರಡು ಮಸೂದೆಗಳಿವೆ. ಅವುಗಳ ವಿಷಯ ನನಗೆ ಗೊತ್ತಾಗುವುದಿಲ್ಲ. ನಮ್ಮಲ್ಲನೇಕರು ಲಾಯರುಗಳೂ ತಿಳಿದವರೂ ಇದ್ದಾರೆ; ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ನೋಡಿ ಹೇಗೆ ಮಾಡಬೇಕೋ ಹಾಗೆ ಮಾಡಬಹುದು.

ಪಾಂಚವಾರ್ಷಿಕ ಯೋಜನೆಯನ್ನು ಕೆಲವರು ಟೀಕೆ ಮಾಡುತ್ತಿದ್ದಾರೆ. ಯಾವ ಕೆಲಸವನ್ನು ಮಾಡುವುದಕ್ಕೆ ಹೋದರೂ ಅದರಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇರುತ್ತದೆ. ಉದಾಹರಣೆಗೆ ಹಾಲನ್ನು ಕುಡಿದರೆ ದೇಹಕ್ಕೆ ಒಳ್ಳೆಯದು. ಕೆಲವರಿಗೆ ಅದೇ ಹಾಲಿನಿಂದ ಅಜೀರ್ಣವಾಗುವ ಪ್ರಸಂಗವೂ ಇದೆ. ಹೀಗೆ ಒಂದು ಕೆಲಸಮಾಡಲು ಹೊರಟರೆ ಕೆಲವರ ದೃಷ್ಟಿಯಿಂದ ಅದು ಒಳ್ಳೆಯದು ಮತ್ತೆ ಕೆಲವರ ದೃಷ್ಟಿಯಿಂದ ಕೆಟ್ಟದ್ದಾಗುತ್ತದೆ. ಆದರೆ ಮುಖ್ಯವಾದ ದೃಷ್ಟಿಯನ್ನು ನೋಡಿ, ಅಲ್ಪ ಸ್ವಲ್ಪ ಕೆಟ್ಟದ್ದಾದರೂ ಒಟ್ಟು ದೇಶದ ಹಿತವನ್ನು ನೋಡಬೇಕು. ಹೀಗೆ ಮುಖ್ಯವಾದ ದೃಷ್ಟಿಯನ್ನಿಟ್ಟುಕೊಂಡು ಈ ಯೋಜನೆಗೆ ಸರ್ವರೂ ಬೆಂಬಲ ಕೊಡಬೇಕು, ದುಡಿಯಬೇಕು. ಹಾಗೆ ಮಾಡಿದರೆ ಯಶಸ್ವಿಯಾಗುತ್ತದೆ. ಇದನ್ನು ನಮ್ಮ ದೇಶದ ನಾಯಕರು ನೆಹರೂರವರು ಒಪ್ಪಬೇಕಾಗಿದ್ದರೆ ಸುಲಭಕ್ಕೆ ಒಪ್ಪುವುದಿಲ್ಲ. ಹೀಗಿರುವಾಗ ಅವರೂ ಈ ಯೋಜನೆಯನ್ನು ಒಪ್ಪಿದ್ದಾರೆ. ಆದಕಾರಣ ನಾವೆಲ್ಲರೂ ಒಮ್ಮನಸ್ಸಿನಿಂದ ಕೆಲಸಮಾಡಬೇಕು.

ಇಷ್ಟು ಹೇಳಿ, ಶ್ರೀಮನ್ಮಹಾರಾಜರು ತಮ್ಮ ಮಕ್ಕಳಂತಿರುವ ಪ್ರಜೆಗಳಿಗೆ ಈ ಭಾಷಣವನ್ನು ಕೊಟ್ಟಿರುವುದಕ್ಕಾಗಿ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನರ್ಪಿಸುತ್ತೇನೆ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮನ್ಮಹಾರಾಜರವರು ದಯಪಾಲಿಸಿರುವ ಭಾಷಣಕ್ಕಾಗಿ ಅವರನ್ನು ಈ ಸಭೆ ಅಭಿನಂದಿಸಬೇಕಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಸಿದ್ದಲಿಂಗಯ್ಯನವರು ತಂದಿರತಕ್ಕ ಈ ವಂದನಾರ್ಪಣೆಯ ಸೂಚನೆಗೆ ನನ್ನ ಸಂಪೂರ್ಣವಾದ ಸಮರ್ಥನೆಯನ್ನು ಕೊಟ್ಟು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಬಡ್ಜೆಟ್‌ನಂತೆ ಭಾಷಣ ಮಾತನಾಡಬೇಕಾದುದಿಲ್ಲ, ಹಾಗೆ ಮಾಡುವುದು ಸರಿಯಲ್ಲವೆಂದು ಶ್ರೀವರ್ಮಾ ನಾರಾಯಣಸ್ವಾಮಿಯವರು ಹೇಳಿದರು. ಅದರಿಂದ ಸಂಕ್ಷೇಪವಾಗಿ ಈ ಭಾಷಣದ ವಿಷಯದಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ.

ಸಂಸ್ಕೃತಿ ಪ್ರಸಾರ ಯೋಜನೆಯ ವಿಚಾರ ಬಹಳ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ಒಬ್ಬಿಬ್ಬರು ಸದಸ್ಯರು ಮಾತನಾಡುತ್ತಾ, ಶ್ರೀಮನ್ಮಹಾರಾಜರು ಗೀತಾ ಜಯಂತಿಯ ದಿವಸ ಈ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಪ್ರಾರಂಭಿಸಿದುದಕ್ಕೆ ಕೆಲವು ಆಕ್ಷೇಪಣೆಗಳನ್ನು ಸೂಚಿಸಿದರು. ಇದನ್ನು ಕೇಳಿ ನಮಗೆ ಆಶ್ಚರ್ಯವಾಗುತ್ತಿದೆ. ನಮ್ಮ ರಾಜಪ್ರಮುಖರು ಹಿಂದೂಗಳಾಗಿದ್ದು ಆ ದಿವಸ ಸಂಸ್ಕೃತಿ ಪ್ರಸಾರದ ಪ್ರಾರಂಭ ಮಾಡಿದರು. ಹಾಗಿಲ್ಲದೆ ಡಿಸೆಂಬರ್ 24ನೆಯ ತಾರೀಖು ಕ್ರೈಸ್ತರ ಹಬ್ಬದ ದಿನ ಅಥವಾ ಖುರಾನ್‌ಗೆ ಸಂಬಂಧಪಟ್ಟು ಮಹಮದೀಯರ ಹಬ್ಬದ ದಿನ ಪ್ರಾರಂಭಮಾಡಬೇಕಾಗಿತ್ತೆ? ಮಹಾರಾಜರೂ ಸಹ ಎಲ್ಲ ಮತಗಳಿಗೂ ಅನ್ವಯಿಸುವ ಹಾಗೆ ಖುರಾನ್, ಬೈಬಲ್ ಮುಂತಾದ ಎಲ್ಲ ವಿಚಾರಗಳನ್ನೂ ಪ್ರಸ್ತಾಪ ಮಾಡಿದ್ದಾರೆ. ಹೀಗಿದ್ದರೂ ಪಾಕಿಸ್ತಾನದವರು ಏನು ಹೇಳುತ್ತಾರೋ ಎಂದು ಹೇಳುವುದು ಆಶ್ಚರ್ಯದ ವಿಷಯ. ಮೈಸೂರು ದೇಶದ ರಾಜಪ್ರಮುಖರು ಆದರ್ಶ ರಾಜರಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಹೇಳಿದ ಹಾಗೆ, ಯಾರು ಈ ಭಾಷಣವನ್ನು ಎಷ್ಟೇ ಟೀಕೆ ಮಾಡುವುದಕ್ಕೆ ಹೊರಟರೂ ಅವರ ಮನಸ್ಸಿಗೆ ಇದನ್ನು ವಂದಿಸಬೇಕೆಂದೇ ಬರುತ್ತದೆ. ಇದು ಗಮನಾರ್ಹವಾದ ವಿಚಾರ.

ಕೇಂದ್ರ ಪ್ಲಾನಿಂಗ್ ಕಮಿಷನ್ನಿನವರು ತಯಾರಿಸಿರುವ ಕಮ್ಯೂನಿಟಿ ಪ್ರಾಜೆಕ್ಟಿನಲ್ಲಿ ಒಂದು ಕಡೆ ಹೇಳುತ್ತಾರೆ, ಅದರಲ್ಲಿ ನಾಲ್ಕು ವಿಷಯಗಳಿವೆ, ಅವುಗಳಲ್ಲಿ Economic and Cultural development ಎಂಬುದೂ ಒಂದು. ಸಂಸ್ಕೃತಿ ಪ್ರಸಾರ ಯೋಜನೆಯ

ವಿಷಯದಲ್ಲಿ ಕೆಲವರಿಗೆ ತಪ್ಪು ಅಭಿಪ್ರಾಯವಿದೆಯೆಂದು ಕಾಣುತ್ತದೆ. ಜನಜೀವನದಲ್ಲಿ ಮನುಷ್ಯರು ಸಂಸ್ಕೃತರಾಗುವ ರೀತಿಯಲ್ಲಿ ವರ್ತಿಸುವುದಕ್ಕೆ ಸಹಾಯವಾಗುವ ಯೋಜನೆಗಳಿಗೆ ಸಂಸ್ಕೃತಿ ಪ್ರಸಾರ ಯೋಜನೆಯೆಂದು ಹೆಸರು ಕೊಟ್ಟಿದ್ದಾರೆಂದು ಕಾಣುತ್ತದೆ. ನನಗೆ ತಿಳಿದಿರುವಮಟ್ಟಿಗೆ, ಮನುಷ್ಯ ತ್ರಿಕರಣಶುದ್ಧಿಯುಳ್ಳವನಾಗಬೇಕು. ಹಾಗಾಗಬೇಕಾದರೆ ಅವನ ಮನಸ್ಸಿನ ಮೇಲೆ ಪರಿಣಾಮಕಾರಿಯಾದ ಬದಲಾವಣೆಯುಂಟು ಮಾಡುವುದು ಅವಶ್ಯಕವೆಂದು ಕಾಣುತ್ತದೆ. ಶ್ರೀ ವರ್ಮ ಗೋಪಾಲಗೌಡರು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅನ್ನಕೋಶಕ್ಕೇ ಇಲ್ಲದೇಯಿರುವಾಗ ಜ್ಞಾನಕೋಶಕ್ಕೆಲ್ಲಿ ಎಂದು ಹೇಳಿದರು. ಜ್ಞಾನಕೋಶವಿಲ್ಲದೆ ಬರಿಯ ಅನ್ನಕೋಶವಿರುವುದು ಮೃಗಸಮಾನವೆಂದು ವಾಡಿಕೆ ಇರುವುದನ್ನು ಅವರು ಮರೆತಂತೆ ಕಾಣುತ್ತದೆ. ನಾವು ಮನುಷ್ಯರಾಗಿ ಹುಟ್ಟಿರುವುದು ಕೇವಲ ಅನ್ನಕೋಶವನ್ನು ಭರ್ತಿ ಮಾಡುವುದಕ್ಕಲ್ಲ ಎಂದು ನನಗನ್ನಿಸುತ್ತದೆ. ಮನುಷ್ಯನಿಗೆ ಜ್ಞಾನಕೋಶ ಅತ್ಯಾವಶ್ಯಕವೆಂದು ಕಾಣುತ್ತದೆ. ಮನುಷ್ಯ ಸಂಸ್ಕೃತನಂತೆ ವರ್ತಿಸಬೇಕಾದರೆ, ಅವನ ಮನಸ್ಸಿನ ಮೇಲೆ ಸತ್ಪರಿಣಾಮವುಂಟಾಗುವುದು ಮುಖ್ಯ. ಒಳ್ಳೆಯದನ್ನು ಯೋಚಿಸಬೇಕು, ಒಳ್ಳೆಯದನ್ನು ಆಲೋಚಿಸಬೇಕು, ಒಳ್ಳೆಯದನ್ನು ಮಾತಬೇಕು. ಹಾಗೆ ಮಾಡುವವನು ಸಂಸ್ಕೃತನಾದ ಮನುಷ್ಯನೆಂದು ಹೇಳಬೇಕಾಗಿದೆ. ಯಾರು ಯಾವ ಮತಕ್ಕೆ ಸೇರಿದವರಾಗಿರಲಿ, ಅವರವರ ಮನಸ್ಸಿನ ಮೇಲೆ ಯಾವುದರಿಂದ ಬೇಗ ಸತ್ಪರಿಣಾಮವಾಗುತ್ತದೆಯೋ ಅದನ್ನು ಮಾಡಬೇಕು. ಯಾವುದರ ವಿಚಾರ ಜ್ಞಾಪಕ ಮಾಡಿಕೊಂಡರೆ ಅವರ ಮನಸ್ಸಿನ ಮೇಲೆ ಪರಿಣಾಮವುಂಟಾಗುತ್ತದೆಯೋ ಅದನ್ನು ಜ್ಞಾಪಿಸಬೇಕು. ಉದಾಹರಣೆಗೆ, ಹಿಂದೂಗಳು ಯಾರು ಯಾರ ವಿಚಾರವನ್ನು ಜ್ಞಾಪಕಮಾಡಿಕೊಂಡರೆ ಅವರಲ್ಲಿ ಸತ್‌ಪರಿಣಾಮವಾಗುತ್ತದೆ, ಸ್ಫೂರ್ತಿ ಬರುತ್ತದೆ, ಅದನ್ನು ಜ್ಞಾಪಿಸಬೇಕು. ಅದರಿಂದಲೇ ರಾಮಾಯಣ, ಭಾರತ, ಇವೆಲ್ಲವನ್ನೂ ಸೇರಿಸಿರುವುದು. ಇವುಗಳನ್ನು ಓದಿದ ಮಾತ್ರಕ್ಕೇ ಸಂಸ್ಕೃತರಾಗುತ್ತಾರೆಂದು ಹೇಳುವುದಿಲ್ಲ; ಮನಸ್ಸಿನ ಮೇಲೆ ಪರಿಣಾಮವಾಗಬೇಕು. ಸಾಮಾನ್ಯವಾಗಿ ಒಬ್ಬ ಮನುಷ್ಯ ಸಂಸ್ಕೃತನಾಗಬೇಕಾದರೆ ಅವನ ಹುಟ್ಟುಗುಣಗಳು ಬಹುಮಟ್ಟಿಗೆ ಸಹಾಯಕವಾಗುತ್ತವೆ. ಮಕ್ಕಳು ಬೆಳೆಯುವಾಗ ನಮ್ಮ ಸಮಾಜದಲ್ಲಿ ಯಾರಲ್ಲಿ ಅವರಿಗೆ ನಂಬಿಕೆಯಿದೆಯೋ ಅವರ ವಿಚಾರವನ್ನು ನಿತ್ಯವೂ ಬೋಧಿಸಿ ಅವರಂತೆ ನಡೆಯಬೇಕೆಂದು ಹೇಳಿದರೆ ಅವರ ಮನಸ್ಸಿನಮೇಲೆ ಪರಿಣಾಮವಾಗುತ್ತದೆ. ಇದರಿಂದ ಪ್ರಯೋಜನವಾಗುತ್ತದೆ. ಯಾರು ನಾಸ್ತಿಕರೋ ಅವರ ಮೇಲೆ ಪರಿಣಾಮವುಂಟಾಗಲಾರದು. ಯಾರಿಗೆ ಈ ಪುಸ್ತಕಗಳಲ್ಲಿ ನಂಬಿಕೆಯಿದೆಯೋ ಅವರಲ್ಲಿ ಪರಿಣಾಮವುಂಟಾಗುತ್ತದೆ. ಆದುದರಿಂದ ಇದನ್ನು ಈ ರೀತಿ ಮಾಡಿರುವುದು ಸರಿಯಾಗಿದೆ. ಇದನ್ನೇ ಅನುಸರಿಸಿ ನಮ್ಮ ಭಾರತ ಸರ್ಕಾರದವರು ರಚಿಸಿರುವ ಪ್ಲಾನಿಂಗ್ ಕಮಿಷನ್ನಿನವರೂ ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ನಾನೊಂದು ಸಲಹೆಯನ್ನು ಕೊಡಬೇಕಾಗಿದೆ. ನಮ್ಮಲ್ಲಿ ಸಂಸ್ಕೃತಿ ಪ್ರಚಾರಕರಿಲ್ಲವೇ ಎಂದು ಕೇಳಬಹುದು. ನಮ್ಮ ಸಮಾಜದಲ್ಲಿ ನಿತ್ಯಜೀವನದಲ್ಲಿ ಕೆಲವುಕಡೆ ಅನೇಕರು ಭಾರತ ಓದುತ್ತಿದ್ದಾರೆ, ನಿಜ. ಆದರೆ ಅದು ಪ್ರಚಾರವಾಗುವುದಿಲ್ಲ. ಪ್ರಸಾರವನ್ನು ಇದುವರೆಗೆ ಎಲ್ಲಿ ಸಾಧಿಸಿಲ್ಲವೋ ಅಲ್ಲಿ ಪ್ರಸಾರ ಮಾಡಬೇಕು. ಆಗ ಇದು ನಿಜವಾದ ಸೇವೆ, ಮತ್ತು ಸಹಜವಾದ ಪ್ರಚಾರವಾಗುತ್ತದೆ. ತಾವು ಇದನ್ನು ಏನು ಒಂದು ಸೆಕ್ಯುಲರ್ ಸ್ಟೇಟನ್ನಾಗಿ ಮಾಡಬೇಕೆಂದು ಇಟ್ಟುಕೊಂಡಿದ್ದೀರೋ ಅದಕ್ಕೆ ಅನುಗುಣವಾಗಿ ಈ ಪ್ರಚಾರ ಮಾಡುವಂತೆ ಮಾಡಬೇಕು. ಒಂದು ಸಂಕುಚಿತ ಮನೋಭಾವವನ್ನಿಟ್ಟುಕೊಂಡು ಪ್ರಾರಂಭ ಮಾಡಿದರೆ ಇದರಿಂದ ಖಂಡಿತವಾಗಿ ಏನೂ ಪ್ರಯೋಜನವಾಗುವುದಿಲ್ಲ. ಅಂಥದಕ್ಕೆ ಖಂಡಿತ ಅವಕಾಶ ಕೊಡಬೇಡಿ. ಹಳ್ಳಿಗಳಲ್ಲಿ ಯಾವ ಒಂದು ತಂಡ ಬಹಳ ಹಿಂದುಳಿದಿರುತ್ತದೆಯೋ ಅವರಿಗೆ ಇದರ ಪ್ರಯೋಜನ ದೊರೆಯುವಂತೆ ಮಾಡಬೇಕು. ಇಲ್ಲದಿದ್ದರೆ ಅಂಥ ಸಂಕುಚಿತ ಮನೋಭಾವದವರಿಂದ ದೇಶಕ್ಕೆ ನಿಜವಾದ ಸೇವೆ ದೊರೆಯಲಾರದು. ಹಿಂದೆಲ್ಲಾ ಇಂಥ ಪ್ರಚಾರಕ್ಕೆ ಜನರು ತಂಬೂರಿಯನ್ನು ಹಿಡಿದುಕೊಂಡು ಹೋಗುತ್ತಿದ್ದರು. ಆಗ ಅದರಿಂದ ಬಹಳ ಪ್ರಯೋಜನವಾಗುತ್ತಿತ್ತು. ಆದರೆ ಈಗ ತಂಬೂರಿ ಹಿಡಿಯ ತಕ್ಕವರೆಲ್ಲಾ ಕೇವಲ ಭಿಕ್ಷೆಗಾಗಿ ಬರುತ್ತಿದ್ದಾರೆ. ಆದ್ದರಿಂದ ಈ ಪ್ರಸಾರ ಕಾರ್ಯ ಪೂರ್ಣ ಯಶಸ್ವಿಯಾಗಿ ಜರುಗಬೇಕೆಂಬುದಾಗಿ ತಮ್ಮ ಇಚ್ಛೆ ಇದ್ದುದೇ ಆದರೆ ತಾವು ಅಂಥ ಒಳ್ಳೆ ಜನರನ್ನೇ ಇದಕ್ಕೆ ಆರಿಸಿಹಾಕಬೇಕೆಂದು ನಾನು ಸೂಚಿಸುತ್ತೇನೆ. ಆಗಲೇ ಇದರಿಂದ ಹೆಚ್ಚಿನ ಪ್ರಯೋಜನ. ಹಾಗೆ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಇನ್ನು ದೇಶದಲ್ಲಿ ವಿದ್ಯಾಭ್ಯಾಸದ ಸುಧಾರಣೆಗಾಗಿ ಸರ್ಕಾರದವರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಸುಮಾರು ವರ್ಷಂಪ್ರತಿ 3 ಕೋಟಿ 75 ಲಕ್ಷದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೂ ಮೈಸೂರು ಸಂಸ್ಥಾನದ ವಿದ್ಯಾಮಟ್ಟ ಇತರ ಸಂಸ್ಥಾನಗಳಿಗಿಂತಲೂ ಕೆಳಮಟ್ಟಕ್ಕೆ ಬರುತ್ತಿದೆ. ಕಾರಣವೇನೆಂದರೆ, ದೇಶದಲ್ಲಿ ಯಾರು ವಿದ್ಯಾ ಅರ್ಹತೆಯಲ್ಲಿ ಒಂದು ಮಟ್ಟವನ್ನು ಮುಟ್ಟಿಲ್ಲವೋ ಅಂಥವರು ದಿನೇ ದಿನೇ ವಿದ್ಯೆಯಲ್ಲಿ ಹಿಂದಕ್ಕೆ ಬೀಳುತ್ತಿರುವುದರಿಂದಲೂ ಮತ್ತು ಅವರು ಆ ಮಟ್ಟವನ್ನು ತಲುಪಲು ಅವರಿಗೆ ಸದವಕಾಶಗಳನ್ನು ಸಾಕಷ್ಟು ಕೊಡದಿರುವುದರಿಂದಲೂ ಯಥಾಪ್ರಕಾರದಂತೆ ದೇಶದ ವಿದ್ಯಾಮಟ್ಟವು ಹಿಂದಕ್ಕೆ ಬೀಳುತ್ತಿದೆ. ದೇಶದಲ್ಲಿ ನಿಮ್ನತರಗತಿಯವರ ಸಂಖ್ಯೆ 15–16 ಲಕ್ಷಕ್ಕೆ ಮೇಲ್ಪಟ್ಟಿದ್ದರೂ ಅವರಲ್ಲಿರತಕ್ಕ ವಿದ್ಯಾವಂತರ ಸಂಖ್ಯೆ ಶೇಕಡ 2 ಇರಬಹುದು. ಇನ್ನು ಉಳಿದ ಕೆಲವು ಜನಾಂಗಗಳಲ್ಲಿ ಮಾತ್ರ ವಿದ್ಯಾವಂತರ ಸಂಖ್ಯೆ 35–40ಕ್ಕೆ ಏರಿದೆ. ಒಟ್ಟಿನಲ್ಲಿ ಈ ಎಲ್ಲ ಕೋಮುಗಳನ್ನೂ ಸೇರಿಸಿ ಲೆಕ್ಕ ಹಾಕಿದರೆ ಆಗ ಕಾಣುವುದೆಲ್ಲಾ ಕೇವಲ ಶೇಕಡ 20—21 ಇರುತ್ತದೆ. ಇದಕ್ಕಾಗಿ ನಮ್ಮ ಸರ್ಕಾರದವರು ಸರಿಯಾದ ಒಂದು ಏರ್ಪಾಡನ್ನು ಮಾಡದೆ ಹೋದರೆ ಇವರು ವಿದ್ಯಾಭ್ಯಾಸ ಕ್ರಮದಲ್ಲಿ ಏನು ಬದಲಾವಣೆಗಳನ್ನು ಮಾಡಿದರೂ ಅದರಿಂದ ಸಾರ್ವಜನಿಕರಿಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಹೇಳುತ್ತೇನೆ.

ಸ್ವಾಮಿ, ಇನ್ನು ಪಾಂಚವಾರ್ಷಿಕ ಯೋಜನೆಯ ಬಗ್ಗೆ ಅನೇಕ ಕಡೆಗಳಿಂದ ಶ್ಲಾಘನ ಪತ್ರಗಳು ಬಂದಿವೆಯೆಂದೂ, ಇದನ್ನು ಇನ್ನೂ ಅನೇಕರು ಮೆಚ್ಚಿದ್ದಾರೆಂದು ತಿಳಿಸಿದರು. ಆದರೆ ಇದರ ಸಕ್ಸೆಸ್ ವಿಚಾರದಲ್ಲಿ ಅನೇಕರು ಅನುಮಾನಪಡುತ್ತಿದ್ದಾರೆ. ಕಾರಣವೇನೆಂದರೆ, ಈಗಾಗಲೇ ಇದೇ ರೀತಿ ಅನೇಕ ಯೋಜನೆಗಳು ಬಂದು ಹೋಗಿವೆ. ಹಾಗೆ ಬಂದು ಹೋಗಿರತಕ್ಕ ಯೋಜನೆಗಳಲ್ಲಿ ಇದೂ ಒಂದಾಗಬಾರದು. ಇದೂ ಅದೇ ರೀತಿ ಆಗುವುದಾದರೆ ಇದರಿಂದ ಏನೂ ಸಾರ್ಥಕವಾಗುವು

(ಶ್ರೀ ಎಂ. ಮಾದಯ್ಯ).

ದಿಲ್ಲ. ನಮ್ಮಲ್ಲಿ ಅನೇಕ ಜನ ಜಾಣರೂ, ಬುದ್ಧಿವಂತರೂ ಇರುವಾಗ ಅವರು ಇದಕ್ಕೆ ಇರತಕ್ಕ ಅಡ್ಡಿ ಆತಂಕಗಳನ್ನು ಮೊದಲು ನಿವಾರಣೆ ಮಾಡಬೇಕು. ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಅವರ ಐಡಿಯಾಲಜಿ ಹೊರತು ಅವರು ಯಾವ ದೇಶದವರು, ಯಾವ ಪಕ್ಷದವರು ಎಂಬುದನ್ನು ನಾವು ನೋಡಬೇಕಾಗಿಲ್ಲ. ಅವರು ಯಾವ ದೇಶದವರೇ ಆಗಲಿ ಅವರ ಅಭಿಪ್ರಾಯಗಳು ಸರಿಯಾಗಿದ್ದುವಾದರೆ, ದೇಶದಲ್ಲಿ ರಕ್ತಪಾತವಾಗುವುದಕ್ಕೆ ಅವಕಾಶ ಕೊಡದಂಥವುಗಳಾಗಿದ್ದರೆ, ಅಂಥ ಯಾವ ಅಭಿಪ್ರಾಯಗಳಾದರೂ ಒಳ್ಳೆಯವೆಂದೇ ನಾವು ಅವನ್ನು ಪರಿಗಣಿಸಬೇಕು. ಆಗಲೇ ದೇಶ ಮುಂದಕ್ಕೆ ಬರುವುದು. ಹಾಗೆ ಮಾಡದಿದ್ದರೆ ಖಂಡಿತ ನಮ್ಮ ದೇಶ ಮುಂದಕ್ಕೆ ಬರುವುದಿಲ್ಲ.

ಇನ್ನು ನಾನು ಡಿಪ್ರೆಸ್ಡ್ ಕ್ಲಾಸಿನವರ ವಿಚಾರವಾಗಿ ಎರಡು ಮಾತುಗಳನ್ನಾಡಬೇಕಾಗಿದೆ. ಈ ನೂತನ ರಾಜ್ಯಾಂಗ ವಿಧಿ ಜಾರಿಗೆ ಬಂದಮೇಲೆ ಎಲ್ಲವೂ ಪುಸ್ತಕದೊಳಗಿನ ಬದನೆಕಾಯಿಯಂತೆ ಆಗಿದೆ.

So far as the amelioration of the depressed classes is concerned, I am not happy over the persons in power.

ಉದಾಹರಣೆಗೆ ಹೇಳುವುದಾದರೆ, ಸರ್ಕಾರದವರು ಪಾಲಿಸಿ ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ಮಾಡಿದ ಶಿಫಾರ್ಸುಗಳನ್ನು ಮೂಲೆಗೊತ್ತಿದ್ದರು. ಹೀಗೆ ಮಾಡಿದರೆ ನಾವು ನಿಜವಾಗಿಯೂ ದೇಶಕ್ಕೆ ಸೇವೆಯನ್ನು ಮಾಡಿದಂತೆ ಆಗುತ್ತದೆಯೇ ಎಂದು ನನಗನ್ನಿಸುತ್ತಿದೆ. ಅದರ ಮೇಲೆ ಸರ್ಕಾರಕ್ಕೆ ಮನಸ್ಸಿದ್ದಿದ್ದರೆ ಅವರು ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಅವರಿಗೆ ಬಹುಶಃ ಅದರ ಮೇಲೆ ಮನಸ್ಸಿದ್ದಂತೆ ಕಾಣುವುದಿಲ್ಲ. ಅದಕ್ಕಾಗಿಯೇ ಅವರು ಏನು ಕಾರ್ಯಕ್ರಮಗಳನ್ನೂ ಅದರ ಬಗ್ಗೆ ಕೈಕೊಂಡಿಲ್ಲ. ಎಂದು ಈ ಸಮಿತಿಯಲ್ಲಿಲ್ಲದ ಸದಸ್ಯರು ಹೇಳುತ್ತಿದ್ದಾರೆ. ಹಾಗೆ ನಾವು ನಮ್ಮ ಕರ್ತವ್ಯಗಳನ್ನು ಸರಿಯಾಗಿ ಪಾಲಿಸದಿದ್ದರೆ ನಾವು ದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ಮೊನ್ನೆ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದ ಸಂಬಂಧವಾಗಿ ನಮ್ಮ ಪಾರ್ಟಿಯ ನಾಯಕರು ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಸೂಚನೆಗಳ ಬಗ್ಗೆ ಕೆಲವು ಅಂಶಗಳನ್ನು ನಾನು ಈ ಸಭೆಯ ಮುಂದಿಡಬೇಕೆಂದು ಇಚ್ಛಿಸುತ್ತೇನೆ.

ಮಹಾಚುನಾವಣೆಗಳು ಕಳೆದು ಒಂದು ವರ್ಷದ ಮೇಲಾಗುತ್ತ ಬಂದಿತು. ಕಾಂಗ್ರೆಸ್ ಪಕ್ಷ ಆಡಳಿತದ ಜವಾಬ್ದಾರಿಯನ್ನು ವಹಿಸಿ ಇಲ್ಲಿಗಾಗಲೇ ಎರಡು ಅಧಿವೇಶನಗಳು ಕಳೆದು ನಾವಿಂದು ಮೂರನೆಯ ಅಧಿವೇಶನದಲ್ಲಿದ್ದೇವೆ. ಇಲ್ಲಿಯವರೆಗೆ ಈ ಸರ್ಕಾರ ಖರ್ಚು ಮಾಡಿರತಕ್ಕದ್ದು ಸುಮಾರು 23½ ಕೋಟಿ ರೂಪಾಯಿಗಳಾಗುತ್ತವೆಂದು ಒಂದು ವಿಹಂಗಮ ನೋಟದಿಂದ ಗೊತ್ತಾಗುತ್ತಿದೆ. ಈ ಹಿಂದೆ ಕಾಂಗ್ರೆಸ್ ಪಕ್ಷ ಆಡಳಿತವನ್ನು ವಹಿಸುವಾಗ ದೇಶದ ಜನಗಳಿಗೆ ಏನೇನು ಭರವಸೆಗಳನ್ನು ಕೊಟ್ಟಿದ್ದರೋ ಅವುಗಳೊಂದನ್ನೂ ಇಲ್ಲಿಯವರೆಗೂ ಕಾರ್ಯರೂಪಕ್ಕೆ ತಾರದೆ, ಇದು ತುಂಬ ಅಸಮರ್ಥತೆಯಿಂದ ಕೂಡಿರತಕ್ಕದ್ದು ಎಂಬುದು ಪ್ರತಿಯೊಬ್ಬರಿಗೂ ಸಂಪೂರ್ಣವಾಗಿ ಎದ್ದು ಕಾಣುತ್ತಿದೆ. ನಾವು ಸರ್ಕಾರದವರಿಂದ ದೇಶದ ಏಳಿಗೆಗಾಗಿ ಮತ್ತು ಜನತೆಯ ಉದ್ಧಾರಕ್ಕಾಗಿ ಈ ಸಭೆಯ ಮುಂದೆ ಅನೇಕ ರೀತಿಯ ಚರ್ಚೆ, ನಿರ್ಣಯ ಮತ್ತು ಖೋತಾ ಸೂಚನೆ ಇತ್ಯಾದಿಗಳ ಮೂಲಕವಾಗಿ ಅವರನ್ನು ಒತ್ತಾಯಪಡಿಸಿ ಏನೇನು ಭರವಸೆಗಳನ್ನು ಪಡೆದುಕೊಂಡಿದ್ದೆವೋ ಅಂಥವುಗಳೆಲ್ಲ ಎಷ್ಟರಮಟ್ಟಿಗೆ ಈಡೇರಿಸಲ್ಪಟ್ಟಿರುತ್ತವೆಂದು ಒಂದು ವಿಹಂಗಮದೃಷ್ಟಿಯಿಂದ ನೋಡಿದರೆ ಎಲ್ಲವೂ "ಗೋರ್ಕಲ್ಲಮೇಲೆ ಮಳೆ ಸುರಿದಂತೆ" ಆಗಿದೆ.

ಇನ್ನು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಬಗ್ಗೆ ಕೆಲವು ಮುಖ್ಯ ಅಂಶಗಳನ್ನು ಮಾನ್ಯ ಸದಸ್ಯರನೇಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಅವರು ಪ್ರಸ್ತಾಪ ಮಾಡಿರುವ ಅಂಶಗಳನ್ನು ಬಿಟ್ಟು ಇನ್ನುಳಿದ ಮುಖ್ಯಾಂಶಗಳ ಪೈಕಿ ಒಂದೆರಡನ್ನು ನಾನು ಈ ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ.

ಇವರು ಮೊಟ್ಟಮೊದಲನೆಯದಾಗಿ ಕೈಕೊಂಡಿರತಕ್ಕ ಸಂಸ್ಕೃತಿ ಪ್ರಸಾರ—ಇದೊಂದು ವಿರೋಧಾಭಾಸವಾಗಿದೆ. ಸರ್ಕಾರ ಒಂದು ಕಡೆ ಸಂಸ್ಕೃತಿಯ ಪತನಕ್ಕೆ ಯೋಜನೆಯನ್ನು ಹಾಕಿ ಮತ್ತೊಂದು ಕಡೆ ಪ್ರಸಾರಕ್ಕೆ ಯೋಜನೆಯನ್ನು ಹಾಕಿದೆ. ಈ ಸರ್ಕಾರ ಸಂಸ್ಕೃತಿಯ ಪತನಕ್ಕೆ ಯಾವ ರೀತಿಯಲ್ಲಿ ಕೈಹಾಕಿದೆಯೆಂಬುದನ್ನು ವಿಮರ್ಶೆ ಮಾಡುವುದಾದರೆ ಯುದ್ಧಕಾಲದಲ್ಲಿ ಅನಿವಾರ್ಯವಾಗಿ ಬಂದಂಥ ಆಹಾರ ನಿಯಂತ್ರಣ ಯೋಜನೆಯನ್ನು ಯುದ್ಧ ಪೂರೈಸಿಹೋದ ಮೇಲೂ ಅದನ್ನು ಇನ್ನೂ ತೆಗೆದುಹಾಕದೆ ಹಾಗೆಯೇ ಅನವಶ್ಯಕವಾಗಿ ಮುಂದುವರಿಸಿಕೊಂಡು ಬರುತ್ತಾ ಕಾನೂನು ಬಲದಿಂದ ಸತ್ಯವಂತ ಜನರಿಂದ ಸುಳ್ಳನ್ನು ಹೇಳಿಸಿ, ಹೊಟ್ಟೆಯ ಪಾಡಿಗಾಗಿ, ಅವರು ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ, ಸುಳ್ಳು ಹೇಳುವುದಕ್ಕೂ, ಧಾನ್ಯವನ್ನು ಕದ್ದು ಸಾಗಿಸುವುದಕ್ಕೂ ಅನುಕೂಲವಾದಂಥ ಯೋಜನೆಯನ್ನು ಒಂದು ಕಡೆ ಹಾಕಿದ್ದಾರೆ. ಮತ್ತೊಂದು ಕಡೆ ಸಂಸ್ಕೃತಿ ಪ್ರಸಾರದ ಯೋಜನೆಯನ್ನು ಹಾಕಿ, ಅದರ ಬಗ್ಗೆ ಲಕ್ಷಾಂತರ ರೂಪಾಯಿಗಳನ್ನು ಕಬಳಿಸುವುದಕ್ಕೆ ಅವಕಾಶ ಮಾಡಿರುವುದರ ಅರ್ಥ ನನಗೆ ಆಗುತ್ತಿಲ್ಲ. ಈ ಯೋಜನೆಯಲ್ಲಿ ಹೆಚ್ಚಾಗಿ ಒಳಹೊಕ್ಕು ನೋಡಿದರೆ 'ಒಂದು ಕುಟುಂಬದ ಯಜಮಾನ ಒಳ್ಳೆಯವನಾಗಿದ್ದರೆ ಆ ಕುಟುಂಬಕ್ಕೆ ಒಳ್ಳೆಯ ಹೆಸರು ಬರುತ್ತದೆ, ಅತನು ಕೆಟ್ಟವನಾದರೆ ಆ ಇಡೀ ಕುಟುಂಬಕ್ಕೆ ಕೆಟ್ಟ ಹೆಸರು ಬರುತ್ತದೆ' ಎಂಬುದು ಈಗಿರತಕ್ಕ ಸರ್ಕಾರದ ಆಡಳಿತದಲ್ಲಿ ಪ್ರತ್ಯಕ್ಷವಾಗಿ ಎದ್ದು ಕಾಣುತ್ತದೆ. ಹೀಗೆ ಒಂದು ಕಡೆ ಸಂಸ್ಕೃತಿ ಪ್ರಸಾರಕ್ಕೆದಾರಿ ಹಾಕಿ ಮತ್ತೊಂದು ಕಡೆ ಆಡಳಿತದಲ್ಲಿ ಅನೀತಿಗಳು ಎದ್ದು ಕಾಣುತ್ತಿರುವುದು—ಇದು ಒಂದು ವಿರೋಧಾಭಾಸವಾಗಿ ಕಾಣುತ್ತಿದೆ. ಗಾಂಧೀಜಿಯವರು ಸಾಯುವುದಕ್ಕೆ ಮುನ್ನ ಅಹಿಂಸೆ, ಸತ್ಯ, ಧರ್ಮ, ಶಾಂತಿಇತ್ಯಾದಿ ಉದಾತ್ತ ತತ್ವಗಳ ಅಡಿಪಾಯದ ಮೇಲೆ ಕಟ್ಟಿದ್ದ ದೇವಾಲಯವು ಮತ್ತು ಅಂಥ ಭವ್ಯವಾದ ತತ್ವಗಳೂ ಅವರ ಜೊತೆಯಲ್ಲೇ ಅಂತ್ಯವಾಗಿ ಹೋದುವು. ಹಾಗೆ ಅವರಿಂದ ಕಟ್ಟಲ್ಪಟ್ಟಿದ್ದ ಆ ಒಂದು ಭವ್ಯ ಮಂದಿರವು ಇಂದು ಒಂದು ಮುರುಕುಮಂಟಪವಾಗಿ ಜೋಲಾಡುತ್ತಿದೆ. ಪುನಃ ಅದನ್ನು ಸರಿಪಡಿಸಲು ಎಂದೆಂದಿಗೂ ಸಾಧ್ಯವಾಗದಂತಿರುತ್ತದೆಯೆಂದು ನಮಗೆಲ್ಲರಿಗೂ ಕಾಣಿಸುತ್ತಿದೆ.

ಇನ್ನು ಪಾಂಚವಾರ್ಷಿಕ ಯೋಜನೆಯ ಬಗ್ಗೆ ಹಲವರು ಈಗಾಗಲೇ ಮಾತನಾಡಿರುತ್ತಾರೆ. ಆದರೆ ಈ ಐದು

ವರ್ಷಗಳ ಕಾಲ ಸೇವೆಮಾಡಬೇಕೆಂದು ಹೇಳಿ ತಂದಿರತಕ್ಕಂಥ ಶಿಶುವಿಗೆ ಗರ್ಭದಲ್ಲೇ ಎರಡು ವರ್ಷಗಳು ಈಗಾಗಲೇ ಕಳೆದುಹೋಗಿ ಮೂರು ವರ್ಷ ಆಯಸ್ಸು ಉಳಿದಿರುವ ವಿಲಕ್ಷಣ ಮಗುವಿದು, ಅಂಥ ಒಂದು ವಿಲಕ್ಷಣ ಮಗುವನ್ನು ಇವರು ನಮ್ಮ ಮುಂದೆ ತಂದಿದ್ದಾರೆ. ಇನ್ನು ಇಂಥ ವಿಲಕ್ಷಣವಾದ ಮಗುವು ನಮ್ಮನ್ನು ಇನ್ನೆಷ್ಟರಮಟ್ಟಿಗೆ ಉದ್ಧಾರ ಮಾಡುತ್ತದೆಯೋ ನೋಡಬೇಕು ಮತ್ತು ಅದನ್ನು ನಾವೀಗ ಆಲೋಚನೆ ಸಹ ಮಾಡಬೇಕಾಗಿದೆ. ಇದು ಇರತಕ್ಕ ಸ್ವರೂಪವನ್ನು ನೋಡುವುದಾದರೆ 'ಕೈಕಾಲು ಸಣ್ಣ ಹೊಟ್ಟೆದುಬ್ಬಣ್ಣ,' ಇಂಥ ವಿಲಕ್ಷಣದ ಮುದ್ದು ಕೂಸು ನಮ್ಮೆಲ್ಲರನ್ನೂ ಇನ್ನೆಷ್ಟರಮಟ್ಟಿಗೆ ಸಾಕಿ ಉದ್ಧಾರ ಮಾಡುತ್ತದೆಯೋ ಅದನ್ನು ಕಾದುನೋಡಬೇಕಾಗಿದೆ !

ಇನ್ನು ಆಹಾರದ ಸಾಗಾಣಿಕೆಯ ನೀತಿಯ ವಿಚಾರವಾಗಿ ಒಂದು ಮಾತನ್ನು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಸಂಸ್ಥಾನದಲ್ಲಿ ಶಾಸನಬದ್ಧವಾದ ಪಡಿತರ ಪದ್ಧತಿ ಆಚರಣೆಯಲ್ಲಿರುವ ಪ್ರದೇಶಗಳನ್ನು ಬಿಟ್ಟು, ಉಳಿದ ಪ್ರದೇಶಗಳಲ್ಲೆಲ್ಲಾ ಆಹಾರಧಾನ್ಯಗಳು ಸ್ಥಳದಿಂದ ಸ್ಥಳಕ್ಕೆ ಸಾಗುವ ವಿಷಯದಲ್ಲಿದ್ದ ನಿರ್ಬಂಧಗಳನ್ನು ಈಗ ತೆಗೆದುಹಾಕಲಾಗಿದೆಯೆಂದು ಅಪ್ಪಣೆ ಕೊಡಿಸಿದ್ದಾರೆ. ಇದನ್ನು ಸಂಪೂರ್ಣವಾಗಿ ಸಂಸ್ಥಾನಾದ್ಯಂತವೂ ತೆಗೆದುಹಾಕುವುದಕ್ಕೆ ಕೈಹಾಕದೆ ಇನ್ನೂ ಇವನ್ನು ಮುಂದುವರಿಸಿಕೊಂಡೇ ಬರುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ತೆಗೆದುಹಾಕಿದ್ದರೆ, ಮಂಡ್ಯಾ ಜಿಲ್ಲೆಯಲ್ಲಿ ಇದು ಹಾಗೆಯೇ ಜಾರಿಯಲ್ಲಿರುತ್ತದೆ. ಹೀಗೆ ಇದು ಒಂದು ಕಡೆ ಇದ್ದು ಮತ್ತೊಂದು ಕಡೆ ಇಲ್ಲದಿರುವುದರಿಂದ ತಿಳುವಳಿಕೆಯಿಲ್ಲದ ಬಡರೈತರು ದವಸಧಾನ್ಯಗಳನ್ನು ಸಾಗಾಣಿಕೆ ಮಾಡುವಾಗ ಅವರು ಧಾನ್ಯವನ್ನೂ ಕಳೆದುಕೊಳ್ಳುವುದಲ್ಲದೆ ಅದರ ಜೊತೆಗೆ ಅವರು ತುರಂಗ ವಾಸವನ್ನೂ ಸಹ ಅನುಭವಿಸಬೇಕಾದಂಥ ಅವಕಾಶ ಇದರಿಂದ ಒದಗಬಹುದು. ಹೀಗೆ ಜನರನ್ನು ತಪ್ಪುದಾರಿಗೆ ಎಳೆಯುವಂಥ ಕಾನೂನುಗಳನ್ನು ಇಟ್ಟಿರತಕ್ಕದ್ದು ಬಹಳ ವಿಷಾದಕರವಾಗಿದೆ.

ಇನ್ನು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯಗಾರರಿಗೆ ಸಾಲಗಳನ್ನು ಕೊಡತಕ್ಕ ವಿಚಾರವಾಗಿ ಕಲವು ಅಂಶಗಳನ್ನು ಪ್ರಸ್ತಾಪಮಾಡಿದ್ದಾರೆ. ಇಂದು ಏಪೆಕ್ಸ್ ಬ್ಯಾಂಕಿನ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿರತಕ್ಕ ಅನೇಕ ಸೊಸೈಟಿಗಳ ಆಡಳಿತವು ಯಾವ ರೀತಿಯಲ್ಲಿರುತ್ತದೆಂಬ ಅಂಶ ಸರ್ವರಿಗೂ ವೇದ್ಯವಾಗಿರುತ್ತದೆ. ರೈತ ಸಾಲಕ್ಕಾಗಿ ಒಂದು ಅರ್ಜಿ ಹಾಕಿದರೆ ಅದು ಸಕಾಲದಲ್ಲಿ ಆತನಿಗೆ ಸಾಲ ದೊರೆಕಿಸುವಂತಿಲ್ಲ. ಅಂಥ ನೂರಾರು ಅರ್ಜಿಗಳಿಗೆ ಯಾವ ಪುರಸ್ಕಾರವೂ ದೊರೆಯದಿರುವಂಥ ಅಂಶ ಅನೇಕರಿಗೆ ತಿಳಿದಿದೆ. ಆದಕಾರಣ ಇದರಲ್ಲಿರತಕ್ಕ ನ್ಯೂನತೆಗಳನ್ನೆಲ್ಲಾ ಬೇಗ ಹೋಗಲಾಡಿಸಿ ರೈತನಾದವನಿಗೆ ಬೇಗ ಸಾಲ ದೊರೆಯುವಂಥ ಸದವಕಾಶವನ್ನುಂಟುಮಾಡಬೇಕೆಂದು ಒಂದು ಸಲಹೆಯನ್ನು ತಮಗೆ ಈಗ ನಾನು ಕೊಡಲಿಚ್ಛಿಸುತ್ತೇನೆ.

ಇನ್ನು ನಿಮ್ನ ತರಗತಿಗಳವರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಟ್ಟಿರತಕ್ಕ ವಿಚಾರದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಇಲ್ಲಿ ಸೂಚಿಸಿರುವುದೆಲ್ಲಾ ಕೇವಲ ಸರ್ಕಾರಿ ಪುಸ್ತಕದಲ್ಲಿರುವಂಥ ಅಂಕಿಗಳು ಮಾತ್ರವೇ ಹೊರತು, ಲೆಕ್ಕಕ್ಕೆ ತೆಗೆದುಕೊಂಡು ನೋಡುವುದಾದರೆ ನೂರಾರು ಮನೆಗಳ ಗುರ್ತು ಸಹ ಅಲ್ಲಿ ಸಿಕ್ಕುವಂತೆ ಕಾಣುವುದಿಲ್ಲ.

ಇನ್ನು ಕೈಗಾರಿಕಾ ನೀತಿಯ ವಿಚಾರವಾಗಿ ಎರಡು ಮಾತುಗಳನ್ನಾಡಬೇಕಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಮನೆಗಳ ಗುರುತೇ ಕಾಣುತ್ತಿಲ್ಲವೆಂದು ಹೇಳುತ್ತೀರಲ್ಲ !

ಶ್ರೀ ಬಿ. ಪಿ. ನಾಗರಾಜಮೂರ್ತಿ —ಹೌದು. ಹಣವೇನೋ ಖರ್ಚಾಗಿದೆ. ಆದರೆ ಅಲ್ಲಿ ಮನೆಗಳು ಮಾತ್ರ ಕಾಣಿಸುತ್ತಿಲ್ಲ. ಅಷ್ಟೆ ಆಗಿರತಕ್ಕದ್ದು.

ಗ್ರಾಮಾಂತರ ಕೈಗಾರಿಕೆಗಳನ್ನೂ, ಗೃಹಕೈಗಾರಿಕೆಗಳನ್ನೂ ಅಭಿವೃದ್ಧಿಪಡಿಸುವ ವಿಚಾರದಲ್ಲಿ ಈ ಸರ್ಕಾರ ತಮ್ಮ ಪಾರ್ಟಿಗೆ ಸೇರಿರತಕ್ಕ ಜನಗಳಿಗೆ ವಿಶೇಷವಾಗಿ ಸಹಾಯನೀಡತಕ್ಕಂಥ ಒಂದು ನೀತಿ ಇದರಲ್ಲಿ ಎದ್ದು ಕಾಣುತ್ತದೆ. ಹಾಗೆ ಸಾಲ ಪಡೆದುಕೊಂಡಿದ್ದವರ ಸಂಬಂಧದಲ್ಲಿ ಅವರಿಂದ ಇಲ್ಲಿಯವರೆಗೂ ಒಂದು ಕಾಸು ಅಸಲಾಗಲಿ ಅಥವಾ ಆ ಬಗ್ಗೆ ಬರಬೇಕಾಗಿದ್ದ ಬಡ್ಡಿಯಾಗಲಿ ಒಂದೂ ಬಂದಿರುವುದಿಲ್ಲ. ಎಲ್ಲವನ್ನೂ ಹಾಗೆ ಹಿಂದಕ್ಕೆ ತಳ್ಳಿಹಾಕುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಹಾಗೆ ಯಾವುದನ್ನೂ ಕೊಡದೆ ಡಿಫಾಲ್ಟರಾಗಿದ್ದಂಥವರ ಬಗ್ಗೆ ಕಾರ್ಯಕ್ರಮವನ್ನು ಕೈಕೊಂಡು ಅವರ ಆಸ್ತಿಪಾಸ್ತಿಗಳನ್ನು ಹರಾಜು ಮಾಡುವುದಾಗಿ 8-9 ಸಾರಿ ಬಹಿರಂಗ ಪ್ರಕಟಣೆಗಳನ್ನು ಹೊರಡಿಸಿದ್ದಾಗ್ಯೂ ಅಂಥವರ ಮೇಲೆ ಮುಂದಕ್ಕೆ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದೆ, ಕೇವಲ ಅವರು ಕಾಂಗ್ರೆಸ್ ಪಕ್ಷದಲ್ಲಿ ಮುಖಂಡರಾಗಿರುತ್ತಾರೆಂಬ ನೆಪದ ಮೇಲೆ ಅಂಥದನ್ನೆಲ್ಲಾ ಹಿಂದಕ್ಕೆ ತಳ್ಳಿಹಾಕಿದ್ದಾರೆ. ಇಂಥದನ್ನು ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ. ಹೀಗೆ ಬಡರೈತರಿಂದ ವಸೂಲಾದ ಹಣದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲಾಡುವುದು ಸರ್ವಥಾ ನ್ಯಾಯವಾದುದಲ್ಲ. ಇದರಿಂದ ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿಗೆ ಬರುವ ಬದಲು ಬಹುಬೇಗ ಕ್ಷೀಣವಾಗಿ ಹೋಗುತ್ತವೆ. ಇವನ್ನೆಲ್ಲಾ ತಾವು ಕೂಡಲೇ ತಪ್ಪಿಸಲು ಕಾರ್ಯವನ್ನು ಕೈಕೊಳ್ಳಬೇಕು.

ಇನ್ನು ಕಡೆಯದಾಗಿ ನಮ್ಮ ಪಕ್ಷದ ನಾಯಕರು ಸಭೆಯ ಮುಂದೆ ಮಂಡಿಸಿರುವ ತಿದ್ದುಪಡಿ ಸೂಚನೆಗೂ ಮತ್ತು ಇತರ ಮಾನ್ಯ ಸದಸ್ಯರು ಸೂಚಿಸಿರತಕ್ಕ ಎಲ್ಲಾ ತಿದ್ದುಪಡಿ ಸೂಚನೆಗಳಿಗೂ ನನ್ನ ಸಂಪೂರ್ಣ ಬೆಂಬಲವನ್ನು ನೀಡಿ ಆಡಳಿತ ವರ್ಗದವರು ಈ ಸೂಚನೆಗಳೆಲ್ಲವನ್ನೂ ಅಂಗೀಕಾರ ಮಾಡಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

4-30 P.M.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮೊದಲನೆಯದಾಗಿ, ಶ್ರೀಮಾನ್ ಸಿದ್ದಲಿಂಗಯ್ಯನವರು ತಮ್ಮ ವಂದನಾರ್ಪಣಾ ನಿರ್ಣಯವನ್ನು ಮಂಡಿಸುವಾಗ ಒಂದೆರಡು ಗಮನಾರ್ಹವಾದ ಪದಗಳನ್ನು ಉಪಯೋಗಿಸಿದರು. ಏನೆಂದರೆ, ಮಹಾರಾಜರ ಭಾಷಣದ ವಿಚಾರದಲ್ಲಿ ಸ್ವಲ್ಪ ಪೂಜ್ಯಭಾವದಿಂದ, ರಾಜಭಕ್ತಿಯುತವಾಗಿ ನಾವುಗಳು ನಡೆದುಕೊಳ್ಳಬೇಕು ಎಂದು ತಿಳಿಸಿದರು. ನಿಜವಾಗಿಯೂ ಇದು ಸ್ವಲ್ಪಮಟ್ಟಿಗೆ ನಮ್ಮಗಳನ್ನು ಮೋಸಹೋಗಿಸುವ ವಿಷಯವಾಗಿದೆ. ಏಕೆಂದರೆ, ಸಾಂಪ್ರದಾಯಿಕವಾಗಿ ನಡೆಯತಕ್ಕಂಥ ಈ ಒಂದು ಭಾಷಣವನ್ನು ಮಹಾರಾಜರವರು ಮಾಡಿದಾಗ್ಯೂ ಕೂಡ ಮುಖ್ಯಮಂತ್ರಿಗಳೇ ಬರೆದುಕೊಟ್ಟ ಭಾಷಣ ಅದು. ಹಿಂದಿನ ಸಾಲಿನಲ್ಲಿ ನಡೆದ ವಿಷಯ

(ಶ್ರೀ ಬಿ. ಹುಚ್ಚೇಗೌಡ.)

ಗಳ ರೀತಿ ನೀತಿ ಮತ್ತು ಮುಂದಿನ ವರ್ಷದಲ್ಲಿ ಯಾವ ಯಾವ ಮುಖ್ಯ ವಿಚಾರಗಳಲ್ಲಿ ಯಾವ ರೀತಿ ನಡೆಯಬೇಕೆಂಬ ಒಂದು ತತ್ವ, ಇವುಗಳನ್ನು ನಿರ್ಧರಿಸತಕ್ಕ ಒಂದು ಭಾಷಣ ಇದು. ಇದರಲ್ಲಿ ಮಹಾರಾಜರ ಯಾವ ವ್ಯಕ್ತಿತ್ವದ ವಿಷಯಕ್ಕೂ ಅವಕಾಶವಿಲ್ಲ. ಇಂಥ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳದೆ ವಿಧಿಯಿಲ್ಲ. ರಾಜಪ್ರಮುಖರು ಈ ಭಾಷಣದಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳದೆ ತಮ್ಮ ಕರ್ತವ್ಯ ಲೋಪ ಮಾಡಿದ್ದಾರೆ. ಏಕೆಂದರೆ ರಾಜ್ಯಾಂಗದಲ್ಲಿ 323 (2) ನೆಯ ವಿಧಿಯಲ್ಲಿ

"......... The Governor or Rajpramukh, as the case may be, shall on receipt of such report, cause a copy thereof together with a memorandum explaining, as respects the case, if any, where the advice of the Commission was not accepted, the reasons for such non-acceptance to be laid before the Legislature of the State."

ಎಂದು ಹೇಳಿದ್ದಾರೆ. ಆದಾಗ್ಯೂ ಸಹ ಈ ವರೆಗೂ ಈ ಸೆಕ್ಷನ್ನಿನ ಪ್ರಕಾರ ಈ ಸಭೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವರದಿ ಈ ವರೆಗೂ ಬಂದಿಲ್ಲ. ಈ ವಿಷಯವಾಗಿ ಬೇರೊಂದು ಸಂದರ್ಭದಲ್ಲಿಯೂ ಸಂಕ್ಷೇಪವಾಗಿ ಸೂಚನೆ ಕೊಟ್ಟೆವು. ಇಷ್ಟಾದರೂ ತಾವು ಗಣನೆಗೆ ತೆಗೆದುಕೊಳ್ಳದಿರುವುದು ಮತ್ತು ಅದರ ವಿಷಯವಾಗಿ ಈ ಭಾಷಣದಲ್ಲಿ ಏನೊಂದೂ ಪ್ರಸ್ತಾಪಮಾಡದಿರುವುದು ಒಂದು ಕರ್ತವ್ಯಲೋಪವೆಂದೇ ಹೇಳಬೇಕಾಗಿದೆ.

ಆಮೇಲೆ, ಇಲ್ಲಿ ಪ್ರಾರಂಭದಲ್ಲಿ ಶ್ರೀಮನ್ಮಹಾರಾಜರವರು ಒಂದು ಮಾತು ಹೇಳಿದ್ದಾರೆ. "ನಮ್ಮ ಸರ್ಕಾರದವರು ಬಹಳ ಕ್ಲೇಶದಾಯಕವಾದ ಸನ್ನಿವೇಶಗಳಲ್ಲಿ ಅಧಿಕಾರವನ್ನು ಸ್ವೀಕರಿಸಿದರಷ್ಟೆ. ಆಗ ಪ್ರಾರಂಭದಲ್ಲಿಯೇ ಅವರು, ಸಂಸ್ಥಾನದಲ್ಲಿ ಹುಟ್ಟುವಳಿಯು ವೆಚ್ಚಕ್ಕೆ ಸಾಲದೆ ಭಾರಿ ಕೊರತೆಯುಂಟಾಗಿದ್ದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು" ಎಂದು ಹೇಳಿದ್ದಾರೆ. ಹೀಗೆ ಹೇಳಿರುವುದರಲ್ಲಿ ಏನೋ ಒಂದು ವಿಶೇಷಾರ್ಥವಿರಬೇಕೆಂದು ನಾನು ಭಾವಿಸುತ್ತೇನೆ. ಏಕೆಂದರೆ, ನಮ್ಮ ಸರ್ಕಾರದವರು ಇಷ್ಟು ಕ್ಲೇಶದಾಯಕವಾದ ಪರಿಸ್ಥಿತಿಗೆ ಬರಬೇಕಾದ ಕಾರಣವೇನಿತ್ತೋ ಗೊತ್ತಿಲ್ಲ. 'ಆಡಳಿತವನ್ನು ವಹಿಸಿ, ಹಿಂದಿನವರ ಮೇಲೆ ದೂರು ಹಾಕಿ' ಎಂದು ಯಾರೋ ಹೇಳಿದರೆಂದು ಕಾಣುತ್ತದೆ. ಇದು ಹಿಂದಿನ legacy ಯೇ? ಹಿಂದೆ ಬೇಕಾದಷ್ಟು ದುಡ್ಡಿತ್ತು, ಅದನ್ನು ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ಖರ್ಚು ಮಾಡಿ ಈಗ ಅವರು ಬರೀ ಖಜಾನೆಯನ್ನು ಕೊಟ್ಟರು, ಅದರಿಂದ ಕಷ್ಟ ಬಂತು ಎಂದು ಅಭಿಪ್ರಾಯವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿಯ ಅರ್ಥ ಬರುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅದೇ ಅರ್ಥ. ಆಮೇಲೆ ಶ್ರೀಮಾನ್ ರಾಮಯ್ಯನವರು ಹೇಳಿದರು: ರಾಜಕೀಯ ಸ್ವರಾಜ್ಯವೇನೋ ಬಂತು, ಆದರೆ ಬೇರೆ ಆರ್ಥಿಕ, ಸಾಮಾಜಿಕ ಸ್ವರಾಜ್ಯಗಳು ಬಂದಿಲ್ಲ. ಆದ್ದರಿಂದ ನಾವುಗಳು ಇನ್ನೂ ಸ್ವಲ್ಪ ಕಾಲ ನಿಧಾನವಾಗಿ ಹೋಗಬೇಕು ಎಂದು ಕಾಂಗ್ರೆಸ್ಸಿನವರೇನೋ ಹೊಡೆದಾಡಿ ಸ್ವರಾಜ್ಯ ತಂದಿರಬಹುದು, ಒಪ್ಪಿಕೊಳ್ಳೋಣ. ಅಂದ ಮಾತ್ರಕ್ಕೆ ಅದಕ್ಕೇನಾದರೂ Prize ಕೊಡಬೇಕೇನು? ಹಾಗೆಂದು ಹೇಳಿ ಅವರುಗಳು ಸರ್ಕಾರದ ದುಡ್ಡನ್ನು ತಮ್ಮ ಸ್ವೇಚ್ಛೆಯಂತೆ ವಿನಿಯೋಗಿಸಬಹುದು ಎಂದು ಅರ್ಥ ಮಾಡಿದರೆ ನಾನೇನೂ ಹೇಳಬೇಕಾಗಿಲ್ಲ. ದೇಶದ ಸಮಸ್ತ ಪ್ರಜೆಗಳಿಂದ ಕಷ್ಟಾರ್ಜಿತವಾದ ಹಣವನ್ನು ಸರಿಯಾಗಿ ವಿನಿಯೋಗಿಸಬೇಕೆಂಬುದು ನಮ್ಮ ವಾದ. ಹಾಗಿರುವಲ್ಲಿ, ಸಮ್ಮನೆ ಎಂಥೆಂಥದೋ ಸ್ಕೀಮುಗಳನ್ನು ಹಾಕಿ, 'ಕಾದು ನೋಡಿ, ಕಾದು ನೋಡಿ' ಎಂದರೆ ಏನು ಹೇಳೋಣ? ನೀವು ಹಾಕಿರುವ ಸ್ಕೀಮುಗಳನ್ನಾದರೂ ನೋಡಿ. ನಾನು ಎಲ್ಲವನ್ನೂ ಹೇಳಲಿಕ್ಕೆ ಸಮಯವಿಲ್ಲದಿದ್ದರೂ ಸಂಕ್ಷೇಪವಾಗಿ ಹೇಳುತ್ತೇನೆ. ತಮ್ಮ ಉದ್ದೇಶ ಏನೇನೋ ಇರಬಹುದು. ಆದರೆ ವಾಸ್ತವವಾಗಿ ಏನಾಗಿದೆ? ಗ್ರೋ-ಮೋರ್-ಫುಡ್ ಎಂದು ಹೇಳಿದ್ದೀರಿ; ರೂರಲ್ ಡೆವಲಪ್‌ಮೆಂಟ್ ಎಂದು ಬೇರೆ ಸ್ಕೀಮ್ ಹಾಕಿದರು; ಕಮ್ಯೂನಿಟಿ ಪ್ರಾಜೆಕ್ಟ್ಸ್ ಎಂದು ಬೇರೆ ಬಂತು. ಯಾವುದಕ್ಕೂ ಹೇಳುವವರೂ, ಕೇಳುವವರೂ ಯಾರೂ ಇಲ್ಲ. ಕಮ್ಯೂನಿಟಿ ಸೆಟ್ಟುಗಳನ್ನು ಯಾರೋ ತರಿಸಿ ಎಂದು ಹೇಳಿಬಿಟ್ಟರು, ಇವರೂ ಏನೂ ಯೋಚನೆ ಮಾಡದೆ ತರಿಸಿಬಿಟ್ಟರು. ಈ ಸೆಟ್ಟುಗಳಿಂದ ಪ್ರಜೆಗಳಿಗೇನಾದರೂ ಉಪಯೋಗವುಂಟಾಗಿದೆಯೇ? ಅವರಿಗಿದನ್ನು ಉಪಯೋಗಿಸುವುದಕ್ಕಾದರೂ ಬರುತ್ತದೆಯೇ? ಇಂಥದಕ್ಕೆಲ್ಲಾ ದುಡ್ಡು ಎಷ್ಟರಮಟ್ಟಿಗೆ ವಿನಿಯೋಗವಾಗಿದೆಯೆಂದು ಇವೊತ್ತಿನವರೆಗೂ ಯಾರೂ ನೋಡಿಲ್ಲ. ಹೀಗೆಲ್ಲ ಖರ್ಚು ಮಾಡಿ ಈಗ ನಿಜವಾಗಿಯೂ ಸರ್ಕಾರ ಕಷ್ಟದಲ್ಲಿ ಸಿಕ್ಕಿರಬಹುದು. ಅದಕ್ಕಾಗಿ ಮಹಾರಾಜರವರು ಭಾಷಣದಲ್ಲಿ ಈ ರೀತಿಯ ಅಭಿಪ್ರಾಯವನ್ನು ಕೊಟ್ಟಿರಬಹುದೆಂದು ನಾನು ತಿಳಿಯುತ್ತೇನೆ.

ಈ ಕಷ್ಟಗಳ ಪರಿಹಾರಕ್ಕಾಗಿ, ಶ್ರೀಮನ್ಮಹಾರಾಜರು ಇನ್ನೊಂದು ಮಾತನ್ನು ಹೇಳಿದ್ದಾರೆ. "ಅವರಿಗೆ ಒದಗಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ನಿಮ್ಮಗಳ ವಿವೇಕಯುತವಾದ ಸಲಹೆಯೂ ಮತ್ತು ಹೃತ್ಪೂರ್ವಕವಾದ ಸಹಕಾರವೂ ಅವರಿಗೆ ದೊರೆತು ನಿಮ್ಮಗಳ ಸಂಪೂರ್ಣ ಬೆಂಬಲದಿಂದ ಅವರು ಯಶಸ್ವಿಯಾಗಿ ಆಡಳಿತವನ್ನು ನಡೆಯಿಸಿಕೊಂಡು ಬರುವುದಾಗಿ ನಿರೀಕ್ಷಿಸುತ್ತಾರೆ" ಎಂದು. ಖಂಡಿತ, ಸಹಕಾರ ಕೊಡಬೇಕು; ನಾವು ಸಹಕಾರ ಕೊಡುವುದರಲ್ಲಿ ಅಭ್ಯಂತರವಿಲ್ಲ. ಜನಗಳ ಕಷ್ಟ ನಿವಾರಣೆಗಾಗಿ ನೀವು ಯಾವ ಕಾರ್ಯಕ್ರಮ ಹಾಕಿದರೂ ನಾವು ಪೂರ್ಣ ಬೆಂಬಲ ಕೊಡುತ್ತೇವೆ. ನಮ್ಮ ಪಕ್ಷದ ಪರವಾಗಿ ಆ ಭರವಸೆಯನ್ನು ನೀಡಲು ಸಿದ್ಧರಾಗಿದ್ದೇವೆ. ಆದರೆ ತಾವು ಈ ರೀತಿ ಸ್ವೇಚ್ಛೆಯಾಗಿ ನಡೆಯುವ ವಿಚಾರದಲ್ಲಿ ನಮ್ಮಿಂದ ಖಂಡಿತ ಸಹಕಾರ ದೊರೆಯಲಾರದು.

ಇನ್ನೊಂದೇನೆಂದರೆ, ಗೀತಾ ಜಯಂತಿ ಎಂದು ತಾವು ಮೊದಲು ಮಾಡಿರುವುದು. ಇಂಥ ಪ್ರಚಾರ ಮಾಡುವುದಕ್ಕೆ ಹೊರಡುವ ಮುನ್ನ ಯಾರು ಸಂಸ್ಕೃತಿ ಪ್ರಸಾರಕ್ಕೆ ಹೋಗುತ್ತಾರೋ ಯಾರು ಸತ್ಯವಾಗಿ ನಡೆಯಬೇಕೆಂದು ಹೇಳುತ್ತಾರೋ ಅವರಿಗೆ ಮುಂಚೆ ಸರಿಯಾಗಿ ಪಾಠಹಾಕಿಕೊಡಬೇಕು; ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ಸರಿಯಾಗಿದ್ದಾರೆಯೇ ಎಂದು ತಾವು ಮೊದಲು ನೋಡಿಕೊಳ್ಳಿ. ಯಾರನ್ನು ಈ ಕೆಲಸಕ್ಕೆ ನೇಮಿಸಿಕೊಳ್ಳುತ್ತೀರೋ ಅವರು ಮುಂಚೆ ಯೋಗ್ಯರಾಗಿರಬೇಕು. ಯಾವಾಗಲೂ ನಾವು ಯಾವುದನ್ನು ಮಾಡುವುದಕ್ಕಾಗುವುದಿಲ್ಲವೋ ಅದನ್ನು ಇತರರಿಗೆ ಹೇಳುವುದಕ್ಕೆ ಹೋಗಕೂಡದು. ಅಲ್ಲದೆ ಒನಾಮ

ಬಾರದ ನಮ್ಮ ಹಳ್ಳಿಯ ಜನರಮುಂದೆ ಹೋಗಿ ಕಾಳಿದಾಸನ ಕವಿತೆ ಕೇಳಿ, ಕುಮಾರಸ್ವಾಮಿಯ ಕವನ ಕೇಳಿ ಎಂದರೆ ಅವರಿಗೆ ಏನು ಅರ್ಥವಾಗುತ್ತದೆ? ಓನಾಮ ಬಾರದಿರುವವರಿಗೆ ಕಾಳಿದಾಸನ ಕವಿತೆಯಿಂದೇನುಪ್ರಯೋಜನ ? ಶರೀರವನ್ನು ಎಷ್ಟುಮಟ್ಟಿಗೆ ಚೊಕ್ಕಟವಾಗಿಟ್ಟುಕೊಳ್ಳಬೇಕೋ ಅಷ್ಟೇಮಟ್ಟಿಗೆ ಮನಸ್ಸನ್ನೂ ಚೊಕ್ಕಟವಾಗಿಟ್ಟುಕೊಳ್ಳಬೇಕೆಂದು ನೀವುಗಳು ಹೇಳುವುದೇನೋ ದಿಟವೇ. ಆದರೆ ಶರೀರವನ್ನು ಚೊಕ್ಕಟಮಾಡುವುದಕ್ಕೆ ತಾವೇನುಕೊಟ್ಟಿದ್ದೀರಿ ಎಂಬುದನ್ನು ಮೊದಲು ಯೋಚನೆಮಾಡಬೇಕು. ಅವರುಗಳಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆಯಿಲ್ಲ, ಹೊಟ್ಟೆಗೆ ಅನ್ನವಿಲ್ಲ. ಆದ್ದರಿಂದ ಹೊಟ್ಟೆಬಟ್ಟೆಗೆ ಮೊದಲು ಏರ್ಪಾಡುಮಾಡಬೇಕಾದದ್ದು ನಿಮ್ಮ ಕರ್ತವ್ಯ. ಅದೇ ಇಲ್ಲದೆ ಇದನ್ನೆಲ್ಲಾ ಮಾಡುವುದಕ್ಕೆ ಹೊರಟಿರುವುದು ನಿಜವಾಗಿಯೂ ಶೋಚನೀಯ. ಸುಮ್ಮನೆ ರಾಮಾಯಣ, ಮಹಾಭಾರತ ಓದಬೇಕೆಂದು ಹೇಳುತ್ತೀರಿ. ಅದರಲ್ಲಿ ತಾನೆ ಏನಿದೆ! ಅವರುಗಳು ತ್ಯಾಗಮಯ ಜೀವನವನ್ನು ನಡೆಸುತ್ತಿದ್ದರು, ಹತ್ತಾರು ವರ್ಷಗಳು ಗಾಳಿಯನ್ನೇ ಸೇವನೆಮಾಡಿಕೊಂಡು ಜೀವಿಸುತ್ತಿದ್ದರು ಎಂದು ಹೇಳಿದೆ. ನಮ್ಮಲ್ಲೀಗ ಅದೆಲ್ಲ ಸಾಧ್ಯವೆ ? ಹೊಟ್ಟೆಗೆ ಕೊಡುವುದಕ್ಕೆ ಅನ್ನ ಇಲ್ಲವೆಂದು ಎಲ್ಲರನ್ನೂ ರಾಮನಂತೆ ಕಾಡಿಗೆ ಹೋಗಿ ಎಂದು ಹೇಳುತ್ತೀರಾ ? ರಾಮ ಹೆಂಡತಿ ಬಿಟ್ಟನೆಂದು ಹೇಳಿ ಎಲ್ಲರೂ ಹಾಗೆ ಮಾಡುತ್ತಾರೆಯೆ ? ಕೃಷ್ಣ 16,000 ಹೆಂಡಿರನ್ನು ಮದುವೆಯಾದನೆಂದು ಹೇಳಿ ಅದರಂತೆ ಎಲ್ಲರೂ ಮಾಡಬೇಕೆಂದೇ ?

Mr. SPEAKER.—What is all this, Sri Hutche Gowda? Let us be more serious.

ಶ್ರೀ ಡಿ. ದೇವರಾಜ ಅರಸ್.—ಈ ರೀತಿಯಾಗೆಲ್ಲಾ ಮಾತನಾಡದೆ, ನಮ್ಮ ಭಾರತ ರಾಮಾಯಣ ಮುಂತಾದುವುಗಳಿಗೆ ಗೌರವ ಕೊಡಲಿ ಎಂದೇ ಈಗ ಸಂಸ್ಕೃತಿ ಪ್ರಚಾರಮಾಡುತ್ತಿರುವುದು.

ಶ್ರೀ ಬಿ. ಹುಚ್ಚೇಗೌಡ.—ಹೊಟ್ಟೆಗೇ ಹಿಟ್ಟಿಲ್ಲದಿರುವಾಗ ಈ ಪ್ರಚಾರವೇಕೆ ಎಂದು ನಾನು ಹೇಳುತ್ತಿರುವುದು. ರಾಮಾಯಣ, ಭಾರತ ಓದಿಕೊಂಡು ಉಪವಾಸಮಾಡಿ ಎಂದು ಹೇಳುವುದಾದರೆ ಖಂಡಿತವಾಗಿಯೂ ನಾವದನ್ನು ಒಪ್ಪುವುದಕ್ಕಾಗುವುದಿಲ್ಲ.

ಆಮೇಲೆ ವಿದ್ಯಾಭ್ಯಾಸದ ಸುಧಾರಣೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಶ್ರೀಮಾನ್ ಪಟ್ಟಾಭಿರಾಮನ್‌ರವರೂ, ಇನ್ನೂ ಅನೇಕ ತಜ್ಞರೂ ಸೇರಿ ಚೆನ್ನಾಗಿಮಾಡಿದ್ದಾರೆ; ನಿಜ. ಆದರೆ ನಿಜವಾಗಿಯೂ ಎಷ್ಟರಮಟ್ಟಿಗೆ ಅದನ್ನು ಜಾರಿಗೆ ತರುತ್ತಾರೋ ನೋಡೋಣ. ಏಕೆಂದರೆ ಇಂಥ ಸ್ಕೀಮುಗಳು ಎಷ್ಟೋ ಆದುವು. ಅವುಗಳಂತೆಯೇ ಇದೂ ಒಂದು ಎಂದು ಭಾವಿಸಬೇಕು, ಅಷ್ಟೆ. ಬರೀ ಒಂದು show ಗಾಗಿ ಇಂಥದನ್ನೆಲ್ಲಾ ತೋರಿಸಿ ರಿಪೋರ್ಟ್‌ಗಳು ಬರೆಯಲ್ಪಡುತ್ತಿವೆಯೇ ಹೊರತು ವಾಸ್ತವವಾಗಿ ಕಾರ್ಯತಃ ಏನೂ ನಡೆಯುವುದಿಲ್ಲ. ಇವೊತ್ತಿಗೂ, ನಮ್ಮಷ್ಟೇ ಜನಸಂಖ್ಯೆಯಿರುವ ತಿರುವಾಂಕೂರು ಸಂಸ್ಥಾನವನ್ನು ನೋಡಿ. ಅಲ್ಲಿ 16 ಲಕ್ಷ ಹುಡುಗರು ಸ್ಕೂಲಿಗೆ ಹೋಗುತ್ತಿದ್ದಾರೆ. ಈಗ ದೇಶದಲ್ಲಿ ನಮಗೆ ಬೇಕಾಗಿರುವುದು ನಮ್ಮ ಹುಡುಗರಿಗೆ ಅಕ್ಷರಾಭ್ಯಾಸ : ಅದನ್ನು ಸರಿಯಾಗಿ ಒದಗಿಸಲಿಕ್ಕೆ ತಮ್ಮಲ್ಲಿ ಹಣವಿಲ್ಲ ! ಬರಿಯ ಯೋಜನೆಗಳನ್ನು ಹಾಕಿಕೊಂಡು ಹೋಗುವುದರಲ್ಲಿ ಏನು ಪ್ರಯೋಜನ ?

ಆಹಾರ ನೀತಿಯನ್ನು ನೋಡಿದರೆ, ಕಳೆದ ಐದಾರು ವರ್ಷಗಳಿಂದಲೂ ಜನರು ಸಂಕಟಪಡುತ್ತಿದ್ದಾರೆ. ಆಹಾರಧಾನ್ಯ ಸಂಗ್ರಹಣೆಯ ವಿಷಯದಲ್ಲಾಗಲಿ, ವಿಲೇವಾರಿಯ ವಿಷಯದಲ್ಲಾಗಲಿ ನಾವು ಹೇಳಿದುದನ್ನು ಸರ್ಕಾರ ಕೇಳಿಲ್ಲ. ಈ ರೀತಿ ಹೋಗಿನವರಿಗೆ ಪಲ್ಲಕ್ಕೆ 36 ರೂಪಾಯಿಗಳಂತೆ ಕೊಟ್ಟು ದಿನಸಿ ತರುತ್ತಿದ್ದಾರೆ; ಇಲ್ಲಿ ಬೇರೆ ಧಾರಣೆ ಕೊಡುತ್ತಾರೆ. ನಾನು ಹೇಳುವುದಿಷ್ಟು : ಈ ಮೂರು ಪಟ್ಟಣಗಳಿಗೆ ಬೇಕಾಗಿರುವುದು 12 ಲಕ್ಷ ಪಲ್ಲ ದವಸ. ಇದಕ್ಕಾಗಿ 36 ಲಕ್ಷ ರೂಪಾಯಿ ವೆಚ್ಚವಾಗುವ ಸಿಬ್ಬಂದಿಯನ್ನಿಟ್ಟುಕೊಂಡು ಲಕ್ಷಾಂತರ ರೂಪಾಯಿ ನಷ್ಟಮಾಡಿಕೊಳ್ಳುವುದರಲ್ಲಿ ಏನು ಅರ್ಥ ? ಈ ನೀತಿಯನ್ನು ಬದಲಾಯಿಸಿ ಒಟ್ಟಿಗೆ ಕಡ್ಡಾಯವಾಗಿ ಎಲ್ಲ ಕಡೆಯೂ ಹತೋಟಿ ತೆಗೆದುಹಾಕಿದರೆ ಪರಿಸ್ಥಿತಿ ತಾನೇ ಸರಿಯಾಗುತ್ತದೆ.

ಇನ್ನು ಪಾಂಚವಾರ್ಷಿಕ ಯೋಜನೆ. ಇದು ಒಂದು ಬಿಸಿಲು ಕುದುರೆ, ಇದರಲ್ಲಿ ಖಂಡಿತವಾಗಿಯೂ ಯಾವುದನ್ನೂ ಸಾಧಿಸುವುದಕ್ಕಾಗುವುದಿಲ್ಲ. ಇಂಥ ಎಷ್ಟೋ ಯೋಜನೆಗಳು ಆಗಿಹೋದವು. ಇದನ್ನು ರಷ್ಯಾ ದೇಶದಲ್ಲಿ ಮಾಡಿರುವಂತೆ ಮಾಡಿದ್ದಾರೆ ಅಲ್ಲಿ ಅವರು ಪಾಂಚವಾರ್ಷಿಕ ಯೋಜನೆಯನ್ನು ನಾಲ್ಕು ವರ್ಷದಲ್ಲೇ ಪೂರ್ತಿಮಾಡಿದರು. ಇಲ್ಲಿ ವಿರೋಧಪಕ್ಷದವರು ಸಹಕಾರ ಹಸ್ತ ನೀಡಿಲ್ಲ ಎಂದು ಹೇಳಿದರು. ಸಹಕಾರ ಹಸ್ತ ನೀಡಲಿಲ್ಲವೆಂದರೆ, ಈ ಯೋಜನೆಯನ್ನು ರಚನೆ ಮಾಡುವಾಗ ನಮ್ಮ ಸಹಕಾರ ಕೇಳಿದರೆ ? ಇಲ್ಲ.

Sri A. G. RAMACHANDRA RAO.—All were consulted.

ಶ್ರೀ ಬಿ. ಹುಚ್ಚೇಗೌಡ.—ಇಲ್ಲ. ಇಂಗ್ಲೆಂಡು ಅಮೆರಿಕಾಗಳ ಪತ್ರಿಕೆಗಳೆಲ್ಲವೂ ಈ ಯೋಜನೆಯನ್ನು ಹೊಗಳುತ್ತಿವೆ ಎಂದು ಹೇಳಿದರು ಅವರಿಂದ ಹೊಗಳಿಸಿಕೊಳ್ಳುವುದು ಕಷ್ಟವೇನೂ ಇಲ್ಲ, ಈಗ ಯಾವರೀತಿ ಸರ್ಕಾರವಿದೆ ಎಂಬುದು ಗೊತ್ತಿದೆ ! ಬೆವನ್‌ರವರು ಇಂಗ್ಲೆಂಡ್ ದೇಶದಲ್ಲಿ ಮಂತ್ರಿಯಾಗಿದ್ದರು. ಅಲ್ಲಿನ ಸರ್ಕಾರದವರು ತಮ್ಮ ಸಲಹೆಯನ್ನು ಒಪ್ಪಲಿಲ್ಲವೆಂದು ರಾಜೀನಾಮೆ ಕೊಟ್ಟು ಬಂದರು. ಹೀಗಿದ್ದರೂ ಅವರ ಸರ್ಕಾರವನ್ನು ಟೀಕೆಮಾಡಬೇಕಾದರೆ ಹಿಂದು ಮುಂದು ನೋಡಿದರು. 'ನಾನು ಅಲ್ಲಿಂದ ಬಂದಿದ್ದೇನೆ, ನಾನು ಸರ್ಕಾರದ ಅತಿಥಿ, ಕಾಂಗ್ರೆಸ್ ವಿಷಯ ಮಾತನಾಡಬೇಕೆಂದು ಇಷ್ಟವಿದೆ, ಆದರೆ ಇದು ಕಾಂಗ್ರೆಸ್ ಸರ್ಕಾರ, ಕಾಂಗ್ರೆಸ್ಸನ್ನು ಬೈದರೆ ಸರ್ಕಾರವನ್ನು ಬೈದಹಾಗಾಗುತ್ತದೆ. ಆದರೆ ನಾನು ಸರ್ಕಾರದ ಅತಿಥಿ' ಎಂದು ಹೇಳಿದ್ದಾರೆ. 'ಆದರೂ ನನ್ನ ಅಭಿಪ್ರಾಯ ಕೊಂಚ ಹೇಳುತ್ತೇನೆ. ನಾನು ಅಲ್ಲಲ್ಲಿ ಸುತ್ತಿದೆ, ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಬಹಳ ಸಂಕಟವಾಗುತ್ತದೆ. ಇನ್ನೂ ಹತ್ತಾರು ವರ್ಷ ಹೀಗೆಯೇ ಇದ್ದರೆ ಏನಾಗುತ್ತದೆಯೋ ; ಹಳ್ಳಿಗಳು ಮುಂದೆ ಬರುವಂತೆ ಕೆಲಸಮಾಡಬೇಕಾಗಿತ್ತು. ಇದನ್ನು ಸರ್ಕಾರ ಮಾಡಲಿಲ್ಲ; ಟೆಲೆವಿಷನ್ ಕೊಟ್ಟಿದ್ದೀರಿ. Do you expect us to see hunger and starvation through television? ಏಕೆ ಟೆಲಿವಿಷನ್ ! ಹೊಟ್ಟೆಗೆ ಬಟ್ಟೆಗೇ ಇಲ್ಲದೇಯಿರುವಾಗ ಟೆಲಿವಿಷನ್ ಏಕೆ ಕೊಟ್ಟಿರಿ, ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಂಥ ಮಾತು ಹೇಳಬೇಕಾಗಿದ್ದರೆ ಎಷ್ಟು ಮಟ್ಟಿನ ಸಂಕಟವಿರಬಹುದು ! ಹೊರ ದೇಶಗಳಲ್ಲಿ ಎಷ್ಟೋ ಬದಲಾವಣೆಗಳನ್ನು ಮಾಡಿದ್ದಾರೆ. ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ ಅವರು. 'ಸರ್ಕಾರ ಯೋಜನೆಮಾಡಿ, ಅದುಮಾಡುತ್ತೇವೆ, ಇದು

(ಶ್ರೀ ಬಿ. ಹುಚ್ಚೇಗೌಡ.)

ಮಾಡುತ್ತೇವೆ ಎಂದು ಹೇಳುತ್ತಾರೆ, ಟೆಲಿವಿಷನ್ ಮುಂತಾದ ಕೆಲಸಕ್ಕೆ ಹೋಗಬೇಡಿ, ಮೊದಲು ಜನಕ್ಕೆ ಹೊಟ್ಟೆಗೆ ಕೊಡಿ' ಎಂದು ಹೇಳಿದ್ದಾರೆ. ಕಾಲಾವಕಾಶವಿದ್ದಿದ್ದರೆ ಇನ್ನೂ ಅನೇಕ ವಿಚಾರ ಹೇಳಬೇಕೆಂದಿದ್ದೆ. ಇಲ್ಲಿಗೇ ನಿಲ್ಲಿಸಬೇಕಾಗಿದೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿ (ಚಿತ್ರದುರ್ಗ).—ಅಧ್ಯಕ್ಷರೆ, ಶ್ರೀಮಾನ್ ನಾರಾಯಣಸ್ವಾಮಿಯವರು ಈ ಭಾಷಣದ ವಿಷಯದಲ್ಲಿ ಚರ್ಚೆ ಯಾವರೀತಿ ಯಿರಬೇಕೆಂದು ಹೇಳಿದ್ದಾರೆ. ಅವರು ಎರಡು ವಿಷಯಗಳನ್ನು ಹೇಳಿದ್ದಾರೆ. ಹೋದ ಸಾರಿಯ ಬಡ್ಜೆಟ್ ಅಧಿವೇಶನದಿಂದ ಈ ಅಧಿವೇಶನದ ವರೆಗೆ ಸರ್ಕಾರ ಮಾಡಿರುವ ಸಾಧನೆಗಳೇನು ಎಂಬುದು ಒಂದು; ಮುಂದೆ ಬರತಕ್ಕ ವರ್ಷದಲ್ಲಿ ಯಾವರೀತಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬುದು ಇನ್ನೊಂದು. ಈ ಭಾಷಣದಲ್ಲಿ ಸರ್ಕಾರದ ಸಾಧನೆ ಯೇನೆಂಬುದು ಕಾಣುವುದಿಲ್ಲ. ಒಂದು ವಿಷಯ ಮಾತ್ರ ಕಾಣುತ್ತದೆ. ಅವರು ಚುನಾವಣೆಗಳ ಮುನ್ನ ಜನರಿಗೆ ಏನು ಆಶ್ವಾಸನ ಕೊಟ್ಟು, ಏನು ದೊಡ್ಡ ದೊಡ್ಡ ವಿಷಯಗಳನ್ನು ಹೇಳಿದರೋ ಚುನಾವಣೆಗಳಲ್ಲಿ ಜಯಗಳಿಸುವುದಕ್ಕೆ, ಅವೆಲ್ಲವನ್ನೂ ಮರೆತು ಜನರ ಹೊಟ್ಟೆಯಮೇಲೆ ಹೊಡೆದಿದ್ದಾರೆ; ಇದೊಂದು ಈ ಒಂಭತ್ತು ತಿಂಗಳಲ್ಲಿ ಈ ಸರ್ಕಾರ ಸಾಧಿಸಿರುವ ಸಾಧನೆ ಎಂದು ಹೇಳಬಹುದು. ಜನರ ಸ್ಥಿತಿ ಕಷ್ಟವಾಗಿರುವಾಗ, ಆಹಾರ ಸಮಸ್ಯೆ ತೀಕ್ಷ್ಣವಾಗಿ ಬೆಳೆಯುತ್ತಿರುವಾಗ, ಆಹಾರದ ಬೆಲೆಯನ್ನು ಹೆಚ್ಚಿಸಿ ಬಡವರಿಗೂ ಮಧ್ಯಮವರ್ಗದವರಿಗೂ ತೊಂದರೆಮಾಡಿದ್ದಾರೆ. ಇದನ್ನು ಸಾಧನೆ ಎಂದು ಹೇಳಿಕೊಂಡು ತಮ್ಮ glory ಇದರಲ್ಲಿದೆ ಎಂದು ಸರ್ಕಾರ ಹೇಳುವುದಾದರೆ ನಮ್ಮ ಅಡ್ಡಿಯೇನೂ ಇಲ್ಲ. ಆಹಾರದ ವಿಷಯದಲ್ಲಿ ನಾವು ಅನೇಕವೇಳೆ ಹೇಳಿದ್ದೇವೆ. ಇದು ಪ್ರಾಮುಖ್ಯವಾದ ವಿಷಯ, ಜನರಿಗೆ ಬೇಕಾದ ವಿಷಯ, ಇಂಥ ಸಮಸ್ಯೆಯನ್ನು ಬಗೆಹರಿಸಬೇಕು, ಜನರ ಹಿತದೃಷ್ಟಿಯಿಂದ ಇದನ್ನು ನೋಡಬೇಕೇವಿನಾ ಹಣದ ದೃಷ್ಟಿಯಿಟ್ಟುಕೊಂಡು ಕೆಲಸಮಾಡಿದರೆ ಆಗುವುದಿಲ್ಲ, ಎಂದು ಅನೇಕ ಸಾರಿ ಹೇಳಿದ್ದೇವೆ. ಒಂದುಸಾರಿ ಮುಖ್ಯಮಂತ್ರಿಗಳು ಭಾಷಣಮಾಡುತ್ತಾ ಆಹಾರದ ಬೆಲೆಯನ್ನು ಏರಿಸದೇ ಹೋದರೆ ಸರ್ಕಾರದ ಬೊಕ್ಕಸ ಬರಿದಾಗುತ್ತದೆಂದು ಹೇಳಿದರು. ಯಾರೂ ಸರ್ಕಾರದ ಬೊಕ್ಕಸ ಬರಿದಾಗಲೆಂದು ಹೇಳುವುದಿಲ್ಲ. ಆದರೆ ಜನರೇ ಇಲ್ಲದಿರುವ ಸರ್ಕಾರ ಏಕೆ ? ಜನರೆಲ್ಲಾ ನಿರ್ನಾಮವಾಗಿ ಸತ್ತುಹೋಗತಕ್ಕ ಪರಿಸ್ಥಿತಿಯಲ್ಲಿರುವಾಗ ಸರ್ಕಾರ ತನ್ನ ಬೊಕ್ಕಸವನ್ನುಳಿಸಬೇಕೆಂದು ಹೋದರೆ ಅದು ಸರ್ಕಾರವೇ ಎಂದು ಬಹಳ ವ್ಯಸನದಿಂದ ಕೇಳಬೇಕಾಗಿದೆ. ಆಹಾರ ಸಮಸ್ಯೆಯನ್ನು ಬಿಡಿಸಿ ಹಿಂದಿದ್ದ ಪರಿಸ್ಥಿತಿಯನ್ನು ತರುವುದ ಕಷ್ಟ, ಸಾಧ್ಯವಿಲ್ಲ. ಇದು ಬಹಳ ಕ್ಲಿಷ್ಟವಾದ ಸಮಸ್ಯೆ. ಭೂ ಸಮಸ್ಯೆಯನ್ನು ಸರಿಯಾಗಿ ಬಿಡಿಸದೇಯಿದ್ದರೆ ಇದನ್ನೂ ಬಿಡಿಸುವುದಕ್ಕಾಗುವುದಿಲ್ಲ. ಭೂ ಸಮಸ್ಯೆಯ ವಿಚಾರದಲ್ಲಿ ಹಿಂದೆ ಸರಿಯಾದ ಯಾವ ನೀತಿಯನ್ನೂ ಅನುಸರಿಸಿಲ್ಲ, ಮುಂದೆ ಯಾವ ರೀತಿಮಾಡುತ್ತಾರೆ ಎಂಬುದನ್ನು ಸರ್ಕಾರ ಹೇಳದೇಯಿರುವುದು ವಿಷಾದಕರ. ನಿಮ್ನತರಗತಿಯವರಿಗೆ ಮನೆಗಳನ್ನು ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ಆದರೆ ಅವರ ಆರ್ಥಿಕಸ್ಥಿತಿ ಸರಿಯಾಗುವವರೆಗೆ ಏನು ಮಾಡಿದರೂ ಪ್ರಯೋಜನವಿಲ್ಲ. ಮನೆಗಳನ್ನು ಕೊಟ್ಟಿದ್ದಾರೆಂದು ಸಂತೋಷವಾಗಬಹುದು. ಆದರೆ ಅವರ ಆರ್ಥಿಕಸ್ಥಿತಿ ಉನ್ನತಮಟ್ಟಕ್ಕೆ ಬರಲು ಏನು ಮಾಡದ್ದಾರೆ ಸರ್ಕಾರದವರು ? ಹಳ್ಳಿಗಳಲ್ಲಿ ಅನೇಕಕಡೆ ನಿಮ್ನತರಗತಿಯವರು ಜಮೀನು ಕೇಳಿದರೆ ಕೊಡುವುದಿಲ್ಲ.

Sri Kadidal MANJAPPA.—It is a mistaken impression.

Sri Mulka GOVINDA REDDY.—I am going to challenge the Revenue Minister to prove with facts and figures how many people have been given lands and what is the extent of lands given to each and what is the fertility of the soil of such lands.

ಜಮೀನು ಕೊಟ್ಟರೂ ಕೂಡ ಬಂಜರು, ಚೌಳು ಜಮೀನು ಕೊಡುತ್ತಾರೆ; ಅದರಲ್ಲಿ ವರ್ಷವೆಲ್ಲ ದುಡಿದರೂ 2) ರೂಪಾಯಿ ಉತ್ಪತ್ತಿ ಕೂಡ ಆಗುವುದಿಲ್ಲ. ಇಂಥ ಜಮೀನನ್ನು ಕೊಡುವುದಕ್ಕೆ ಬದಲು ಒಳ್ಳೆಯದನ್ನು ಕೊಡಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮಲ್ಲಿರುವುದರಲ್ಲಿ ಕೊಡಬಹುದು. ಅಮೆರಿಕಾದಲ್ಲಿ ಕೊಡುವುದಕ್ಕಾಗುವುದಿಲ್ಲ ; ಮೈಸೂರು ಸಂಸ್ಥಾನದಲ್ಲಿ ಕೊಡಬೇಕು.

ಶ್ರೀ ಮುಲ್ಕಾ ಗೋವಿಂದರೆಡ್ಡಿ.—ಕೊಡುವುದರಲ್ಲಿಯೂ ಜಮೀನಿದ್ದವರಿಗೂ ಅನುಕೂಲವಾಗಿರುವವರಿಗೂ ಕೊಡುತ್ತಾರೆ, ಬಡವರಿಗೆ ಕೊಡುವುದಿಲ್ಲವೆಂದು ಅಂಕಿ ಅಂಶಗಳೊಡನೆ ಘಂಟಾಘೋಷವಾಗಿ ಹೇಳುತ್ತೇನೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ 15) ಎಕರೆ ಜಮೀನಿರುವ ಒಬ್ಬರು ದೊಡ್ಡ ಜಮೀನ್ದಾರರಿಗೆ 50—60 ಎಕರೆ ಕೊಟ್ಟಿದ್ದಾರೆ; ಅದೇ ಮಂತ್ರಿಗಳು ಕೊಟ್ಟಿದ್ದಾರೆ. ಅವರ ಹೆಸರನ್ನು ಬೇಕಾದರೆ ಹೇಳಲು ಸಿದ್ಧನಾಗಿದ್ದೇನೆ, ಆದರೆ ಹೇಳುವುದಿಲ್ಲ.

ಈ ಕ್ಷಾಮದ ಹಾವಳಿ ಬಹಳವಾಗಿ, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ತೀರಾ ವಿಷಪರಿಸ್ಥಿತಿಗೆ ಬಂದಿದೆ. ಆದರೆ ಕೆಲವು ಭಾಗದಲ್ಲಿ ಮಾತ್ರ ಅಷ್ಟು ತೀವ್ರವಾಗಿರಲಾರದು ; ಅದನ್ನು ಬೇಕಾದರೆ ನಾನು ಒಪ್ಪಿಕೊಳ್ಳುತ್ತೇನೆ. ಈ ಸ್ಥಳಗಳಿಗೆ ಸರಿಯಾದ ಪರಿಹಾರ ಒದಗುತ್ತಿಲ್ಲ. ಈ ಕ್ಷಾಮ ಪರಿಸ್ಥಿತಿಯು ಎಡಬಿಡದೆ ರೈತರನ್ನು ಕಾಡುತ್ತಿರುವುದರಿಂದ ಕೂಲಿಗಾರರಿಗೆ ಸರಿಯಾದ ಕೂಲಿಗಳು ದೊರೆಯದಂತಾಗಿದೆ. ಈ ಕಾರಣಗಳಿಂದ ರೈತಾಪಿ ವರ್ಗ ಮತ್ತು ಕೂಲಿಗಾರ ವರ್ಗಗಳೆಲ್ಲ ಸಾಲದ ಕಿರುಕುಳಕ್ಕೆ ಸಿಕ್ಕಿ ಅದನ್ನು ಪಾರುಮಾಡಿಕೊಳ್ಳಲು ಮಾರ್ಗ ಕಾಣದೆ ತೊಂದರೆಗೆ ಈಡಾಗಿದ್ದಾರೆ. ರೈತರು ತಕಾವಿ ಜಮೀನು ಆಬಾದು ಇತ್ಯಾದಿ ಸಾಲಗಳಿಗಾಗಿ ಸರ್ಕಾರಕ್ಕೆ ಅರ್ಜಿಹಾಕಿಕೊಂಡರೆ ಅವರಿಗೆ ಸರಿಯಾಗಿ ಸಕಾಲದಲ್ಲಿ ಸಾಲಗಳು ಸರ್ಕಾರದಿಂದ ದೊರೆಯುತ್ತಿಲ್ಲ. ಇದರಿಂದಲೂ ಅವರ ಸಾಲದ ಹೊರೆ ಜಾಸ್ತಿಯಾಗಲು ಕಾರಣವಾಯಿತು.

ರೈತರ ಏಳಿಗೆಗೆ ಅನೇಕ ರೀತಿಯಲ್ಲಿ ಸೌಲಭ್ಯಗಳನ್ನು ನೀಡಿ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯುವಂಥ ಒಂದು ಅವಕಾಶ ಇದೆ. ಆದರೆ ಅವರಿಗೆ ಅಂಥ ಅನುಕೂಲಗಳಾವುವನ್ನೂ ಸರ್ಕಾರ ಒದಗಿಸದೆ ಇರುವುದರಿಂದ ರೈತರ ಸಾಲದ ಹೊರೆ ದಿನದಿನಕ್ಕೂ ದೊಡ್ಡದಾಗುತ್ತಿದೆ. ಏಪೆಕ್ಸ್ ಬ್ಯಾಂಕ್, ಸೊಸೈಟಿ ಇತ್ಯಾದಿಗಳಿಗೆ ಸಾಲಕ್ಕಾಗಿ ಅವರು ಅರ್ಜಿ ಹಾಕಿಕೊಂಡರೆ ಆ ಅರ್ಜಿಗಳು ಶತಮಾನಗಟ್ಟಲೆ ಯಾವ ಆವಾಹನೆ ವಿಸರ್ಜನೆಗಳೂ ಇಲ್ಲದಂತೆ ಮೂಲೆಗೆ ಬಿದ್ದು ಹೋಗಿರು

ತ್ತವೆ. ಇಂಥ ಅನ್ಯಾಯಗಳನ್ನೆಲ್ಲ ತಾವು ಕೂಡಲೆ ಸರಿಪಡಿಸಿ ರೈತರ ಏಳಿಗೆಗೆ ನಾನಾ ಮುಖದಲ್ಲಿ ಸಹಾಯ ನೀಡಬೇಕೆಂದು ಸೂಚಿಸುತ್ತೇನೆ. ಹೀಗೆ ಮಾಡದೆ ಇದ್ದಲ್ಲಿ ದಿನ ದಿನಕ್ಕೂ ರೈತರ ಸಾಲದ ಹೊರೆ ಹೆಚ್ಚಾಗಿ ದೇಶಾಭಿವೃದ್ಧಿಗೆ ದೊಡ್ಡ ಅಡಚಣೆಯುಂಟಾಗುತ್ತದೆ. ಈ ಬ್ಯಾಂಕುಗಳು ಯಾವುದರಿಂದಲೂ, ಅವರಿಗೆ ಸಕಾಲದಲ್ಲಿ ಸಾಲ ದೊರೆಯುವಂತೆ ಮಾಡುವುದು ಬಹಳ ಕಷ್ಟ.

ಈ ಬಗ್ಗೆ ಒಂದು ರ್ಯಾಡಿಕಲ್ ರೆಮಿಡಿಯನ್ನು ಕಂಡು ಹಿಡಿಯಬೇಕು. ದೇಶದಲ್ಲಿರತಕ್ಕ ಸಾಲಗಾರರ ಖಚಿತವಾದ ಅಂಕಿ ಅಂಶಗಳನ್ನು ಸಂಗ್ರಹಿಸಿ ಸಾಲ ಕೊಟ್ಟವರಿಗೆ ಆ ಸಾಲ ಕೊಡಬೇಕಾಗಿಲ್ಲವೆಂದು ತಾವು ಒಂದು ರೀತಿಯಾಗಿ ತೀರ್ಮಾನ ಮಾಡಿದರೆ ಆಗ ರೈತ ಋಣವಿಮುಕ್ತನಾಗಿ ಎದ್ದು ಜೀವನಮಾಡಲು ಒಂದು ಅವಕಾಶವಾಗುತ್ತದೆ. ಇಂಥ ಒಂದು ಅವಕಾಶವಿದ್ದಲ್ಲಿ ರೈತ ಸಾಲಗಾರನಾಗುವುದಕ್ಕೆ ಅವಕಾಶವಿಲ್ಲದಂತೆ ಇರಲು ಒಂದು ಅನುಕೂಲವನ್ನು ಕಲ್ಪಿಸಿದ ಹಾಗೆ ಆಗುತ್ತದೆ. ಅಂತೂ, ಇಂಥ ಒಂದು ಯಾವುದಾದರೂ ರ್ಯಾಡಿಕಲ್ ರೆಮಿಡಿಯನ್ನು ತಾವು ತಾರದ ಹೊರತು ರೈತನ ಏಳಿಗೆಯಾಗುವುದಿಲ್ಲ. ಹೀಗೆ ಮಾಡುವುದರ ಜೊತೆಗೆ ರೈತರಿಗೆ ಒಂದು ಸರಿಯಾದ ಮಾರ್ಕೆಟಿಂಗ್ ಫೆಸಿಲಿಟಿ ಉಂಟುಮಾಡಿಕೊಡಿ. ಷಾರ್ಟ್ ಟರ್ಮ್ ಲೋನ್ ಮತ್ತು ಲಾಂಗ್ ಟರ್ಮ್ ಲೋನ್ಸ್ ಇಂಥವುಗಳನ್ನು ಕೊಡಿ. ಈ ರೀತಿ ತಾವು ಮಾಡಿದಾಗ ಇದರಿಂದ ಅನೇಕ ಸಮಸ್ಯೆಗಳನ್ನು ತಾವು ಬಗೆ ಹರಿಸುವುದಕ್ಕೆ ಸುಲಭಸಾಧ್ಯವಾಗುತ್ತದೆ.

ಇನ್ನು ಗ್ರಾಮಾಂತರಗಳ ನೀರಿನ ಸರಬರಾಯಿಯ ಬಗ್ಗೆ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಅವುಗಳನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಜಾಗ್ರತೆ ನೀರಿನ ಸರಬರಾಯಿಯ ಅನುಕೂಲವನ್ನು ಆದಷ್ಟು ಬೇಗ ಒದಗಿಸುತ್ತೀರೆಂದು ತಿಳಿದುಕೊಂಡಿದ್ದೇನೆ. ಅನೇಕ ಗ್ರಾಮಗಳಲ್ಲಿ ನೀರಿಗೆ ಬಹಳ ಕಷ್ಟವಿದೆ. 3–4 ಮೈಲಿಗಳಿಂದ ಕುಡಿಯುವ ನೀರನ್ನು ಹೊತ್ತು ತರುತ್ತಿದ್ದಾರೆ. ಈ ವಿಚಾರದಲ್ಲಿ ಈಗಿನ ಸರ್ಕಾರ ಅನುಸರಿಸುತ್ತಿರುವ ನೀತಿ ಯಾವ ರೀತಿ ಇದೆ ಎಂದರೆ, ಯಾರು ಗಲಾಟೆ ಮಾಡುತ್ತಾರೋ, ಯಾರ ಬಾಯಿ ದೊಡ್ಡದಾಗಿದೆಯೋ, ಅಂಥವರಿಗೆ ಸರ್ಕಾರದಲ್ಲಿ ಅನುಕೂಲ ದೊರೆತು ಹಳ್ಳಿಯಲ್ಲಿರತಕ್ಕವರಿಗೆ ಯಾವ ಪ್ರಯೋಜನವೂ ಈ ಸರ್ಕಾರದಿಂದ ದೊರೆಯುತ್ತಿಲ್ಲ. ಈ ಅಂಶವನ್ನು ನಾನು ಬಹಳ ಶೋಚನೀಯವಾದ ರೀತಿಯಲ್ಲಿ ತಿಳಿಸಬೇಕಾಗಿದೆ.

ನಾನು ಈಗ ಪಂಚವಾರ್ಷಿಕ ಯೋಜನೆಯ ಮೇಲೆ ಹೆಚ್ಚಾಗಿ ಮಾತನಾಡಲು ಇಷ್ಟಪಡುವುದಿಲ್ಲ. "ಶಂಕರ್ಸ್ ವೀಕ್ಲಿ" ಪತ್ರಿಕೆಯ ಮುಖಪುಟದಲ್ಲಿ ಒಂದು ಕಾರ್ಟೂನ್ ಮುದ್ರಿತವಾಗಿದೆ. ಅದು ಏನು ಸೂಚಿಸುತ್ತದೆ ಎಂದರೆ, ಬಡ ಜೋರೇಗೌಡನ ಮೇಲೆ ಎರಡು ಹೊರೆ ಪುಸ್ತಕಗಳನ್ನು ಹೇರಿಸಿ ಅವನು ಆ ಭಾರ ಹೊತ್ತು ನಿರ್ನಾಮವಾಗುತ್ತಿರುವಂತೆ ಮುದ್ರಿಸಲಾಗಿದೆ. ಈ ಪಾಂಚವಾರ್ಷಿಕ ಯೋಜನೆ ಕಮ್ಯೂನಿಟಿ ಪ್ರಾಜೆಕ್ಟ್ ಇಂಡೋ-ಏಷಿಯನ್ ಪ್ಲಾನ್ ಇವುಗಳ ವಿಚಾರವಾಗಿ ಶ್ರೀ ಕೆ. ಜಿ. ಮಷ್ರೂವಾಲಾರವರು ಬರೆದ ಲೇಖನ "ಕ್ರಾಸ್ ರೋಡ್ಸ್" ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದನ್ನು ನಾನೀಗ ತಮ್ಮ ಗಮನಕ್ಕೆ ತರಬೇಕೆಂದು ಬಯಸುತ್ತೇನೆ.

> "The Indo-U. S. Agreement is virtually a charter to the U. S. to establish herself in India, first as a trading concern and then as India's political boss."

Sri A. G. RAMACHANDRA RAO.—Is newspaper reading in the House in order.

Sri Mulka GOVINDA REDDY.—I am not reading. I am quoting from an article. I am not making it appear as my own. I am quoting. In many of the Legislatures it has been allowed. Anybody can read an extract from an article.

Mr. SPEAKER.—He may quote extracts.

Sri Mulka GOVINDA REDDY.—That is all.

> "The Government of India has agreed to place at the dispopal of U. S. all its administrative machinery and to become her advertising agency................."

Mr. SPEAKER. You are reading the whole article!

Sri Mulka GOVINDA REDDY.—I am not. I am reading a paragraph.

> "It is clear that the motives of the U. S. in aiding Europe and Asia are not so altruistic They are rankly made for organising an anti-Communist front"

ಶ್ರೀ ಕೆ. ಜಿ. ಮಶ್ರೂವಾಲಾರವರು ಮಹಾತ್ಮ ಗಾಂಧಿಯವರ ಅನುಯಾಯಿಗಳು ಅಂಥವರೇ ಇಂಥ ಯೋಜನೆಗಳಿಂದ ಮೋಸ ಹೋಗುತ್ತೀರಿ ಎಂದು ಹೇಳಿದ್ದಾರೆ. ಅಂದಮೇಲೆ ನಾವು ಇಂಥ ಬಲೆಗೆ ಬೀಳುವುದು ಸರಿಯಲ್ಲ. ನಿನ್ನೆ ಕೂಡ ಶ್ರೀ ಕೆ. ಪಟ್ಟಾಬಿರಾಮನ್‌ರವರು ಈ ಪಾಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಪ್ಲಾನಿಂಗುಗಳ ವಿಚಾರದಲ್ಲಿ ನಮ್ಮ ದೇಶದಲ್ಲಾಗಲಿ ಅಥವಾ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೇ ಆಗಲಿ ಅವು ಜಾರಿಗೆ ಬರಬೇಕಾಗಿದ್ದರೆ ಆ ದೇಶದಲ್ಲಿರತಕ್ಕ ಹಿನ್ನೆಲೆ ಏನಿರುತ್ತದೆಂಬುದನ್ನು ನಾವು ಮೊದಲು ಗಮನಿಸಬೇಕು. ಆ ಒಂದು ದೃಷ್ಟಿಯಿಂದ ಹೇಳುವುದಾದರೆ ಈಗ ಸದ್ಯಕ್ಕೆ ನಮ್ಮ ದೇಶದಲ್ಲಿ ಇಂಥ ಯೋಜನೆಗಳನ್ನು ಜಾರಿಗೆ ತರಲು ವಾತಾವರಣ ಸರಿಯಾಗಿಲ್ಲ. ಹಾಗೆ ಒಂದು ಅನುಕೂಲವಾದ ವಾತಾವರಣ ಉಂಟಾಗುವ ತನಕ ಈ ಯೋಜನೆಗಳನ್ನು ಮುಂದುವರಿಸುವುದು ಅನುಕೂಲವೆಂದು ಹೇಳಿ, ನಮ್ಮ ನಾಯಕರು ಮಂಡಿಸಿರತಕ್ಕ ತಿದ್ದುಪಡಿ ಸೂಚನೆಯನ್ನು ಸಂಪೂರ್ಣವಾಗಿ ಅನುಮೋದಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Mr. SPEAKER.—Is there any other member who is willing to speak?

(Sri B. RACHIAH rose.)

Sri M. PALANIYAPPAN.—The Chair may fix the time limit.

Mr. SPEAKER.—We shall go on till 5–30 and that is agreed.

ಶ್ರೀ ಬಿ. ರಾಚಯ್ಯ (ಯಳಂದೂರು.—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಿನ್ನೆ ಶನಿವಾರ 7ನೇ ತಾರೀಖು ವಿಧಾನಪರಿಷತ್ತು ಮತ್ತು ವಿಧಾನಸಭೆಗಳ ಜಂಟಿ ಸಮ್ಮೇಳನಗಳನ್ನು ಉದ್ದೇಶಿಸಿ ಶ್ರೀಮನ್ಮಹಾರಾಜರವರು ದಯಪಾಲಿಸಿರತಕ್ಕ ಭಾಷಣದ ಸಂಬಂಧವಾಗಿ ವಂದನಾರ್ಪಣೆ ಸೂಚಿಸತಕ್ಕ ಬಗ್ಗೆ ತಂದಿರತಕ್ಕ ನಿರ್ಣಯವ ಮತ್ತು ನಮ್ಮ ಪಾರ್ಟಿ ನಾಯಕರು ಸಭೆಯ ಮುಂದಿಟ್ಟಿರತಕ್ಕ ತಿದ್ದುಪಡಿ ಸೂಚನೆಗಳ ಸಂಬಂಧವಾಗಿ ಒಂದೆರಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಶ್ರೀಮನ್ಮಹಾರಾಜರವರು ದಯಪಾಲಿಸಿರತಕ್ಕ ಭಾಷಣದ ಬಗ್ಗೆ ವಂದನಾರ್ಪಣೆಯನ್ನು ಅರ್ಪಿಸಬೇಕೆಂಬ ವಿಚಾರವಲ್ಲಿ ಮತ್ತು ಅವರ ವ್ಯಕ್ತಿತ್ವದಲ್ಲಿ ನಮಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದಾಗ್ಯೂ ಈ ನಿರ್ಣಯದ ಮೇಲೆ ಯಾರೂ ಭಿನ್ನಾಭಿಪ್ರಾಯವನ್ನು ಸೂಚಿಸದೆ ಸರ್ವರೂ ಏಕಮುಖವಾದ ವಂದನಾರ್ಪಣೆಯನ್ನು ಸೂಚಿಸಲು ಅವಕಾಶ ನೀಡಬೇಕೆಂಬ ಒಂದು ಸಣ್ಣ ನೀತಿ ಬೋಧೆಯನ್ನು ನಿರ್ಣಯದ ಸೂಚಕರು ಹೇಳಿದರು.

ನಾನು ಹೇಳುವುದಾದರೆ, ಸರ್ಕಾರ ಕಳೆದ ಅಧಿವೇಶನದಿಂದ ಈಗಿನ ಅಧಿವೇಶನದವರೆಗೂ ಏನೇನು ಕಾರ್ಯ ಸಾಧನೆಮಾಡಿತು, ಮುಂದೆ ಕೈಕೊಳ್ಳಬೇಕಾದ ಕಾರ್ಯವನ್ನು ಯಾವ ರೀತಿನಿರೂಪಿಸಿದೆ ಎಂಬುದನ್ನು ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಅಡಕಮಾಡಿದ್ದಾರೆಂದು ಭಾವಿಸುತ್ತೇನೆ.

ಮೊದಲನೆಯದಾಗಿ ನಾನು, ಇದರ ಮೇಲೆ ಈಗಾಗಲೇ ವಿಪುಲವಾಗಿ ಚರ್ಚೆಯಾಗಿರುವುದರಿಂದ, ಅವರು ಬಿಟ್ಟಿರುವ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾವ ಮಾಡುತ್ತೇನೆ. ಮುಖ್ಯವಾಗಿ ಜಮೀನ್ದಾರಿ ವಿಷಯದಲ್ಲಿ ಈ ಸರ್ಕಾರ ಯಾವುದಾದರೂ ಕ್ರಾಂತಿಕಾರಕವಾದ ಬದಲಾವಣೆಯನ್ನು ತರುತ್ತದೆಂದು ಹೇಳಿ ಈ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಸೂಚಿಸಿಲ್ಲ. ಅಂದ ಮೇಲೆ ಸಾಮಾನ್ಯ ವರ್ಗದ ಬಡ ರೈತನ, ಕಾರ್ಮಿಕರ ಜೀವನ ಎಷ್ಟರಮಟ್ಟಿಗೆ ಈ ಸರ್ಕಾರದ ನೇತೃತ್ವದಲ್ಲಿ ಉತ್ತಮಗೊಳ್ಳುತ್ತದೆಂಬುದನ್ನು ನೀವೇ ಯೋಚಿಸಬಹುದು. ಸಾಮಾನ್ಯ ಮನುಷ್ಯನ ಜೀವನವನ್ನು ಉತ್ತಮಪಡಿಸಬೇಕೆಂದು ಎದುರು ಪಕ್ಷದವರು ಸ್ವತಂತ್ರ ಪಕ್ಷದವರು ಪ್ರತಿಯೊಬ್ಬರೂ ಹೇಳುತ್ತಲೇ ಇದ್ದಾರೆ. ಅಂಥದರಲ್ಲೂ ಆ ಕಡೆ ಎಷ್ಟು ಮಟ್ಟಿನ ಗಮನಕೊಟ್ಟಿದ್ದಾರೆ, ಬಡರೈತನ ಸ್ಥಿತಿ ಉತ್ತಮಗೊಂಡೀತೇ ಎಂಬುದನ್ನು ನೀವೇ ನೋಡಬಹುದು. ಇಂಥದರಲ್ಲಿ ಸಾಮಾನ್ಯ ಮನುಷ್ಯನ ನೈತಿಕ ಪುನರುಜ್ಜೀವನವನ್ನು ಸಾಧಿಸುತ್ತೇವೆಂದು ಸಂಸ್ಕೃತಿ ಪ್ರಚಾರಕ್ಕೆ ಹೊರಟಿದ್ದಾರೆ. ವಾಸ್ತವವಾಗಿ ನೋಡಿದರೆ ಸಾಮಾನ್ಯಮನುಷ್ಯನಲ್ಲಿ ಸಂಸ್ಕೃತಿ ಕಳೆದುಹೋಗಿಲ್ಲ. ಇವೊತ್ತಿಗೂ ಸತ್ಯ, ಧರ್ಮ ಎಂಬುದಿರುವುದು ಬಡರೈತನಲ್ಲೇ ವಿನಾ ದೊಡ್ಡವರಲ್ಲಿ ಅಲ್ಲ ಎಂದು ಹೇಳಬೇಕು.

ಎರಡನೆಯದಾಗಿ, ರಾಜ್ಯಾಂಗದ 32ನೆಯ 2ನೇ ವಿಧಿಯಂತೆ ಪ್ರತಿ ವರ್ಷವೂ ಪಬ್ಲಿಕ್‌ಸರ್ವಿಸ್ ಕಮಿಷನ್ನಿನವರು ತಮ್ಮ ವರದಿಯನ್ನು ಸರ್ಕಾರದ ಅವಗಾಹನೆಗೆ ತರಬೇಕಾಗಿದೆ. ಇಂಥ ವಿಚಾರದಲ್ಲಿ ಕಳೆದ ಮೂರು ವರ್ಷಗಳಿಂದಲೂ ಯಾವ ವಿಧವಾದ ವರದಿಯನ್ನೂ ತಂದಿಲ್ಲದಿರುವುದನ್ನು ನೋಡಿ ಆಶ್ಚರ್ಯವಾಗುತ್ತದೆ. ಈ ಸಭೆಯಲ್ಲಿ ಪ್ರಶ್ನೋತ್ತರಗಳ ಕಾಲದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅನೇಕರಿಗೆ ಅನ್ಯಾಯವಾಗುತ್ತಿದೆ; ಅನ್ಯಾಯವಾಗುತ್ತಿಲ್ಲವೆಂದು ಹೇಳುತ್ತಿರವುದನ್ನು ನೋಡಿ ವಿಷಾದವಾಗುತ್ತಿದೆ. ಸಿವಿಲ್ ಲಿಸ್ಟನ್ನು ಕೋಮುವಾರು ಪ್ರಕಾರ ಏಕೆ ತಯಾರಿಸಲಿಲ್ಲ ಎಂದು ಕೇಳಿದರೂ ಉತ್ತರ ಸರಿಯಾಗಿ ಹೇಳಲಿಲ್ಲ. ಹೀಗೆ ಮಾನ್ಯ ಸಚಿವರು ನ್ಯಾಯ ದೊರಕಿದೆಯೆಂದು ಹೇಳಬೇಕಾಗಿದ್ದರೆ ಯಾವ ಆಧಾರವನ್ನೂ ಇಟ್ಟುಕೊಳ್ಳದೆ ಹೇಳುತ್ತಿದ್ದಾರೆ. ಇದುವರೆಗೂ ವಾರ್ಷಿಕ ವರದಿಯನ್ನು ಕಮಿಷನರಿಂದ ತರಿಸದಿರುವುದನ್ನು ನೋಡಿದರೆಯೇ ಅನ್ಯಾಯವಾಗಿದೆಯೇ ಅಥವಾ ಇಲ್ಲವೇ ಗೊತ್ತಾಗುತ್ತದೆ.

ಆ ಮೇಲೆ, ನಿಮ್ನ ತರಗತಿಯವರ ವಿಚಾರದಲ್ಲಿ ಅನೇಕರು ಅನೇಕ ವಿಧವಾಗಿ ಮಾತನಾಡುತ್ತಿದ್ದಾರೆ. 9 ತಿಂಗಳುಗಳಲ್ಲಿ 3,000 ಮನೆಗಳನ್ನು ಕಟ್ಟಿದ್ದಾರೆಂದು ಹೇಳಿದರು. ಅದನ್ನು ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಇದಕ್ಕಾಗಿ ಒಂದು ನಾಮಕಾವಾಸ್ತೆ ಕಮಿಟಿ ಮಾಡಿದ್ದಾರೆ. ಆ ಕಮಿಟಿಯಿಂದ ಏನೂ ಕೆಲಸವಾಗಿಲ್ಲ. ಮನೆಗಳನ್ನು ಹೊಸದಾಗಿ ಕಟ್ಟಿದ್ದೇವೆಂದು ಹೇಳಿದ್ದು ನಿಜವಲ್ಲ. ಹಿಂದಿನವರ್ಷ ಅರ್ಧಮರ್ಧ ಕಟ್ಟಿದ್ದನ್ನೇ ಸರಿಪಡಿಸಿ ಹೊಸದಾಗಿ ಕಟ್ಟಿದ್ದೇವೆಂದು ಹೇಳಿದ್ದಾರೆಯೇ ಹೊರತು ನಿಜವಾಗಿಯೂ ಹೊಸದಾಗಿ ಯಾವುದನ್ನೂ ಕಟ್ಟಿಕೊಟ್ಟಿಲ್ಲ. ಅಲ್ಲದೆ 19 ಲಕ್ಷ ರೂಪಾಯಿಗಳನ್ನು ಒದಗಿಸಿರುವುದರಲ್ಲಿ ಇದುವರೆಗೂ ಕೇವಲ ಏಳು ಲಕ್ಷ ಮಾತ್ರ ಖರ್ಚಾಗಿದೆ. ಇದನ್ನು ನೋಡಿದರೆ ಈಗಿನ ಸರ್ಕಾರ ಯಾವ ರೀತಿ, ಎಷ್ಟು ಮಟ್ಟಿಗೆ ಉತ್ಸಾಹಪೂರ್ವಕವಾಗಿ ಕೆಲಸಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ, ಒಂದು ಮನೆಯಲ್ಲಿ ಮೂರು ಜನರಿದ್ದು ಅವರಲ್ಲಿ ಒಬ್ಬನಿಗೆ ಖಾಯಿಲೆ ಬಂದರೂ ಹೇಗೆ ಮನೆಯೇ ಅವ್ಯವಸ್ಥೆಯಲ್ಲಿರುತ್ತದೆಯೋ ಹಾಗೆಯೇ ದೇಶದಲ್ಲಿ ನಿಮ್ನ ವರ್ಗದವರು ಎಲ್ಲಿಯವರೆಗೂ ಹಿಂದುಳಿದಿರುತ್ತಾರೋ ಅಲ್ಲಿಯವರೆಗೂ ಅವರ ಪರಿಣಾಮವಾಗಿ ಮಿಕ್ಕ ಇತರರೂ ಮುಂದುವರಿಯಲು ಕಷ್ಟವಾಗುತ್ತದೆ. ಸರ್ಕಾರದಲ್ಲಿ ಪ್ರತಿಯೊಬ್ಬರಿಗೂ ಸರ್ಕಾರದ ಆಗುಹೋಗುಗಳು, ಸರ್ಕಾರದ ಸುಖ ಸೌಲಭ್ಯಗಳು ದೊರಕುವಂತಾಗಬೇಕು. ಆಗಲೇ ಸಮಾಜದ ಸುಧಾರಣೆಯಾಯಿತೆಂದು ಹೇಳಬಹುದು. ನಿಮ್ನ ತರಗತಿಯವರಿಗೆ ಸರಿಯಾದ ಏರ್ಪಾಡುಗಳು, ಸಹಾಯ ಸೌಲಭ್ಯಗಳು ದೊರೆಯುತ್ತಿಲ್ಲವೆಂದು ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದರು. ಸರ್ಕಾರದವರು ದೊರೆಯುತ್ತಿದೆಯೆಂದು ಉತ್ತರಕೊಟ್ಟರು. ಆದರೆ ವಾಸ್ತವವಾಗಿ ಅವರಿಗೆ ಬಹಳ ಕಡಮೆ ಸಹಾಯ ದೊರೆಯುತ್ತಿದೆಯೆಂದು ಹೇಳಿದರೆ ತಪ್ಪಿಲ್ಲ.

ರೋಡ್ ಟ್ರಾನ್ಸ್‌ಪೋರ್ಟಿನ ವಿಚಾರದಲ್ಲಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಯಾವ ಸೂಚನೆಯನ್ನೂ ಕೊಟ್ಟಹಾಗೆ ಕಾಣುತ್ತಿಲ್ಲ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರೈವೇಟ್ ಬಸ್ಸುಗಳನ್ನೆಲ್ಲಾ ನಿಲ್ಲಿಸಿ, ಹಾಲಿ ಮೈಸೂರಿನಿಂದ ನಂಜನಗೂಡಿನ ಕಡೆಗೆ ರೋಡ್‌ಟ್ರಾನ್ಸ್‌ಪೋರ್ಟ್ ಬಸ್ಸನ್ನು ಮನಾಪಲಿ ಮಾಡಿಕೊಂಡು ಓಡಿಸುತ್ತಿದ್ದಾರೆ. ಇದರಿಂದ ಗ್ರಾಮಾಂತರಗಳ ಕಡೆ ಸಂಚಾರಕ್ಕೆ ಎಷ್ಟು ತೊಂದರೆಯಾಗಿದೆಯೆಂದು ಹೇಳುವಹಾಗಿಲ್ಲ. ಖಾಸಗಿ ಬಸ್ಸುಗಳವರನ್ನು ತಪ್ಪಿಸುವುದರಿಂದ ಅನೇಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಸ್ಥಾನಾದ್ಯಂತ ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸ್ಸುಗಳನ್ನು ಇನ್ನೂ ಬಹಳವಾಗಿ ಹೆಚ್ಚಿಸಬೇಕು. ಇದಕ್ಕೆ ದುಡ್ಡಿಲ್ಲದೆ ಹೋದರೆ ನಾನೊಂದು ಸಲಹೆ ಕೊಡುತ್ತೇನೆ. ಈಗಿನ

ತಕ್ಕ ನಾನಾ ಬಸ್ ಮಾಲೀಕರುಗಳನ್ನೆಲ್ಲಾ ಸೇರಿಸಿ ಒಂದು ಕಾರ್ಪೊರೇಷನ್ ಮಾಡಿ ಅದರಲ್ಲಿ ಬಸ್ ಮಾಲೀಕರುಗಳು ಹಣವನ್ನು ಹಾಕುವುದಕ್ಕೆ ಅವಕಾಶಕೊಟ್ಟು ಷೇರ್ ಹೋಲ್ಡರುಗಳನ್ನಾಗಿ ಮಾಡಿ, ಸರ್ಕಾರಕ್ಕೆ ಬರುವ ಉತ್ಪತ್ತಿಯಲ್ಲಿ ಅವರಿಗೂ ಒಂದು ಡಿವಿಡೆಂಡ್ ಕೊಡುವಂತೆ ಮಾಡಿದರೆ ಒಂದೇ ಸಾರಿ ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಆ ಮೇಲೆ, ಪಾನ ನಿರೋಧದ ವಿಚಾರವಾಗಿ ನಿಧಾನವಾಗಿ ಹೋಗಬೇಕೆಂದ ಹೇಳುತ್ತಿದ್ದಾರೆ. ಇದರಿಂದ ತಾವೇ ಕಳ್ಳಭಟ್ಟಿ ವ್ಯಾಪಾರಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆದ್ದರಿಂದ ತಾವು ಪಾನ ನಿರೋಧವನ್ನು ಇಟ್ಟುಕೊಳ್ಳಬೇಕೆಂದಿದ್ದರೆ ಸಂಸ್ಥಾನಾದ್ಯಂತ ಜಾರಿಗೆ ತನ್ನಿ; ಇಲ್ಲದಿದ್ದರೆ ಪೂರ್ತಿ scrap ಮಾಡಿಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಡಿ. ಆರ್. ಕರಿಗೌಡ (ಹಾಸನ).—ಅಧ್ಯಕ್ಷರೇ' ಈ ಅಭಿನಂದನಾ ನಿರ್ಣಯದಮೇಲೆ ವಿರೋಧಪಕ್ಷದವರು ಇದುವರೆಗೂ ಮಾತನಾಡಿದುದನ್ನು ನೋಡಿದರೆ, ಅವರು ಬಹುಶಃ ವಿರೋಧಮಾಡುವುದಕ್ಕೆ ಮಾತನಾಡಿದ್ದಾರೆಯೇ ಹೊರತು ಮತ್ತೇನೂ ಅಲ್ಲ. ಸರ್ಕಾರದವರು ಮಾಡಿರುವುದಕ್ಕೆ ಕೃತಜ್ಞತೆ ತೋರಿಸುವುದನ್ನು ಬಿಟ್ಟು, ಸುಮ್ಮನೆ ವಿರೋಧಮಾಡಿ ವಾದಮಾಡಬೇಕು ಎಂದು ವಾದಮಾಡಿದ್ದಾರೆ ಎಂದು ಹೇಳಿದರೆ ತಪ್ಪಲ್ಲ. ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ಶ್ರೀಮಾನ್ ಗೋಪಾಲಗೌಡರೂ ಕಾಂಗ್ರೆಸ್ಸಿನವರು ಏನೂ ಮಾಡಿಲ್ಲ, ಜನತೆಗೆ ಏನೇನೂ ಪ್ರಯೋಜನವಾಗಿಲ್ಲ ಎಂದು ಹೇಳಿದರು. ಅವರು ದಯವಿಟ್ಟು ಬೌರಿಂಗ್ ಪೇಟೆ ಮತ್ತು ನಾಗಮಂಗಲ ಚುನಾವಣೆಗಳ ಪರಿಣಾಮವನ್ನು ನೋಡಿಯಾದರೂ ಬುದ್ಧಿ ಕಲಿತುಕೊಳ್ಳಲಿ ಎಂದು ಹೇಳುತ್ತೇನೆ. ಜನರು ನಮ್ಮ ಕೆಲಸವನ್ನು ಯಾವರೀತಿ ಮೆಚ್ಚಿದ್ದಾರೆಂಬುದನ್ನು ತಿಳಿದುಕೊಳ್ಳಬಹುದು. ನಾನು ಇಷ್ಟು ಹೇಳಬಲ್ಲೆ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬರುವ ಮುನ್ನ ಏನೇನು ಹೇಳುತ್ತಿದ್ದರೋ ಅದನ್ನು ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಲಿ. ಮೊದಲನೆಯದಾಗಿ ಕಂಟ್ರೋಲನ್ನು ತೆಗೆಯುತ್ತೇವೆಂದು ಹೇಳಿದ್ದರು. ಈಗಾಗಲೇ ಮುಕ್ಕಾಲುಮೂರುವೀಸ ಪಾಲು ಕಂಟ್ರೋಲನ್ನು ತೆಗೆದಿದ್ದಾರೆ. ರಾಗಿಯ ಮೇಲೆ ಈಗ ಹತೋಟಿಯಿಲ್ಲ. ಕಾಲುಭಾಗ ಅಂದರೆ ಭತ್ತದಮೇಲೆ ಮಾತ್ರ ಹತೋಟಿಯಿದೆ, ಅಷ್ಟೆ. ಅದೂ ಹೋಗಬೇಕೆಂದರೆ ಭಗವಂತನು ಕಣ್ಣುಬಿಟ್ಟು ನಮ್ಮ ಮೇಲೆ ಕೃಪೆಮಾಡಬೇಕು ಅಷ್ಟೆ.

ಆ ಮೇಲೆ, ಎರಡನೆಯದಾಗಿ ಹಿಂದಿನಿಂದಲೂ ನಾವೆಲ್ಲಾ ಹೇಳುತ್ತಿದ್ದೆವು—ನೀವೂ ಹೇಳುತ್ತಿದ್ದಿರಿ—ನಮ್ಮ ವಿದ್ಯಾಭ್ಯಾಸ ಕ್ರಮ ಸರಿಯಲ್ಲ, ದೇಶದಲ್ಲಿರುವವರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡುತ್ತಿಲ್ಲ ಎಂದು. ಈ ಬಗ್ಗೆ ನಮ್ಮ ಸರ್ಕಾರದವರು ವರ್ಷೇ ವರ್ಷೇ 40-50 ಲಕ್ಷ ರೂಪಾಯಿಗಳನ್ನು ಹೆಚ್ಚು ಹೆಚ್ಚಿಗೆ ಕೊಡುತ್ತಾ ಬಂದು ವಿದ್ಯಾಭ್ಯಾಸ ಕ್ರಮವನ್ನೇ ಬದಲಾಯಿಸಿರುವುದನ್ನು ರಿಫಾರಮ್ಸ್ ಕಮಿಟಿಯವರು ಕೂಡ ಉಲ್ಲೇಖಿಸಿದ್ದಾರೆ. ಅದನ್ನು ನೋಡಿದರೇನೇ ವಿದ್ಯಾಭ್ಯಾಸದ ವಿಷಯದಲ್ಲಿ ಏನೇನು ಮಾಡಿದ್ದಾರೆಂಬುದು ಗೊತ್ತಾಗುತ್ತದೆ.

ಕುಡಿಯುವ ನೀರಿಗೆ ಸಾಕಾದಷ್ಟು ಅವಕಾಶ ಮಾಡಿಕೊಟ್ಟಿಲ್ಲ, ಹಳ್ಳಿಗಳ ಜೀವನ ಬಹಳ ಕಷ್ಟಮಯವಾಗಿದೆಯೆಂದು ಹೇಳಿದರು. ಇವುಗಳ ವಿಚಾರದಲ್ಲಿ ಅನುಕೂಲ ಮಾಡಿಕೊಡಬೇಕೆಂದಿದ್ದರೆ ನಿಜವಾಗಿಯೂ ನಿಮ್ಮಗಳ ಕಾಲದ ಮಂತ್ರಿತ್ವದಲ್ಲಿ ಬಹಳ ಸುಲಭವಾಗಿ ಬೇಕಾದಷ್ಟು ಮಾಡಬಹುದಾಗಿತ್ತು. ಅಂಥ ಕಾಲದಲ್ಲಿ ಮಾಡಲಿಲ್ಲ, ಈಗ ಕಷ್ಟಕಾಲ. ಅಂಥದರಲ್ಲೂ ನಮ್ಮ ಮಾನ್ಯ ಮಂತ್ರಿಗಳು ಮೊನ್ನೆತಾನೆ ಹಾಸನಕ್ಕೆ ಬಂದಿದ್ದಾಗ ಅಲ್ಲಿ ನೀರಿನ ಏರ್ಪಾಡು ಸಮರ್ಪಕವಾಗಿಲ್ಲವೆಂದು ಹೇಳಿ ತಕ್ಷಣ ಎರಡುಲಕ್ಷ ರೂಪಾಯಿಗಳನ್ನೂ ಕೆರೆಗಳ ರಿಪೇರಿಗಾಗಿ ಆರುಲಕ್ಷ ರೂಪಾಯಿಗಳನ್ನೂ ಕೂಡಲೇ ಮಂಜೂರುಮಾಡಿಕೊಟ್ಟರು. ಇದರಿಂದಲೇ ಗೊತ್ತಾಗುತ್ತದೆ ನಮ್ಮ ಮಂತ್ರಿಗಳು ಎಷ್ಟುಮಟ್ಟಿಗೆ ಜನರ ಕಷ್ಟ ಸುಖಗಳ ಕಡೆಗೆ ಗಮನ ಕೊಡುತ್ತಿದ್ದಾರೆ ಎಂಬುದು. ಹೀಗಿದ್ದರೂ ತಾವುಗಳು ಆಕ್ರೋಶಕ್ಕಾಗಿ ಆಕ್ರೋಶ ತೋರಿಸುತ್ತಿದ್ದರೆ ನಾವು ಒಪ್ಪುವುದಕ್ಕಾಗುವುದಿಲ್ಲ.

ಆ ಮೇಲೆ, ಶ್ರೀಮನ್ಮಹಾರಾಜರವರು ಪಾಂಚವಾರ್ಷಿಕ ಯೋಜನೆಯ ಸಂಬಂಧವಾಗಿ ಹೇಳುತ್ತಾ, ಇದಕ್ಕೆ ಎಲ್ಲರೂ ತಮ್ಮಗಳ ಸಹಕಾರವನ್ನು ನೀಡಬೇಕೆಂದು ಕೇಳಿದ್ದಾರೆ. ಈ ಪಾಂಚವಾರ್ಷಿಕ ಯೋಜನೆಯನ್ನು ಮಾಡಿರುವುದು ಜನಸಾಮಾನ್ಯರ ಅನುಕೂಲಕ್ಕಾಗಿ. ಅದರಲ್ಲೂ ಹಳ್ಳಿಗಳ ಕಡೆ ವ್ಯವಸಾಯವನ್ನು ಅಭಿವೃದ್ಧಿಪಡಿಸಿದರೆ ದೇಶಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ಈ ಯೋಜನೆಗೆ ಸಹಾಯಮಾಡಿ ಎಂದು ಕೇಳುತ್ತಿರುವಾಗ, ನೀವುಗಳು ಸುಮ್ಮನೆ ಮಾತಿಗೋಸ್ಕರ, ಈ ಯೋಜನೆಯು ಪ್ರಯೋಜನಕಾರಿಯೇ, ಇದರಿಂದ ದೇಶಕ್ಕೆ ಅನುಕೂಲವಾಗುತ್ತದೆಯೇ ಎಂದು ಅನುಮಾನದಲ್ಲಿಯೇ ನಿಂತಿದ್ದರೆ ಏನೂ ಕಾರ್ಯಸಾಧನೆಯಾದಂತಾಗುವುದಿಲ್ಲ. ಇಂಡಿಯಾದೇಶದಿಂದ ಇಂಗ್ಲೀಷಿನವರು ಎಂದಿಗೂ ಬಿಟ್ಟುಹೋಗುವುದಿಲ್ಲ ಎಂದು ಹೇಳಿಕೊಂಡು ಅನುಮಾನಪಟ್ಟುಕೊಂಡು ನಾವು ಏನೂ ಪ್ರಯತ್ನಪಡದೆ ಅನುಮಾನದಲ್ಲೇ ಸುಮ್ಮನೆ ಕುಳಿತಿದ್ದರೆ ಅವರು ಹೋಗುತ್ತಲೇ ಇರಲಿಲ್ಲ; ನಮಗೆ ಇಂದು ಸ್ವಾತಂತ್ರ್ಯವೂ ಬರುತ್ತಿರಲಿಲ್ಲ. ಅದೇರೀತಿ ಈ ವಿಚಾರದಲ್ಲಿ ಅನುಮಾನ ಮನೋಭಾವನೆಯನ್ನು ಬಿಟ್ಟು ಸಹಕಾರ ನೀಡಿರಿ, ಪ್ರಯತ್ನಶೀಲರಾಗಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಆ ಮೇಲೆ, ಈ ಸರ್ಕಾರದವರು ರೈತರಿಗೆ ಯಾವ ರೀತಿಯಲ್ಲೂ ದ್ರವ್ಯ ಸಹಾಯಮಾಡುತ್ತಿಲ್ಲವೆಂದು ಆಕ್ಷೇಪಿಸಿದರು. ಇತ್ತೀಚೆಗೆ ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳವರು ಬೇಕಾದಷ್ಟು ಸಾಲ ಕೊಡುತ್ತಿದ್ದಾರೆ. ಅದರಲ್ಲೂ ಈಚೆಗೆ ರಿಸರ್ವ್ ಬ್ಯಾಂಕಿನಿಂದ ಹಣ ತಂದು ಈ ಸೊಸೈಟಿಗಳ ಮೂಲಕ ರೈತರಿಗೆ ಕೊಡುವಂತೆ ಮಾಡಿದ್ದೇವೆಂದು ಮೊನ್ನೆತಾನೆ ನಡೆದ ಕೋ-ಆಪರೇಟಿವ್ ಸೊಸೈಟಿಗಳ ಕಾನ್‌ಫರೆನ್ಸ್‌ನಲ್ಲಿ ಸರ್ಕಾರದವರು ಅಪ್ಪಣೆಕೊಡಿಸಿದ್ದಾರೆ.

ಇದನ್ನೆಲ್ಲಾ ಯೋಚನೆಮಾಡಿ ಮಾಡಬೇಕಾದರೆ ಸ್ವಲ್ಪ ಕಾಲಾವಕಾಶ ಕೊಡಬೇಕು. ಎಲ್ಲವನ್ನೂ ಒಂದೇ ಸಲ ಮಾಡಬೇಕೆಂದರೆ ಯಾರಿಗೂ ಸಾಧ್ಯವಿಲ್ಲ. ನಿಜವಾಗಿಯೂ ಈ ಮಂತ್ರಿಮಂಡಲ ಬಂದಮೇಲೆ ಬಹಳ ಕೆಲಸ ನಡೆದಿದೆ ಎಂದು ಅನೇಕರು ಹೊರಗಡೆ ಹೇಳುತ್ತಿದ್ದಾರೆ. ಆದರೆ ಅವರೇ, ಈ ಸಭೆಯಲ್ಲಿ ಮಾತ್ರ, ಸುಮ್ಮನೆ ವಿರೋಧಮಾಡಲು ಹೀಗೆ ಹೇಳುತ್ತಿದ್ದಾರೆ. ರೆವಿನ್ಯೂ ಸಚಿವರ ವಿಷಯದಲ್ಲಿ, ಜಮೀನನ್ನು ದೊಡ್ಡ ದೊಡ್ಡವರಿಗೆ ಮಾತ್ರ ಕೊಟ್ಟಿದ್ದಾರೆಂದು ಹೇಳಿದರು. ನನಗೆ ತಿಳಿದಿರುವಹಾಗೆ, ದೊಡ್ಡ ದೊಡ್ಡವರಿಗೆ ಜಮೀನನ್ನು ಕೊಡಲೇಬಾರದೆಂದು ಫೈಲುಗಳ ಮೇಲೆ ಅವರು ಬರೆದಿದ್ದಾರೆ. ಹಾಗೆ ದೊಡ್ಡವರಿಗೆ ಕೊಟ್ಟಿದ್ದರೆ, ಯಾರಿಗೆ ಕೊಟ್ಟಿದ್ದಾರೆಂಬುದನ್ನು ಹೇಳಬಹುದಾಗಿತ್ತು, ಅಥವಾ ಪ್ರಶ್ನೆಯ ರೂಪದಲ್ಲಿ ತರಬಹುದಾಗಿತ್ತು ಇದೊಂದೂ ಇಲ್ಲದೇ ಇರುವಾಗ ಯಾರಿಗೋ ಕೊಟ್ಟರೆಂದು ಹೇಳಿ

(ಶ್ರೀ ಡಿ. ಆರ್. ಕರಿಗೌಡ.)

ದರೆ ಪ್ರಯೋಜನವಿಲ್ಲ. ಈಚೆಗೆ ಬತ್ತದ ಧಾರಣೆಯನ್ನು ಹೆಚ್ಚುಮಾಡಿ ಅದರಿಂದ ರೈತರನ್ನು ಉದ್ಧಾರ ಮಾಡಿದ್ದಾರೆ. ಹಿಂದೆ ಏನು ಆಕ್ಷೇಪಣೆಗಳನ್ನು ಮಾಡಿದರು, ಈಗ ಏನು ನಡೆಯುತ್ತಿದೆ, ಎಂಬುದನ್ನೆಲ್ಲಾ ನೋಡಿ ತಿಳಿದುಕೊಂಡು, ಮುಂದೆ ಇನ್ನೂ ಹೆಚ್ಚಿನ ಅನುಭವ ಹೊಂದಿ, ಇನ್ನೂ ಚೆನ್ನಾಗಿ ದೇಶಕ್ಕೆ ಸೇವೆ ಸಲ್ಲಿಸುತ್ತಾರೆ. ಆದುದರಿಂದ ಎಲ್ಲರೂ ಪೂರ್ಣ ಸಹಕಾರ ಕೊಡಬೇಕೆಂದು ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆ ರೀತಿ ಸಹಕಾರ ಕೊಡುವುದು ಅವಶ್ಯಕವೆಂದು ನಾನು ಪ್ರಾರ್ಥಿಸುತ್ತೇನೆ. ಶ್ರೀಮನ್ಮಹಾರಾಜರವರು ಇಂಥ ಭಾಷಣ ಕೊಟ್ಟಿರುವುದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸುವುದು ನಮ್ಮ ಕರ್ತವ್ಯ. ತಿದ್ದುಪಡಿಗಳನ್ನು ವಾಪಸು ತೆಗೆದುಕೊಂಡು ನಿರ್ಣಯಕ್ಕೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri A. G. RAMACHANDRA RAO (Leader of the House).—Sir, for full one or one and a half day, allegations have been made and representations have been urged. We have not yet come into grips over specific issues. I do not think the House expects me to deal with all the issues raised—they are about a hundred—in the short space of a few minutes. It is neither desirable nor proper to take up all these representations in general. Further, with these issues which have been raised, we shall get into grips during the Budget discussion, and discussion on the Cut-motions and on the Resolutions, where we can discuss at length all the pros and cons and with all the data and come to specific conclusions. Therefore, I wish to confine myself to answering some vital questions which have been raised. There are only a few—about half a dozen.

My Hon'ble friend, Sri Pattabhi Raman, raised a very pertinent constitutional issue under Section 323 of the Indian Constitution. I admit we should have placed the report of the working of the Public Service Commission with our own explanation. But I wish to submit that it was not the fault of the Government. There was some doubt regarding the procedure to be adopted and the Public Service Commission wanted a ruling from the Government of India. Very recently, just a couple of days ago, we have received the ruling and we are transmitting it to the Commission and immediately afterwards we are going to place the report on the table of the House. I assure the House that the Government is also very vigilant in meticulously conforming to the transactions of the House both in letter and spirit of the Constitution.

Next is the question of the dispersal of industries. That is also pertinent. As could be seen during these couple of years, Government has kept the view that, as far as possible, industries should be started not only in Bangalore but also in mofussil districts. That has always been kept in view and I may assure you we will conform to that.

Next with regard to District Boards and re-organization of the Local Self-Government on the basis of decentralization, I agree with the views that have been expressed. This has been the constant endeavour of not only this Government but also of the previous Government. As could be seen from the District Boards and Village Panchayets Regulations, greater powers have been added to the District Boards and also to the Village Panchayets. Their resources have been augmented. But it cannot be done all on a day. One of the reasons for the delay in implementing that Act was the opinion expressed by many regarding the constitution of the Taluk Boards. It was felt that, as a first step, the Distric Boards might be made to work witl these enhanced powers and greate resources and thereafter further decen tralisation could be thought of at th proper time.

Sir, I would like to speak on tw points—specific issues—regarding De pressed Classes and Samskriti Pracha Regarding Depressed Classes, I ma assure the House that as far as poss bl no amount will be made to lapse. Th figures that have been given are not u to date. When you get the report f the full year, you will be pleased to se that money and grants have bee granted freely. The next point that w raised was the statement that justice not being done to Depressed Classe To the point that that community h not been fully represented in the Ci List, there is no basis. Civil List is n the only basis. At every stage appoi ments were made, grants were giv

and scholarships were freely given. In every act of ours, I may speak with confidence on behalf of the Government, the Depressed Classes have been kept in view and as much as possible is being done on their behalf. Many of the members of that community who have come before us with their problems have gone back satisfied. Therefore mere allegations............

Sri B. RACHAIAH.—Public Services?

Sri A. G. RAMACHANDRA RAO.—Even there also. Therefore, there is absolutely no evidence regarding the neglect of the Government regarding e Depressed Classes.

Next, about Samskriti Prachar; I am afraid the discussions have not gone on quite properly. To me, it means an enlargement o' the mind, a refinement of the emotion, a bigger heart, a devotion to truth and a spirit of sacrifice and other qualities along with that, and the cultivation of all these virtues. Even to help the poor and hungry men, unless we have got that spirit, we cannot do much. Therefore, this Samskriti Prachar need not be confounded or confused with revivalism or sectarianism. Gandhiji, that great man, is the flower of Indian culture. If anything we want to do by way of spreading Samskriti, it is to bring up more Gandhis if possible. It was he that made the Ramayana and the Geetha popular words in every home. It is on that basis we are going to work. I hope and believe, Sir, that nobody would decline to subscribe to this view. Further, in the whole world, there is a cry for what is called moral re-armament. What is being done elsewhere, we are welcoming with open arms. In Bangalore City, for welcoming the Moral Re-armament Association, we have spent a sum of thirty thousand rupees for a couple of days. What is it that we are trying to do? Our Budget comes to twenty crores. Twenty crores is two thousand lakhs. We have only said—allow us to spend a few lakhs. But if you think that this is too much, it is in your hands to refuse. If you do not want it, we have no objection to drop it.

Further, there is the Educational Reforms Committee. As all of you know, it is a committee composed of the best talents of the country—all of them eminent men. They say that the present decadence is due to want of moral instruction in schools and colleges. They have made it an item and recommended it for all those who cannot go to schools and colleges. Is it not necessary that we should spread this culture which is being carried on and which has been the pride and ambition of India to carry on and cherish? I do not want to comment further.

A point was made regarding fiscal integration whether more amounts should not be got from the Centre. I wish to submit that, under the Constitution which we are working, we cannot seek revision within five years. It can only be at the end of five years and further only on the recommendation of the President. Though we are not entirly satisfied with the amounts we get, I must also express that the Government of India has been trying to do its best and in the case of Mysore, perhaps, we have not got much reason to complain if we only compare with what other States have got.

Regarding taxation, my friend put it as pin-pricks. I congratulate the past Governments and the previous Government for all the social services that they did. In fact the Fiscal Commission which recently visited Mysore have expressed appreciation of what is being done in Mysore. They have said that the best social service is done in Mysore, and that it is wide-spread and that no where else in India it is so widespread. That credit is due to the past and previous Governments. But, at the same time, if a mistake has happened, it is for us to correct and go forward. What is the mistake? While the item of social service is scheduled to be worked out alongside with it, permanent sources will have to be found. It is perhaps owing to the reserves that had been built, they did not provide for it as they thought they might give out of it. It now appears that we must find permanent sources.

Sri J. MOHAMED IMAM.—Who are "they"?

Sri A. G. RAMACHANDRA RAO.—Previous Governments, including you.

Sri K. PATTABHIRAMAN.—May I just seek a clarification? I have made a specific suggestion yesterday that the Government might be pleased to constitute a committee to go into the entire question. Will that specific question be acceptable to Government?

Sri A. G. RAMACHANDRA RAO.—Personally speaking, it is acceptable to me.

Therefore, in order to consolidate the work that has been done and stabilise and go forward, the time has come. For that also a very sound suggestion has been offered by my friend Sri Pattabhiraman to constitute a committee. I believe it is one of the wisest suggestions coming so far as I am concerned.

Sri J. MOHAMED IMAM.—Four years ago this suggestion was made. Every year it is being made.

Sri A. G. RAMACHANDRA RAO.—I will certainly put it before the Cabinet as well as before the Chief Minister who is expected to be here in a couple of days.

Only two more points. A point was made regarding the Five-Years Plan. Well, Russia had a Five-Years Plan; perhaps Germany, Italy and I do not know if any other country had any plan. (An Hon'ble Member: America) I do not know. Only a few countries had it. Just now China is having it. It is difficult for a democratic State to have the plan implemented. The biggest democratic country that is attempting it is India. Even here I want Hon'ble Members to compare how things are going on in Pakistan, in Burma, in Indonesia which got freedom. What is it they have done? In many countries they have not even a Constitution to their credit. It is a credit to the genius of the country that within four years we have formulated a great Constitution and we are trying to implement it in a democratic way. One of my friends said that he was not consulted. I was not also consulted. There were better representatives of parties and they were consulted as far as possible. It is an All-India plan, and, as could be seen, they have given the first, prime place for agriculture. Out of two thousand and odd crores, more than 50 per cent is allotted to it. I request every one of you to go through the plan to see what has been done. If you are not satisfied, I reqest you to give an alternative. Taking a point here and there and criticising is not the proper way. I am sure the best that is possible has been done. That is why the Rajpramukh has been good enough to request for the co-operation of all the members of this House.

Lastly, one serious imputation was made by Sri Mohamed Imam about partisanship, nepotism and all that. I for one, on behalf of Government, say that it ought not to be there.

Sri J. MOHAMED IMAM.—But it is there.

Sri A. G. RAMACHANDRA RAO.—It is there because when you were in office it was there to a greater degree. I do not want to enter into that. It is a legacy of past Governments. So far as the Government at present is concerned, I wish to assure this House that you are at liberty to correct us if we go wrong; we will try our best that neither partisanship nor nepotism will enter into the affairs of the Government. If we go wrong it is in your hands to correct us.

With regard to other allegations, we shall take them up at the time of the Budget discussion.

Thank you.

***ಶ್ರೀ ಟಿ. ಸಿದ್ದಲಿಂಗಯ್ಯ (ದೊಡ್ಡಬಳ್ಳಾಪುರ).**—ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ಶ್ರೀ ಮಹಮದ್ ಇಮಾಂರವರನ್ನೂ, ಶ್ರೀ ಕೆ. ಪಟ್ಟಾಭಿರಾಮನ್‌ರವರನ್ನೂ ಮತ್ತು ಶ್ರೀ ಎಂ. ಲಿಂಗಣ್ಣನವರನ್ನೂ ಅವರು ಸೂಚಿಸಿರತಕ್ಕ ತಿದ್ದುಪಡಿ ಸೂಚನೆಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಲು ಅವರನ್ನು ಪ್ರಾರ್ಥಿಸುತ್ತೇನೆ.

ಈ ಸಂದರ್ಭದಲ್ಲಿ ಶ್ರೀಮಾನ್ ಬಿ. ಹುಚ್ಚೇಗೌಡರು ಶ್ರೀಮನ್ ಮಹಾರಾಜರವರ ಹೆಸರನ್ನು ಬಳಸಿಕೊಂಡು, ಅಥವಾ ಅವರ ಹೆಸರನ್ನು ಹೇಳಿಕೊಂಡು ನೀವು ಒಂದು ಸಪೋರ್ಟನ್ನು ಪಡೆಯಬೇಕೆಂಬ ಇಚ್ಛೆಯಿಂದ ಹೀಗೆಲ್ಲ ಮಾಡುತ್ತಿದ್ದೀರಿ ಎಂಬ ಅರ್ಥ ಬರುವಂತೆ ಮಾತನಾಡಿದರು. ಆದರೆ ಅಂಥ ಯಾವ ಅಭಿಪ್ರಾಯವೂ ನಮಗಿರುವುದಿಲ್ಲ. ನಾವು ಆ ರೀತಿಯಾಗಿ ಮಾಡಿಯೂ ಇಲ್ಲ. ಆದರೆ ನಾನು ಸೂಚಿಸಿದ್ದ ಅಭಿಪ್ರಾಯವೇನೆಂದರೆ: ನಮ್ಮಲ್ಲಿ ಹಲ ಕೆಲವರಿಗೆ ಕೆಲ ಕೆಲವು ಭಿನ್ನಾಭಿಪ್ರಾಯ

---

*Asterisk indicates that this speech has not been revised by the Member concerned.

ಗಳಿರಬಹುದು. ಅಂಥವುಗಳೇನಾದರೂ ಇದ್ದಲ್ಲಿ ನಾವುಗಳೆಲ್ಲರೂ ಅವುಗಳನ್ನು ಇಲ್ಲಿಯೇ ಸರಿಪಡಿಸಿಕೊಳ್ಳೋಣ, ಅದಕ್ಕೆ ಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡೋಣವೆಂದು ಹೇಳಿದ್ದೇನೆ. ಅಷ್ಟೇ ಶಿವಾಯಿ ನಾನು ಮತ್ತೊಬ್ಬರ ಹೆಸರನ್ನು ಬಳಸಿಕೊಂಡು ಒಂದು ಸಪೋರ್ಟ್ ಪಡೆಯಬೇಕೆಂಬ ಉದ್ದೇಶದಿಂದ ಆ ರೀತಿ ಹೇಳಲಿಲ್ಲ. ಈಗಾಗಲೇ ಸಭೆಯ ಮುಂದೆ ಮಾನ್ಯ ಸದಸ್ಯರು ಮಂಡಿಸಿರತಕ್ಕ ತಿದ್ದುಪಡಿ ಸೂಚನೆಗಳ ಬಗ್ಗೆ ಮಾನ್ಯ ಸಭಾನಾಯಕರು ಸರಿಯಾದ ಉತ್ತರವನ್ನು ಕೊಟ್ಟಿರುವುದರಿಂದಲೂ ಮತ್ತು ಈ ಬಗ್ಗೆ ಹೆಚ್ಚಿನ ಚರ್ಚೆಗಳನ್ನು ನಡೆಸುವುದಕ್ಕೆ ಇನ್ನೂ ಮುಂದೆ ವಿಶೇಷ ಅವಕಾಶಗಳಿರುವುದರಿಂದಲೂ ನಾನೀಗ ಸದಸ್ಯರು ಮಾಡಿರತಕ್ಕ ಟೀಕೆಗಳಿಗೆ ದೀರ್ಘವಾದ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನಪಡುವುದಿಲ್ಲ. ಆದರೆ ಶ್ರೀಮಾನ್ ಲಿಂಗಣ್ಣನವರ ತಿದ್ದುಪಡಿಯ ವಿಚಾರದಲ್ಲಿ ಮಾತ್ರ ಒಂದು ಮಾತನ್ನು ಹೇಳಬಯಸುತ್ತೇನೆ.

ಈಗ ಸರ್ಕಾರದವರು ಸಂಸ್ಕೃತಿ ಪ್ರಸಾರಕ್ಕಾಗಿ ಮಾಡತಕ್ಕ ಅಥವಾ ಮಾಡಬೇಕೆಂದಿರತಕ್ಕ ಖರ್ಚನ್ನು ಉಳಿತಾಯ ಮಾಡಬೇಕೆಂಬ ದೃಷ್ಟಿಯಿಂದ ಈ ಪ್ರಚಾರ ಕಾರ್ಯವನ್ನು ಅಡಲ್ಟ್ ಲಿಟರೆಸಿ ಸಂಸ್ಥೆಯವರಿಗೇ ವಹಿಸಬಹುದೆಂದು ಒಂದು ಸೂಚನೆ ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ವಿದ್ಯೆ ಎಲ್ಲರಿಗೂ ಬೇಕೇ ಬೇಕಾಗಿದೆ. ಅದಕ್ಕಾಗಿ ಸರ್ಕಾರ ಸುಮಾರು $3\frac{1}{2}$ ಕೋಟಿ ರೂಪಾಯಿಗಳವರೆಗೂ ಖರ್ಚುಮಾಡುತ್ತಿದೆ. ಅಂಥ $3\frac{1}{2}$ ಕೋಟಿ ರೂಪಾಯಿಗಳ ಖರ್ಚನ್ನು ಮಾಡುವುದರ ಉದ್ದೇಶ ಸಫಲವಾಗುವಂತೆ ಮಾಡಲು 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿರುವುದು ಅಂಥ ಅಪಾರವಾದ ಖರ್ಚೆಂದು ಭಾವಿಸುವುದಕ್ಕಾಗವುದಿಲ್ಲ. ನಾವು ಹುಡುಗರಾಗಿದ್ದಾಗ ಕಲಿತಿದ್ದನ್ನು ಈಗ ಸ್ವಲ್ಪಮಟ್ಟಿಗಾದರೂ ಜ್ಞಾಪಿಸಿಕೊಳ್ಳಬೇಕು ಎಂಬುದಾಗಿ ಪ್ರತಿಯೊಬ್ಬರಿಗೂ ಅನ್ನಿಸುತ್ತದೆ. ಅಂಥ ಒಂದು ಉದ್ದೇಶ ಈಡೇರಲು ಈ 5 ಲಕ್ಷವನ್ನು ಖರ್ಚುಮಾಡಬೇಕೆಂದು ಉದ್ದೇಶಿಸಲಾಗಿದೆ. ಈ ಪ್ರಸಾರದಿಂದ ಜನರು ''ರಾಮ, ಕೃಷ್ಣ'' ಅಥವಾ ''ಅಲ್ಲಾ, ಜೀಸಸ್'' ಹೆಸರುಗಳನ್ನು ಸ್ಮರಿಸಿದರೆ ಅವರವರ ಮನಸ್ಸಿಗೆ ಒಂದು ಆನಂದ, ಸಂತೋಷ ಉಂಟಾಗುತ್ತದೆ. ಜನರಿಗೆ ಇದರಿಂದ ಒಂದು ಉತ್ಸಾಹ ಉಂಟಾಗುತ್ತದೆ.

5-30 P.M.

ಈಗಲೂ ಹಳ್ಳಿಗಳ ಕಡೆ ಬೇಕಾದಷ್ಟು ಸಂಸ್ಕೃತಿಯಿದೆ; ಅಲ್ಲೇನೂ ಸಂಸ್ಕೃತಿ ಪ್ರಚಾರದ ಅವಶ್ಯಕತೆಯಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಹಳ್ಳಿಗಳ ಕಡೆ ಇದೆಯೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಬ್ರಿಟಿಷರು ರಾಜ್ಯವಾಳುತ್ತಿದ್ದ ಕಾಲದಲ್ಲಿ ಪರಕೀಯರ ಸಂಪರ್ಕದಿಂದ ನಮ್ಮ ಸಂಸ್ಕೃತಿ ಸ್ವಲ್ಪಮಟ್ಟಿಗೆ ಮಾಸಿಹೋಗಿದೆಯೆನ್ನಬಹುದು, ಅಷ್ಟೆ. ಸಿನಿಮಾ ಕತೆಗಳು, ಪ್ರಪಂಚದ ಆಸೆ, ದುರಾಶೆ, ಜಿದ್ದು ಮುಂತಾದುವುಗಳನ್ನು ಜಾಸ್ತಿಮಾಡುವ ಪುಸ್ತಕಗಳು ಈಚೀಚೆಗೆ ಜಾಸ್ತಿಯಾಗಿ ತಮ್ಮ ಪರಿಣಾಮವನ್ನು ಬೀರುತ್ತಿವೆ. ಆದಷ್ಟು ಮಟ್ಟಿಗೆ ಇವುಗಳನ್ನು ಕಡಮೆಮಾಡಿ ನಮ್ಮ ಜನರ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿದರೆ, ನಮ್ಮ ಜನರ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದರೆ, ನಮ್ಮ ದೇಶ ಉದ್ಧಾರವಾಗುತ್ತದೆ. ಜಪಾನ್ ಚೈನಾ ದೇಶಗಳ ಉದಾಹರಣೆಯನ್ನು ನೋಡಿ. ಆ ದೇಶಗಳೂ ಕೆಲವು ಕಾಲ ಅಮೆರಿಕಾ ದೇಶದವರ ಪ್ರಭಾವಕ್ಕೊಳಗಾಗಿದ್ದವು. ಈಚೆಗೆ ಅವರು ಹೊರಟು ಹೋದ ಮೇಲೆ ಜಪಾನ್, ಚೀನ ದೇಶದವರು ಅಮೆರಿಕಾ ದೇಶದ ಮೇರೆಯೇ ಕುಸ್ತಿಮಾಡ ಹೊರಟಿದ್ದಾರೆ. ಇದು ಹೇಗೆ ಸಾಧ್ಯವಾಯಿತು ? ಆ ದೇಶಗಳವರು ತಮ್ಮದೇ ಆದ ಒಂದು ಸಂಸ್ಕೃತಿಯನ್ನಿಟ್ಟುಕೊಂಡಿದ್ದರಿಂದ ಅವರಿಗೆ ಇಂದು ಇಂಥ ಶಕ್ತಿ ಬಂತು. ಆದ್ದರಿಂದ ಸಂಸ್ಕೃತಿ ಎನ್ನುವುದು ಅಂಥ ಶಕ್ತಿ ಕೊಡುತ್ತದೆ. ನಮ್ಮಲ್ಲಿಯೂ ಅಂಥ ಒಂದು ಸಂಸ್ಕೃತಿ ಇದೆ. ಅದನ್ನು ನಾವು ಪುನರುಜ್ಜೀವನಗೊಳಿಸಬೇಕು. ತಮಗೆಲ್ಲಾ ಗೊತ್ತಿರುವಂತೆ, ಮೊದಲು ಇಂಗ್ಲೀಷರಿದ್ದ ಕಾಲದಲ್ಲಿ ನಮಗೆ ಇಂಗ್ಲೀಷರ ಚರಿತ್ರೆಯನ್ನೇ ಯಾವಾಗಲೂ ಹೇಳಿಕೊಡುತ್ತಿದ್ದರೇ ಹೊರತು ನಮ್ಮ ದೇಶದ ಚರಿತ್ರೆಯನ್ನೇ ನಮಗೆ ಹೇಳಿಕೊಡುತ್ತಿರಲಿಲ್ಲ. ಈಚೆಗೆ, ಆ ರೀತಿಯಿರುವುದು ಸರಿಯಲ್ಲ, ನಮ್ಮ ಜನರು ನಮ್ಮ ಪೂರ್ವಿಕರ ಚರಿತ್ರೆ ಸಂಸ್ಕೃತಿಯನ್ನು ತಿಳಿದು, ಅವರನ್ನು ಮೆಚ್ಚಿ ದೇಶಾಭಿಮಾನ ಬೆಳೆಸಿಕೊಳ್ಳುವಂತಾಗಬೇಕೆಂದು ಈಗ ಹಿಂದೂದೇಶದ ಚರಿತ್ರೆಯನ್ನು ಹೇಳಿಕೊಡುತ್ತಿದೆ. ನಮ್ಮಲ್ಲಿಯೂ ಈಗ ಟಾಗೂರ್ ಕವಿಗಳನ್ನು ಮೆಚ್ಚಬೇಕಾದರೆ ಇಂಗ್ಲೆಂಡಿನವರು ಅವರ ಗುಣಗಳನ್ನು ಎತ್ತಿ ತೋರಿಸಬೇಕಾಯಿತು. ನಮ್ಮ ಉಪನಿಷತ್ತುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮ್ಯಾಕ್ಸ್ ಮುಲ್ಲರ್ ಮುಂತಾದ ಪಾಶ್ಚಿಮಾತ್ಯ ಪಂಡಿತರನ್ನು ನೋಡಬೇಕಾಗಿ ಬಂದಿದೆ. ಈ ರೀತಿ ನಮ್ಮಲ್ಲಿ ಸಂಸ್ಕೃತಿಯೇನೋ ಇದೆ; ಅದನ್ನು ಪ್ರಜ್ವಲನಮಾಡಬೇಕು. ಪ್ರತಿಯೊಬ್ಬರ ಹೃದಯದಲ್ಲಿಯೂ ಅದರ ಕಾಂಕ್ಷೆಯಿದೆ. ಆ ಶಕ್ತಿಯನ್ನು ಜಾಸ್ತಿಮಾಡಿಕೊಳ್ಳಬೇಕಾದರೆ ಇಂಥ ಒಂದು ಉದ್ಯಮದಲ್ಲಿ ತೊಡಗಬೇಕು. ಅದೇ ಸಂಸ್ಕೃತಿಪ್ರಸಾರದ ಉದ್ದೇಶ. ವಿದ್ಯಾಭ್ಯಾಸದಲ್ಲೇ ಇದೂ ಒಂದು ಭಾಗ ಎನ್ನಬಹುದು. ವಿದ್ಯಾಭ್ಯಾಸಕ್ಕಾಗಿ ನಾವು ಕೋಟಿ ಖರ್ಚುಮಾಡುತ್ತಿರುವಲ್ಲಿ ಇದಕ್ಕಾಗಿ ಹೆಚ್ಚಿಗೆ 5 ಲಕ್ಷ ಮಾತ್ರ ಕೇಳಿದ್ದೇವೆ, ಅಷ್ಟೆ. ಅಷ್ಟೂ ಬೇಡವೆಂದರೆ ಬಿಟ್ಟುಬಿಡೋಣ ಎಂದು ಲೀಡರ್‌ರವರೇ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸಂಸ್ಕೃತಿ ಪ್ರಸಾರವೆನ್ನುವುದೂ ಒಂದು ವಿಧದಲ್ಲಿ ವಿದ್ಯಾಭ್ಯಾಸದ ರಿಫಾರಂ ಎಂತಲೇ ಹೇಳಬಹುದು. ಅಂದ ಮಾತ್ರಕ್ಕೆ ನನಗೇನೂ ಇದರ ವಿಷಯದಲ್ಲಿ ಹುಚ್ಚು ಹಿಡಿದಿದೆ ಎಂದು ಭಾವಿಸಬೇಕಾಗಿಲ್ಲ. I am not mad after it. ಮೊನ್ನೆತಾನೆ, 2,069 ಕೋಟಿ ರೂಪಾಯಿಗಳ ನಮ್ಮ ಪಾಂಚವಾರ್ಷಿಕ ಯೋಜನೆ ಜಯಶಾಲಿಯಾಗಬೇಕಾದರೆ ಜನರಲ್ಲಿ ಉತ್ಸಾಹ, ಒಗ್ಗಟ್ಟು ಜಾಸ್ತಿ ಉಂಟಾಗಬೇಕು, ಇದು ನಮ್ಮ ದೇಶ, ಇದಕ್ಕಾಗಿ ನಾನು ಸೇವೆಮಾಡಬೇಕು ಎನ್ನುವ ಆಶೆ ಉತ್ಸಾಹ ಹುಟ್ಟಬೇಕಾದರೆ, ಜನರಲ್ಲಿ ದೇಶಾಭಿಮಾನ, ದೈವಭಕ್ತಿ ಹುಟ್ಟಬೇಕು ಎನ್ನುವ inspiring message ಗಳು ಬಂದಿವೆ. ಅಷ್ಟೇಕೆ, ಪಂಡಿತ್ ನೆಹ್ರೂರವರು ಮೊನ್ನೆ ದಾಮೋದರ್ ವ್ಯಾಲಿಯಲ್ಲಿ ಕೆಲಸ ನಡೆಯುವುದನ್ನು ನೋಡಹೋದಾಗ ಅಲ್ಲಿ ಕೆಲಸಮಾಡುವವರಿಗೆ ಕೊಟ್ಟ ಸಂದೇಶದ ಫಲ ಎಷ್ಟಾಯಿತೆಂಬುದನ್ನು ಹೇಳುತ್ತೇನೆ. ಅವರು ಕೂಲಿಗಾರರನ್ನುದ್ದೇಶಿಸಿ ಹೇಳಿದರು. ''ನೀವುಗಳು ಇಲ್ಲಿ ಏನೋ ತಾಮ್ರದ ಕಾಸಿಗಾಗಿ ಕೆಲಸಮಾಡುತ್ತಿರುವಿರೆಂದು ಭಾವಿಸಬೇಡಿ. ಒಂದು ಅಗಾಧ ಯೋಜನೆಯನ್ನು ನೀವು ಸಾಧಿಸುತ್ತಿರುವಿರಿ, ಲಕ್ಷಾಂತರ ಬಡ ಜನರ ಹಸಿವನ್ನು ನೀಗುವುದಕ್ಕಾಗಿ ನೀವು ಶ್ರಮಿಸುತ್ತಿರುವಿರಿ—ಎಂಬುದನ್ನು ಅರಿತು ಭಕ್ತಿಯಿಂದ ಕೆಲಸ ಮಾಡಿ. ಬರುವ ಕೂಲಿಯೇನೋ ಬಂದೇ ಬರುತ್ತದೆ. ಆದರೆ ಅದೇ ಮಾಡುವ ಕೆಲಸವನ್ನು ಭಕ್ತಿಯಿಂದ ಮಾಡಿದರೆ ಮನಸ್ಸಿಗೂ ಸಂತೋಷವಾಗುತ್ತದೆ, ಹೊಟ್ಟೆಗೂ ಕೂಳು ಸಿಕ್ಕುತ್ತದೆ'' ಎಂದು ಹುರಿ

(ಶ್ರೀ ಟಿ. ಸಿದ್ದಲಿಂಗಯ್ಯ.)

ದುಂಬಿಸಿದರು. ಇದರ ಪರಿಣಾಮವಾಗಿ ಅಲ್ಲಿ ಕೆಲಸಮಾಡುವ ಕೂಲಿಯವರಲ್ಲಿ ಈಚೆಗೆ ಹೆಚ್ಚಿನ ಉತ್ಸಾಹ ಕಂಡು ಬರುತ್ತಿದೆ ಎಂದು ಅಲ್ಲಿಂದ ಬಂದವರು ಹೇಳುತ್ತಾರೆ. ಆದ್ದರಿಂದ ಯಾವುದನ್ನೂ ಹೃದಯಪೂರ್ವಕವಾಗಿ ಮಾಡಬೇಕಾದರೆ, ಯಾವುದಾದರೂ ಒಂದು ಉತ್ತೇಜಕಶಕ್ತಿ ಬೇಕು; inspirationಬೇಕು. ಚರ್ಚಿಲರು ಯುದ್ಧಕಾಲದಲ್ಲಿ ಯಾವ ರೀತಿ ಜನರಲ್ಲಿ ಉತ್ಸಾಹವನ್ನು ತುಂಬುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಹಾಗೆ ಮಾಡದಿದ್ದಿದ್ದರೆ ಜನರೆಲ್ಲಾ ಹೆದರಿಕೊಂಡು ಕೊನೆಗೆ ಅನೇಕರು ರಾಜ್ಯವನ್ನೂ ಕಳೆದುಕೊಳ್ಳುತ್ತಿದ್ದರು. ಹೀಗೆ ಸಂಸ್ಕೃತಿ ಪ್ರಸಾರವೆನ್ನುವುದು ಮನುಷ್ಯನಿಗೆ ಒಂದು ಅವಶ್ಯಕವಾದ ವಿದ್ಯಾಭ್ಯಾಸ. ಶ್ರೀಮಾನ್ ಗೋಪಾಲಗೌಡರು ಇದನ್ನು ವಿರೋಧಮಾಡಿದರೆಂದು ನಾನು ಇಷ್ಟೆಲ್ಲಾ ಹೇಳುತ್ತಿಲ್ಲ. ನಿಜವಾಗಿಯೂ ಅವರನ್ನು ನೋಡಿದರೇನೇ ಸಂಸ್ಕೃತಿಯು ಮನುಷ್ಯನಲ್ಲಿ ಏನುಮಾರ್ಪಾಡು ಮಾಡಬಲ್ಲದು ಎಂದು ಗೊತ್ತಾಗುತ್ತದೆ. ಅವರು ಎಷ್ಟು cultured man ನೋಡಿ! ಯಾವ ರೀತಿ ಶಾಂತವಾಗಿ ಮಾತನಾಡುತ್ತಾರೆ! ಅವರು ಮಾತನಾಡುವಾಗ ಪ್ರತಿಯೊಬ್ಬರೂ ಕಿವಿಗೊಟ್ಟುಮನಗೊಟ್ಟು ಕೇಳಬೇಕೆನಿಸುತ್ತದೆ. ನಿಜವಾಗಿಯೂ ಅವರು ಸಂಸ್ಕೃತಿಯ Symbol ಎನ್ನಬೇಕು. ಅವರೇಕೋ ಹೊಟ್ಟೆ ಮೊದಲು ತುಂಬಿಕೊಳ್ಳಬೇಕು, ಹೊಟ್ಟೆಗೆ ಮೊದಲು ನೋಡಿಕೊಳ್ಳಬೇಕು ಎಂದರು. ಇದನ್ನು ಕೇಳಿ ನನಗೇಕೋ ತುಂಬ ನೋವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ನಾನು ಹಾಗೆ ಹೇಳಲಿಲ್ಲ.

ಶ್ರೀ ಟಿ. ಸಿದ್ದಲಿಂಗಯ್ಯ.—ಹಾಗಿದ್ದಮೇಲೆ ನಾನೂ ಆ ವಿಷಯ ಅಲ್ಲಿಗೇ ಬಿಟ್ಟು ಬಿಡುತ್ತೇನೆ. ಆ ಮೇಲೆ ಈ ಸಂಸ್ಕೃತಿ ಪ್ರಸಾರ ಬೇಕಾಗಿರುವುದು ಯಾರಿಗೆ ಎನ್ನುವ ಪ್ರಶ್ನೆಬಂತು. ಸಂಸ್ಕೃತಿ ಹಳ್ಳಿಗಾಡಿನಲ್ಲಿ, ಬಡ ಜನರಲ್ಲಿ ಇದ್ದೇ ಇದೆಯೆಂದು ಹೇಳಿದರು. ಒಪ್ಪುತ್ತೇನೆ, ಬಡವರಲ್ಲಿಯೇ ಸಂಸ್ಕೃತಿಯಿದೆ. ಆದರೆ ದೊಡ್ಡವರಲ್ಲಿ, ಸರಿಯಾಗಿರತಕ್ಕವರಲ್ಲಿ ಸಂಸ್ಕೃತಿ ನಶಿಸಿ ಹೋಗಿರುವುದನ್ನಾದರೂ ಪುನರುಜ್ಜೀವನ ಮಾಡಿ ಯಾರು ಬಡವರಿದ್ದಾರೋ, ಕಷ್ಟದಲ್ಲಿದ್ದಾರೋ ಅಂಥವರ ಸುಖ ದುಃಖಗಳನ್ನಾದರೂ ವಿಚಾರಿಸಿಕೊಳ್ಳುವ ಮನೋಭಾವನೆಯನ್ನು ಉಂಟುಮಾಡಲಿಕ್ಕಾದರೂ ಈ ಸಂಸ್ಕೃತಿ ಪ್ರಸಾರ ಬೇಕಲ್ಲವೇ? ಹೊಟ್ಟೆತುಂಬಿದವರಿಗಾದರೂ ಧರ್ಮಬುದ್ಧಿ, ದೈವಬುದ್ಧಿ ಬರುವಂತೆ ಮಾಡಬೇಕು. ಆ ದೃಷ್ಟಿಯಿಂದರಾದರೂ ಈ ಬೇಡಿಕೆಗೆ ತಾವುಗಳು ಸಮ್ಮತಿಕೊಡಬೇಕೆಂದು ಹೇಳುತ್ತೇನೆ.

ಆ ಮೇಲೆ, ನಮ್ಮ ಪ್ಲಾನುಗಳು ಪ್ರಯೋಜನವಿಲ್ಲ, ಹಿಂದೆ ಮಾಡಿರುವ ಯೋಜನೆಗಳಿಂದ ಏನಾದರೂ ಆಗಿದೆಯೇ ಎಂದು ಕೇಳಿದರು. ಸ್ವರಾಜ್ಯ ಬಂದರೆ ಭೂಲೋಕವೇ ಸ್ವರ್ಗವಾಗುತ್ತದೆಂದು ಅನೇಕ ಸಾರಿ ನಾವೇ ಭಾಷಣಮಾಡಿದೆವು, ನಿಜ. ಏಕೆಂದರೆ, ಆಗಿನ ಕಾಲಕ್ಕೆ ಸ್ವರಾಜ್ಯವೆಂಬುದೇ ಒಂದು ಸ್ವರ್ಗ ಎಂದು ಭಾವಿಸಿದ್ದೆವು; ಸ್ವಾತಂತ್ರ ಬಂದು ಬಿಟ್ಟರೆ ಎಲ್ಲವೂ ಬರುತ್ತದೆ ಎಂಬ ಆಶೆಯಿತ್ತು. ಈಗ ಆ ರೀತಿ ಆಗಿಲ್ಲವಲ್ಲ ಎಂದು disappointment ಆಗುವುದು ಸಹಜ. ಈ ಪ್ರಪಂಚವನ್ನು ಸ್ವರ್ಗಮಾಡುತ್ತೇವೆಂದು ಹೇಳಿ ಈ ಮಂತ್ರಿಗಳು ಬರಲಿ, ಇನ್ನೊಂದು ಮಂತ್ರಿಮಂಡಲ ಬರಲಿ, ಯಾರೇ ಬಂದರೂ ಹೀಗೆಯೇ ಇರುತ್ತದೆ, ಯಾರೂ ಪೂರ್ಣವಾಗಿ perfect ಆಗಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಎದುರು ಪಕ್ಷದ ಸ್ನೇಹಿತರೇನೋ ತಾವು ಬಂದರೆ ಸರಿಮಾಡುತ್ತೇವೆಂದು ಹೇಳಬಹುದು. ಅಷ್ಟು ಜಂಬ ಹೊಡೆದುಕೊಳ್ಳುವುದು ಬೇಡ. ನಮ್ಮಲ್ಲಿ ನಿಜವಾಗಿಯೂ ಕೆಲವು ತೊಂದರೆಗಳಿವೆ. ಕ್ರಮೇಣ ಅದು ಸರಿಹೋಗಬೇಕು. ಒಂದು ವಿಷಯ ತಾವು ಗಮನಿಸಿ, ಕಂದಾಯದ ರೂಪದಲ್ಲಿ ಈಗ 10 ಕೋಟಿ ರೂಪಾಯಿಗಳು ಮಾತ್ರ ಬರುತ್ತಿದೆ ಎಂದು ಹೇಳಬಹುದು. ಏಕೆಂದರೆ ಬಾಕಿ ಉಳಿದಿರುವ 10 ಕೋಟಿ ಬೇರೆ ಸಿಬ್ಬಂದಿ ಮುಂತಾದುವುಗಳಿಗೆ ಹೋಗಿ ವಾಸ್ತವವಾಗಿ ದೇಶದ ಕೆಲಸಗಳಿಗಾಗಿ ಉಳಿಯುವುದು 10 ಕೋಟಿ ಮಾತ್ರ. ಅಲ್ಲಿಗೆ ಸರಾಸರಿ ತಲೆಗೆ 10 ರೂಪಾಯಿ ಕೊಟ್ಟಂತಾಯಿತು. ಹೀಗೆ ಹತ್ತು ರೂಪಾಯನ್ನು ಕೊಟ್ಟು ಪ್ರತಿಯೊಬ್ಬರಿಗೂ ಆಸ್ಪತ್ರೆ, ನೀರು, ಮನೆ, ವಿದ್ಯಾಭ್ಯಾಸ, ಕೆರೆ, ಕಟ್ಟೆ, ಕಾಲುವೆ—ಮುಂತಾಗಿ ಎಲ್ಲವನ್ನೂ ಮಾಡಿಕೊಡಬೇಕೆಂದರೆ ಹೇಗೆ? ಪ್ರತಿಯೊಬ್ಬರೂ ತಾವು ಕಂದಾಯ ಕೊಡಲಿ ಬಿಡಲಿ ಸೌಕರ್ಯಗಳೆಲ್ಲವೂ ಬೇಕೆಂದು demand ಮಾತ್ರ ಮಾಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಬರೀ ದುಡ್ಡಲ್ಲ ಕೊಡುತ್ತಿರುವುದು. ಅವರು contribute ಮಾಡುವ labour ಲೆಕ್ಕಕ್ಕಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯ.—ಇದೆ. ಆದರೂ ತಾವು ಇತರ ದೇಶಗಳ ಉದಾಹರಣೆ ತೆಗೆದುಕೊಂಡರೆ ಅರ್ಥವಾಗುತ್ತದೆ. ನಮ್ಮಲ್ಲಿ ಒಂದು ಕೋಟಿ ಜನರು ಸೇರಿ 10 ಕೋಟಿ ರೂಪಾಯಿಗಳನ್ನುಕೊಟ್ಟರೆ ಇಂಗ್ಲೆಂಡಿನಲ್ಲಿ 4 ಕೋಟಿ ಜನರು ಒಟ್ಟು 3,000 ಕೋಟಿ ಪೌಂಡುಗಳನ್ನು ಕೊಡುತ್ತಾರೆ! ಅದೇ ಅಮೇರಿಕಾ ದೇಶದಲ್ಲಿ ಸರಾಸರಿ ಒಬ್ಬ ಪ್ರಜೆ 1,500 ಡಾಲರುಗಳನ್ನು ಕೊಡುತ್ತಾನೆ. ಹಣ ಹೆಚ್ಚಿಗೆಯಿದ್ದರೆ ಏನು ಬೇಕಾದರೂ ಮಾಡಬಹುದು. ಆದರೆ ನಮ್ಮದು ಬಡತನದ ದೇಶ. ನಮ್ಮ ಬಡತನ ನಮಗೆ ಗೊತ್ತಿದೆ. ಆದ್ದರಿಂದ ಬರೀ ಜಂಬ ಹೊಡೆದುಕೊಂಡರೆ ಪ್ರಯೋಜನವಿಲ್ಲ. ಇಂಗ್ಲಿಷಿನವರು ನಮ್ಮ ದೇಶದಲ್ಲಿರುವವರೆಗೂ ನಮ್ಮನ್ನು ಹೀರಿ ನಮ್ಮನ್ನು ಬಡತನದಲ್ಲಿ ಮುಳುಗಿಸಿದರು. ಅವರನ್ನೀಗ ಕಳುಹಿಸಿದ ಮೇಲೆ ನಾವು ನಮ್ಮ ದೇಶವನ್ನು ಕಟ್ಟಬೇಕೆಂಬ ಆಸೆಯಿಂದ ಕೇಂದ್ರ ಸರ್ಕಾರದವರೊಡನೆ ಸೇರಿ ಈ ಪಾಂಚವಾರ್ಷಿಕ ಯೋಜನೆಯನ್ನು ಮಾಡಿದ್ದೇವೆ. ಇದಕ್ಕೆ ತಾವುಗಳೆಲ್ಲರೂ ಸಹಕಾರ ನೀಡಬೇಕಾದ್ದು ಯುಕ್ತ. ಅನೇಕ ತಜ್ಞರೂ ಮೇಧಾವಿಗಳೂ ಸೇರಿಕೊಂಡು ಆದಷ್ಟು ಉತ್ತಮವಾಗಿ ಇದನ್ನುಮಾಡಿದ್ದಾರೆ. ಇದಕ್ಕಿಂತ ಉತ್ತಮವಾದದ್ದು ತಮ್ಮಲ್ಲಿ ಯಾವುದಾದರೂ ಯೋಜನೆಯಿದ್ದರೆ ಅದನ್ನಾದರೂ ತನ್ನಿ, ಅದನ್ನೇ ಕಾರ್ಯಗತಮಾಡೋಣ; ನಮ್ಮದೇನೂ ಅಭ್ಯಂತರವಿಲ್ಲ.

Sri J. MOHAMED IMAM.—We are not free to work out a special Plan for our State.

Sri T. SIDDALINGAIYA.—This is democracy. We are in the majority and therefore we are in power.

Sri J. MOHAMED IMAM.—I meant the State is not free to adopt its own plan.

Sri A. G. RAMACHANDRA RAO.—It can have a supplementary plan.

ಶ್ರೀ ಟಿ. ಸಿದ್ದಲಿಂಗಯ್ಯ.—ಮೈಸೂರು ಸರ್ಕಾರದವರು ತಯಾರಿಸಿರುವ ಐದು ವರ್ಷದ ಯೋಜನೆ ಕೂಡ ಇದೆ. ಅದನ್ನು ಶ್ರೀ ಇಮಾಂರವರು ನೋಡಿದ್ದಾರೆ. ನಾವು ಬೇಕಾದರೆ ಅದನ್ನು ಸ್ವಲ್ಪ ಮಾರ್ಪಾಡು ಮಾಡಿಕೊಳ್ಳಬಹುದು. ಬೇರೆ ಇನ್ನಾವ ಒಂದು ಯೋಜನೆಯೂ ಇಲ್ಲದೇಯಿರುವಾಗ ಬರೀ ಕಣ್ಣುಕಣ್ಣು ಬಿಡುತ್ತಾ ದಿಕ್ಕು ತೋರದೆ ಇರುವುದಕ್ಕಿಂತ ಒಂದು ಯೋಜನೆ ಮಾಡಿಕೊಂಡು ಕೆಲಸ ಮಾಡುವುದು ಒಳ್ಳೆಯದಲ್ಲವೆ ? ಬೇರೆ ದೇಶಗಳವರೂ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ಬೇರೆ ಯಾರಾದರೂ ಇದಕ್ಕಿಂತ ಇನ್ನೂ ಒಳ್ಳೆಯ ಯೋಜನೆಯನ್ನು ತಯಾರು ಮಾಡಿ ತಂದರೆ ಅದನ್ನು ತೆಗೆದುಕೊಳ್ಳೋಣ. ಈಗ ಸದ್ಯದಲ್ಲಿ ಇದ್ದುದರಲ್ಲಿ ಉತ್ತಮವಾದ ಒಂದು ಯೋಜನೆಯನ್ನು ತಯಾರುಮಾಡಿದ್ದಾರೆ. ಈ ಪ್ರಜಾಸತ್ತೆಯಿರುವ ಪರಿಸ್ಥಿತಿಯಲ್ಲಿ, under Democracy this is the best possible plan.

ಆದುದರಿಂದ ಯಾರೂ ಒಂದು ರೀತಿಯ prejudice ಇಡಬೇಕಾಗಿಲ್ಲ. ನಾವು ಇಷ್ಟೊಂದು ಜನರಿದ್ದೇವೆ ಈ ಸಭೆಯಲ್ಲಿ; ನನ್ನ ಪಕ್ಕದಲ್ಲೇ ಮಂತ್ರಿಗಳಿದ್ದಾರೆ, ಅವರ ಪಕ್ಕದಲ್ಲೇ ಇನ್ನೊಬ್ಬರಿದ್ದಾರೆ; ಹೀಗೆ ಪಕ್ಕಪಕ್ಕದಲ್ಲಿ ಕುಳಿತಿದ್ದರೂ ಒಬ್ಬರ ಹೃದಯವಿರುವಂತೆ ಇನ್ನೊಬ್ಬರ ಹೃದಯವಿರುವುದಿಲ್ಲ, ಒಬ್ಬರ ಮನೋಧರ್ಮವಿರುವಂತೆ ಇನ್ನೊಬ್ಬರದಿರುವುದಿಲ್ಲ. ಮನುಷ್ಯರಲ್ಲಿ ಹೀಗಿರುವುದು ಸಾಧ್ಯವಿಲ್ಲ. ಯಂತ್ರಗಳಿಂದ ಮಾಡಲ್ಪಟ್ಟ ವಸ್ತುಗಳಾದರೆ ಹಾಗೆ ಒಂದೇ ರೀತಿ ಇರಬಹುದಾಗಿತ್ತು. ಆದರೂ ಎಷ್ಟರಮಟ್ಟಿಗೆ ಪರಸ್ಪರ ಹೊಂದಿಕೊಂಡು ಬರಬಹುದೋ ಅಷ್ಟರಮಟ್ಟಿಗೆ ಹೊಂದಿಕೊಂಡು ನಾವು ನಮ್ಮ ದೇಶವನ್ನು ಕಟ್ಟಬೇಕು. 2,069 ಕೋಟಿ ರೂಪಾಯಿಗಳ ಯೋಜನೆಯಿದು. ಈಗಾಗಲೇ ಎರಡು ವರ್ಷ ಕಳೆದುಹೋಯಿತು. ಇನ್ನುಳಿದ ಮೂರು ವರ್ಷಗಳಲ್ಲಿ ಇನ್ನೂ ಹೆಚ್ಚುಮಾಡಬೇಕಾಗಿದೆ; ಈ ರೀತಿ ಆಗಲು ಎಲ್ಲರೂ ಪ್ರೋತ್ಸಾಹ ಕೊಡಬೇಕು. ದೇಶದಲ್ಲೆಲ್ಲ ಉತ್ಸಾಹ ಬರಬೇಕು ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಬರಿಯ ಹಣದಿಂದ ಕೆಲಸವಾಗುವುದಿಲ್ಲ. ಯಾವಾಗ ಜನರಲ್ಲಿ ಇದು ನಮ್ಮ ದೇಶ, ನಮ್ಮ ಕೆಲಸ ಎಂಬ ಅಭಿಮಾನವಿರುವುದಿಲ್ಲವೋ ಆಗ ಈ ಮೂರು ವರ್ಷ, ಈ 2069 ಕೋಟಿ ರೂಪಾಯಿ ಎಲ್ಲವೂ ವ್ಯರ್ಥವಾಗಿ ಕೊಚ್ಚಿ ಹೋಗಬಹುದು. ದೇಶಕ್ಕೆ ಇನ್ನೂ ಬಡತನಬರಬಹುದು. ನಮ್ಮಲ್ಲಿ ಉತ್ಸಾಹವಿಲ್ಲದೇ ಹೋದರೆ our country will become poor by the five-year plan. ಬೇರೆ ಮಾರ್ಗವೇ ಇಲ್ಲದಿರುವಾಗ, ಬೇರೆ ಯಾವುದೊಂದು ಯೋಜನೆಯೂ ಇಲ್ಲದೇ ಯಿರುವಾಗ ಇದನ್ನು ಹಗುರವಾಗಿ ಕಾಣಬಾರದು. ಸುಮ್ಮನೆ ತಮಾಷೆಮಾಡಬಾರದು. ಮಧ್ಯೆ ತಮಾಷೆ ಮಾಡೋಣ, ಆದರೆ ಇಂಥ ಮುಖ್ಯ ವಿಚಾರದಲ್ಲಲ್ಲ This is an unhappy world. ಐದು ಸಾವಿರ ವರ್ಷಗಳಿಂದಲೂ, ನಮ್ಮ ದೇಶದ ಚರಿತ್ರೆಯನ್ನು ತೆಗೆದುಕೊಂಡು ನೋಡಿದರೆ, ಯಾವ ರಾಜ್ಯವೂ ಕೂಡ ಪೂರ್ಣವಾಗಿ ಸುಖವಾಗಿರಲಿಲ್ಲ. ರಾಮನ ಕಾಲದಲ್ಲಿ ಕೂಡ ಭಿಕ್ಷೆಬೇಡುವವರಿದ್ದರು. ಇದನ್ನು ಮರೆತು ನಾವೆಲ್ಲ ದೇವತೆಗಳಾಗುತ್ತೇವೆ, ಇಲ್ಲಿ ಸ್ವರ್ಗವನ್ನೇ ಸೃಷ್ಟಿಮಾಡುತ್ತೇವೆ ಎನ್ನುವ ಹೆಮ್ಮೆ ನಮಗೆ ಬೇಡ. ನಾವು ವಿನಯದಿಂದ, ನಮ್ರಭಾವನೆಯಿಂದ ದೇಶಕ್ಕೆ ಸಮಾಜಕ್ಕೆ ಎಷ್ಟು ಸೇವೆ ಮಾಡಬಹುದೋ ಅಷ್ಟನ್ನು ಮಾಡೋಣ ಎಂಬ ಭಾವನೆಯಿಂದ ಎಲ್ಲರೂ ಒಂದಾಗಿ ಕೆಲಸ ಮಾಡೋಣ. ಈ ಯೋಜನೆಯ ವಿಷಯದಲ್ಲಿ ಎಲ್ಲರೂ ಸಹಕಾರ ತೋರದೇ ಹೋದರೆ ನಮ್ಮ ದೇಶಕ್ಕೆ ಇನ್ನೂ ಬಡತನ ಬರುತ್ತದೆ.

ಶ್ರೀ ಜೆ. ಮಾಹಮ್ಮದ್ ಇಮಾಂ.—ಯಾವ ರೀತಿಯ ಸಹಕಾರ ?

ಶ್ರೀ ಟಿ. ಸಿದ್ದಲಿಂಗಯ್ಯ.—ಎಲ್ಲಾ ರೀತಿಯಲ್ಲೂ, ಹಣ ಒಂದೇ ಮುಖ್ಯವಲ್ಲ. ಹಣವನ್ನು ಸರ್ಕಾರದವರು ಹೇಗೋ ಒದಗಿಸುತ್ತಾರೆ. ಸರ್ಕಾರದವರು ಪುಸ್ತಕಗಳನ್ನು ಮುದ್ರಿಸಿ ಬೆನ್ನಮೇಲೆ ಹೊರಿಸುತ್ತಾರೆ ಎಂದು ತಿಳಿದುಕೊಂಡರೆ, ಅದು ಬರಿಯ ಪುಸ್ತಕವೇ ಆಗುತ್ತದೆ; ಪುಸ್ತಕದ ಬದನೇಕಾಯಿ ಆಗುತ್ತದೆ. ದೇಶದ ಐಶ್ವರ್ಯವಿರುವುದು ಬರಿಯ ಖಜಾನೆಯಲ್ಲಲ್ಲ, ಮೈಸೂರು ಬ್ಯಾಂಕಿನಲ್ಲಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ, ಲೇಬರ್ ಮುಖ್ಯ. ಇದರಲ್ಲಿ ನಿರುದ್ಯೋಗ ಪರಿಹಾರವಾಗುತ್ತದೆ. ಈ ಯೋಜನೆಗೆ ಹಾಕುವ 2069 ಕೋಟಿ ರೂಪಾಯಿ ಎಲ್ಲಿಯೂ ಹೋಗುವುದಿಲ್ಲ. ಅದನ್ನು ನಮ್ಮ ಜನರಿಗೇ ಹಂಚುತ್ತಾರೆ. ಎಲ್ಲರೂ ಸಹಕರಿಸಿ ತಮ್ಮ ಶಕ್ತಿಯನ್ನು ಕೊಡುವುದಾದರೆ, ನಮ್ಮ ದೇಶದ ಬಡತನ ಹೋಗುತ್ತದೆ, ಆಹಾರ ಸಮಸ್ಯೆ ಪರಿಹಾರವಾಗುತ್ತದೆ, ನಿರುದ್ಯೋಗ ಪರಿಹಾರವಾಗುತ್ತದೆ, ಹೀಗೆ ನಮ್ಮ ದೇಶದಲ್ಲಿರುವ ಅನೇಕ ಕುಂದುಕೊರತೆಗಳು ಹೋಗುತ್ತವೆ. ನಮ್ಮಲ್ಲಿ ಹಣ ಒದಗಿದೆ, ಕೆಲಸಮಾಡುವ ಮನುಷ್ಯರಿದ್ದಾರೆ. ಎಲ್ಲರೂ ಒಮ್ಮನಸ್ಸಿನಿಂದ ಒಂದುಗೂಡಿ ಮಾಡಬೇಕು. ಈಗ ಬೇಕಾಗಿರುವುದು ಹೃತ್ಪೂರ್ವಕವಾದ ಎಲ್ಲರ ಸಹಾಯ, ಸಹಕಾರ ಮತ್ತು ಒಗ್ಗಟ್ಟು. ಇವಿಲ್ಲದಿದ್ದರೆ ಯಾವ ಯೋಜನೆಯೂ ಫಲದಾಯಕವಾಗುವುದಿಲ್ಲ; ಏನುಮಾಡಿದರೂ ದೇಶ ಉದ್ಧಾರವಾಗುವುದಿಲ್ಲ. ಟೀಕೆ ಮಾಡಬೇಕೆಂದರೆ, ಬಹಳ ಸುಲಭವಾಗಿ ಮಾಡುತ್ತಾರೆ; ಇದು ನಮ್ಮ ದೇಶದ ದೌರ್ಭಾಗ್ಯವೋ ಅಥವಾ ನಮ್ಮ ದೇಶಕ್ಕೆ ಶಾಪವೋ ? ಯಾರು ಏನು ಕೆಲಸ ಮಾಡಿದರೂ ಒಪ್ಪುವುದಿಲ್ಲವೆಂದು ಹೇಳಿದರೆ, ದೇಶ ಕೆಟ್ಟುಹೋಗುತ್ತದೆ. ಮಹಾರಾಜರ ಒಂದು ಸಂದೇಶ ಎಂದು ಅವರ ಹೆಸರನ್ನು ಹೇಳಿ, ಎಲ್ಲರೂ ಒಪ್ಪಿ ಎಂದು ನಾನು ಹೇಳುವುದಿಲ್ಲ. ಈಗ ಮಹಾರಾಜರು ನಮ್ಮ ರಾಜ್ಯಾಂಗದ ಮಹಾರಾಜರು. ದೇಶದ ಉದ್ಧಾರ ದೃಷ್ಟಿಯಿಂದ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಅವರು ಹೇಳಿರುವ ಪ್ರತಿಯೊಂದು ವಿಷಯದಲ್ಲಿಯೂ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳಬಹುದು. ಭಿನ್ನಾಭಿಪ್ರಾಯವಿರಬಹುದು, honest differences ಇರಬಹುದೇ ವಿನಾ cantankerous criticism ಇರಬಾರದು. ಯಾರಿಗೆ ಭಿನ್ನಾಭಿಪ್ರಾಯವಿತ್ತೋ ಅವರು ಮನಸ್ಸನ್ನು ಬಿಚ್ಚಿ ಹೇಳಿದ್ದಾರೆ. ಇನ್ನೂ ಐದು ವರ್ಷದ ಯೋಜನೆಯ ಮೇಲಿನ ಚರ್ಚೆಗೆ ಒಂದು ದಿವಸ ಅವಕಾಶವಿದೆ, ಬಡ್ಜೆಟ್ ಭಾಷಣಗಳನ್ನು ಮಾಡುವುದಕ್ಕೆ ಅವಕಾಶವಿದೆ, ವಿದ್ಯಾಸುಧಾರಣೆಗಳ ಮೇಲೆ ಮಾತನಾಡಲು ಅವಕಾಶವಿದೆ, ಸಂಸ್ಕೃತಿ ಪ್ರಸಾರದ ವಿಷಯದಲ್ಲಿ ಮಾತನಾಡಲು ಅವಕಾಶವಿದೆ. ಆದರೆ ಈ ಭಾಷಣದ ವಿಷಯದಲ್ಲಿ ಮಾತ್ರ, ನಾನು ವಿನಯದಿಂದ ಹೇಳುತ್ತೇನೆ, ಭಿನ್ನಾಭಿಪ್ರಾಯಕ್ಕೆ ಅವಕಾಶವೇನೂ ಇಲ್ಲ. ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯವಿರುತ್ತದೆ, ಇರಲಿ. ಆದರೆ Constitutional Head ಆಗಿರುವವರು ಮಾಡಿರುವ ಭಾಷಣಕ್ಕಾಗಿ ಅವರಿಗೆ ವಂದನೆಗಳನ್ನು ಕೊಡುವುದರಲ್ಲಿ ಅಭ್ಯಂತರವಿಲ್ಲ. ಅವರಿಗೆ ನಮ್ಮ

(ಶ್ರೀ ಟಿ. ಸಿದ್ಧಲಿಂಗಯ್ಯ.)

ಭಿನ್ನಾಭಿಪ್ರಾಯಗಳು ಹೋಗಬೇಕಾಗಿಲ್ಲ. ಒಗ್ಗಟ್ಟಿನಿಂದ ಕೆಲಸಮಾಡುತ್ತಿದ್ದೇವೆ ಎಂಬ ವಿಷಯ ಅವರಿಗೆ ಹೋಗಲಿ. ಆದುದರಿಂದ ಶ್ರೀಗಳಾದ ಪಟ್ಟಾಭಿರಾಮನ್‌ರವರೂ, ಇಮಾಂರವರೂ, ಲಿಂಗಣ್ಣನವರೂ ಅವರ ತಿದ್ದುಪಡಿಗಳನ್ನು ವಾಪಸು ತೆಗೆದುಕೊಂಡು, ಎಲ್ಲರೂ ಸೇರಿ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಲು ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri J. MOHAMED IMAM.—I press my amendment, Sir.

Mr. SPEAKER.—The question is:

'Add the following at the end of the motion of thanks:—

"but regret that your Highness's Address while clearly revealing the gravity of the financial situation and the danger of further crushing burdens of taxation on the people, gives no assurance of administrative competence on the part of Your Highness's Government which is busy with partisan policies or of measures necessary to give relief to the people from their ever-increasing hardships." '

The motion was negatived.

Mr. SPEAKER.—There are three more amendments—two by Sri K. Pattabhiraman and one by Sri M. Linganna.

Sri K. PATTABHIRAMAN.—Sir, I do not propose to press my amendments; I beg leave to withdraw them.

The amendments were, by leave, withdrawn.

Sri M. LINGANNA.—I beg leave to withdraw my amendment, Sir.

The amendment was, by leave, withdrawn.

Mr. SPEAKER.—The question is:

'That an Address be presented to His Highness the Maharaja in the following terms:

"May it please Your Highness:—

We, the members of the Mysore Legislative Assembly assembled in this Session, beg leave to thank Your Highness for the address delivered to the members of both Houses of the Legislature." '

The motion was adopted.

Mr. SPEAKER.—The House will now adjourn to meet again tomorrow at Twelve of the Clock.

The Assembly adjourned at Fifty Minutes past Five of the Clock to meet again on Thursday, the 12th March 1953 at Twelve of the Clock.